ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 10 ಭಾನುವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 321 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

SHRADHANJALI



VASU

Former MLA, Chamaraja Constituency,
Founder Chairman, Vidya Vikas Educational Trust

"You live in our hearts forever"

Sri Harish Kumar Hegde, Smt. Jayapadma Hegde, Sri. Abhishek Hegde
Smt. Monisha Hegde, Sri. Abhijith Hegde Staff of Hotel Airlines, Shubodini
Convention Centre, Naksha Honda, More Mega Store, Hegde Developers

ಕೈಲಾಸ ಶಿವಗಣಾರಾಧನೆ



ಜನನ
03–10–1945

ಮರಣ:
01–03–2024

ಶ್ರೀ ಎಂ. ಶಿವಮಲ್ಲಪ್ಪನವರು

ಮಾಜಿ ಅಧ್ಯಕ್ಷರು, ಎ.ಪಿ.ಎಂ.ಸಿ, ಚಾಮರಾಜನಗರ

ಚಾಮರಾಜನಗರ ತಾಲ್ಲೂಕು, ಮಾದಾಪುರ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಶ್ರೀಮತಿ ಗೌರಮ್ಮ ಮತ್ತು ಲೇಟ್ ಶ್ರೀ ದೊಡ್ಡಚಿನ್ನಸ್ವಾಮಪ್ಪನವರ ಮಗ ಶಿವೈಕ್ಯ ಶ್ರೀ ಎಂ. ಶಿವಮಲ್ಲಪ್ಪನವರ ಧರ್ಮಪತ್ನಿ **ಶ್ರೀಮತಿ ಅನ್ನಪೂರ್ಣ (ಪಚ್ಚಮ್ಮ) ರವರು** ಮಾಡುವ ಶರಣು ಶರಣಾರ್ಥಿಗಳು. ದಿನಾಂಕ 01–03–2024 ನೇ ಶುಕ್ರವಾರ ನನ್ನ ಪೂಜ್ಯ ಪತಿಯವರಾದ **ಶ್ರೀ ಎಂ. ಶಿವಮಲ್ಲಪ್ಪನವರು** ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ 11–03–2024ನೇ ಸೋಮವಾರ ಬೆಳಗ್ಗೆ 9.30ಕ್ಕೆ ಸುಕ್ಷೇತ್ರ ಶ್ರೀ ಮಲ್ಲನಮೂಲೆ ಮಠಾಧ್ಯಕ್ಷರಾದ **ಶ್ರೀ ನಿ.ಪ್ರ.ಸ್ವ ಶ್ರೀ ಚನ್ನಬಸವಮಹಾಸ್ವಾಮಿಗಳವರ** ದಿವ್ಯಪಾದಪೂಜೆ ಮತ್ತು ಮಧ್ಯಾಹ್ನ 12.00 ಗಂಟೆಗೆ **ಕೈಲಾಸ ಶಿವಗಣಾರಾಧನೆಯನ್ನು** ನಮ್ಮ ಸ್ವಗೃಹ ಮಾದಾಪುರದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಶಿವೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು: ಶಿವೈಕ್ಯರ ಧರ್ಮಪತ್ನಿ ಶ್ರೀಮತಿ ಅನ್ನಪೂರ್ಣ (ಪಚ್ಚಮ್ಮ)
ಮಕ್ಕಳಾದ ಶ್ರೀ ದಿನೇಶ್, ಮಾಲೀಕರು, ನಂದಿ ಗ್ರೂಪ್ಸ್ ಹಾಗೂ ನಂದಿ ಭವನ, ಶ್ರೀ ಶಂಕರ್, ವಿತರಕರು, ರಾಮ್‌ಕೊ ಸಿಮೆಂಟ್, ಶ್ರೀಮತಿ ರೂಪ ಮಹದೇವಪ್ರಸಾದ್, ಮಾಲೀಕರು, ಶಿವಕುಮಾರ ಸ್ವಾಮಿ ಭವನ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಬಂಧುಮಿತ್ರರು ಹಾಗೂ ಗ್ರಾಮಸ್ಥರು

ಆಹ್ವಾನಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ತಿಳಿದು ಮನ್ನಿಸಿ ಆಗಮಿಸಬೇಕಾಗಿ ವಿನಂತಿ.



ಚುನಾವಣಾ ಘೋಷಣೆ ನಂತರ ಹೊಸ ಕಾಮಗಾರಿ ಪ್ರಾರಂಭಿಸುವಂತಿಲ್ಲ

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ


ಡಾ.ಕೆ.ವಿ.ರಾಜೇಂದ್ರ

ಮೈಸೂರು, ಮಾ.9– ಚುನಾವಣಾ ಘೋಷಣೆಯಾದ ನಂತರ ಯಾವುದೇ ಹೊಸ ಕಾಮಗಾರಿಗಳನ್ನು ಪ್ರಾರಂಭಿಸುವಂತಿಲ್ಲ. ಪ್ರಸ್ತುತ ಪ್ರಾರಂಭಗೊಂಡು ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಮಾತ್ರ ನಡೆಸಬಹುದಾಗಿರುತ್ತದೆ. ಪ್ರಸ್ತುತ ಪ್ರಾರಂಭಗೊಂಡು ಚಾಲ್ತಿಯಲ್ಲಿರುವ ಹಾಗೂ ಘೋಷಣೆ ಮಾಡಲು ಬಾಕಿ ಇರುವ ಕಾಮಗಾರಿಗಳ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿಯ ಡಿ.ದೇವರಾಜ ಅರಸು ಸಭಾಂಗಣದಲ್ಲಿ ನಡೆದ ಚುನಾವಣಾ ಮಾದರಿ ನೀತಿ ಸಂಹಿತೆ ಹಾಗೂ ಲೋಕೋಪಯೋಗಿ, ನೀರಾವರಿ, ಚೆಸ್ಕಾಂ ಹಾಗೂ ವಿವಿಧ ತಾಂತ್ರಿಕ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಚುನಾವಣೆ ಘೋಷಣೆಯಾದ 24 ಗಂಟೆಗಳಲ್ಲಿ ಸರ್ಕಾರಿ ಕಚೇರಿ ಕಟ್ಟಡ ಸ್ಥಳಗಳಲ್ಲಿ, 48 ಗಂಟೆಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ 72 ಗಂಟೆಗಳಲ್ಲಿ ಖಾಸಗಿ ಕಟ್ಟಡ ಅಥವಾ ಸ್ಥಳಗಳಲ್ಲಿ ಇರುವ ಅನಧಿಕೃತ ಫ್ಲೆಕ್ಸ್, ಬ್ಯಾನರ್, ಪೋಸ್ಟರ್‌ಗಳನ್ನು ತೆರವುಗೊಳಿಸಬೇಕು ಎಂದು ತಿಳಿಸಿದರು.

ಎಲ್ಲಾ ಮತದಾರರು ಹಾಗೂ ಅಧಿಕಾರಿಗಳು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಕುರಿತು ಪರಿಶೀಲಿಸಿ ಕೊಳ್ಳಬೇಕು. ಚುನಾವಣೆಯ ದಿನದಂದು ಅಧಿಕಾರಿಗಳು ಅಥವಾ ಸಿಬ್ಬಂದಿಗಳು ಅವಶ್ಯಕತೆ ಇರುವ ಪೋರ್ಟಲ್ ಅಥವಾ ಎಲೆಕ್ಷನ್ ಡ್ಯೂಟಿ ಸರ್ಟಿಫಿಕೇಟ್‌ಗೆ ನಿಗದಿತ ನಮೂನೆಯಲ್ಲಿ ಮನವಿ ಸಲ್ಲಿಸಬೇಕು ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕೆ.ಎಂ.ಗಾಯಿತ್ರಿ ಎಂ.ಸಿ.ಸಿ ಆಯುಕ್ತ, ಮುಡಾ ಆಯುಕ್ತ, ಜಿಲ್ಲೆಯ ಎಲ್ಲಾ ಸಹಾಯಕ ಚುನಾವಣಾ ಅಧಿಕಾರಿಗಳು ಹಾಗೂ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಾಳೆ ರೈತರಿಂದ ಪಂಜಿನ ಮೆರವಣಿಗೆ


ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಈ ವೇಳೆ ಬರಡನಪುರ ನಾಗರಾಜ್, ನೀಲಕಂಠಪ್ಪ, ಲಕ್ಷ್ಮಿಪುರ ವೆಂಕಟೇಶ್, ದೇವನೂರು ವಿಜಯೇಂದ್ರ ಇನ್ನಿತರರಿದ್ದರು.

ಮೈಸೂರು, ಮಾ.9(ಬಿಎಲ್‌ಯು)– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ ದೆಹಲಿಯಲ್ಲಿ ನಡೆಸುತ್ತಿರುವ ಹೋರಾಟ ಬೆಂಬಲಿಸಿ ಮಾರ್ಚ್ 12 ರಂದು ರಾಜ್ಯಾದ್ಯಂತ ಪಂಜಿನ ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಾ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಯಲಿದ್ದು, ಅಂದಿನ ಪಂಜಿನ ಪ್ರತಿಭಟನೆಯನ್ನು ರೈತರು ಆಕ್ರೋಶದ ದಿನವಾಗಿ ಆಚರಿಸಲಿದ್ದಾರೆ ಎಂದರು.

ಹೋರಾಟದ ಮುಂದಿನ ಭಾಗವಾಗಿ ಮಾರ್ಚ್ 15ರಂದು ಧಾರವಾಡದಲ್ಲಿ ಟ್ರ್ಯಾಕ್ಟರ್ ರ‍್ಯಾಲಿ ನಡೆಸಿ ತೀವ್ರ ರೀತಿಯ ಹೋರಾಟಕ್ಕೆ ಅಡಿ ಇಡಲಾಗುವುದು ಎಂದು ಕುರುಬೂರು ಶಾಂತಕುಮಾರ್ ತಿಳಿಸಿದರು.

ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ನಿಗದಿ ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಪಂಜಾಬ್, ಹರಿಯಾಣ ಸೇರಿದಂತೆ ಇತರೆ ರಾಜ್ಯದ ರೈತರು ಪ್ರತಿಭಟನೆ ನಡೆಸುತ್ತಿದ್ದರೆ, ಸರ್ಕಾರ ಪೊಲೀಸ್ ಬಲದಿಂದ ಹೋರಾಟ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದರು.

ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ರೈತ ಪ್ರತಿನಿಧಿಗಳ ಜೊತೆ ನಾಲ್ಕು ಸಭೆ ನಡೆಸಿದ ಸರ್ಕಾರ ನುಡಿದಂತೆ ನಡೆಯದೆ ರೈತ ವಿರೋಧಿ ಧೋರಣೆ ತಳೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬರಗಾಲದ ಹಿನ್ನೆಲೆ ರೈತರು ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಈ ಹಿನ್ನೆಲೆ ಬ್ಯಾಂಕ್, ಸಹಕಾರ ಸಂಘಗಳು ಸೇರಿದಂತೆ ಇತರೆ ಸಂಘ ಸಂಸ್ಥೆಗಳಿಂದ ಬಲವಂತದ ಸಾಲ ವಸೂಲಾತಿ ಮಾಡದಂತೆ ಆದೇಶ ನೀಡಬೇಕು. ಕುಡಿಯುವ ನೀರಿನ ಸಮಸ್ಯೆ ಪರಿಹಾರ ಮಾಡುವ ನಿಟ್ಟಿನಲ್ಲಿ ಸಮರೋಪಾದಿ ಪರಿಹಾರ ಕಲ್ಪಿಸುವಂತೆ ಕುರುಬೂರು ಶಾಂತಕುಮಾರ್ ಸರ್ಕಾರವನ್ನು ಆಗ್ರಹಿಸಿದರು.

ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಜಿಲ್ಲಾ ಉಪಾಧ್ಯಕ್ಷ ನೀಲಕಂಠಪ್ಪ,ತಾಲೂಕು ಅಧ್ಯಕ್ಷರಾದ ಲಕ್ಷ್ಮಿಪುರ ವೆಂಕಟೇಶ್, ದೇವನೂರು ವಿಜಯೇಂದ್ರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

50 ಲಕ್ಷಗಳ ಪ್ರೋತ್ಸಾಹಧನಕ್ಕೆ ಮೈಸೂರು ವಿವಿ ಆಯ್ಕೆ



ಮೈಸೂರು, ಮಾ.9– ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ಉನ್ನತ ಶಿಕ್ಷಣ ಇಲಾಖೆಯಡಿ ಬರುವ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿನ ಉತ್ತಮ ಆಡಳಿತ ಸುಶಾಸನಗಳಿಗೆ ಸಂಬಂಧಿಸಿದಂತೆ ಮಾಡಿರುವ ಉತ್ತಮ ಸಾಧನೆಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಪ್ರಸ್ತುತಪಡಿಸಿದ ಪ್ರಸ್ತಾವನೆಗಳನ್ನು ಮೌಲ್ಯಮಾಪನ ಮಾಡಲಾಗಿದೆ.

ಈ ಮೌಲ್ಯಮಾಪನದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು "University Provided Highest Employability/Best Placement Services including Affiliated Colleges" ಸುಶಾಸನ ಅಡಿಯಲ್ಲಿ 50 ಲಕ್ಷಗಳ ಪ್ರೋತ್ಸಾಹ ಧನಕ್ಕೆ ಆಯ್ಕೆಯಾಗಿದೆ.

ಇಂದು ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಿಂದ ಮ್ಯಾರಥಾನ್

ಮೈಸೂರು, ಮಾ. 9– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್ ವತಿಯಿಂದ ನಾಳೆ (ಮಾ. 10) ಬೆಳಗ್ಗೆ

nexus CENTRE CITY

6.30ಕ್ಕೆ ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮ ಮಹಿಳೆಯರ ಸಬಲೀಕರಣ ಮತ್ತು ಫಿಟ್‌ನೆಸ್ ಮತ್ತು ಸಮುದಾಯದ ಮೂಲಕ ಲಿಂಗ ಸಮಾನತೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಮ್ಯಾರಥಾನ್‌ಗೆ ನೋಂದಣಿ ಸಂಪೂರ್ಣವಾಗಿ ಉಚಿತವಾಗಿದೆ. ಭಾಗವಹಿಸಲು ಎಲ್ಲಾ ವಯಸ್ಸಿನ ವ್ಯಕ್ತಿಗಳನ್ನು ಸ್ವಾಗತಿಸುತ್ತಿದೆ. ಪ್ರತಿ ವಿಭಾಗದಲ್ಲಿ ಪುರುಷ ಮತ್ತು ಮಹಿಳಾ ವಿಜೇತರಿಗೆ ಬಹುಮಾನಗಳನ್ನು ನೀಡಲಾಗುವುದು.


ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪುರಸ್ಕೃತರಾದ ಮೈಸೂರು ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಸನ್ಮಾನಿಸಿದರು. ಕೆ.ಆರ್.ಯೋಗನರಸಿಂಹನ್, ಕೆ.ಆರ್.ಸತ್ಯನಾರಾಯಣ, ಶಂಕರನಾರಾಯಣ, ಎಂ.ವೆಂಕಟೇಶ್, ಡಾ.ಲಕ್ಷ್ಮೀದೇವಿ, ಸೌಭಾಗ್ಯ ಮೂರ್ತಿ, ಹೇಮಲತಾ, ಶಾಂತ ಸೋಮಶೇಖರ್, ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಇದ್ದಾರೆ.



ಸಂಸದ ಪ್ರತಾಪ್ ಸಿಂಹ ಅವರನ್ನು ಮೈಸೂರು ನಗರ ಬಿಜೆಪಿ ಎಸ್‌ಟಿ ಮೋರ್ಚಾ ನೂತನ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ನಾರಾಯಣ ಲೋಲಪ್ಪ, ಸುಣ್ಣದಕೇರಿ ಕೃಷ್ಣಕುಮಾರ್‌ನಾಯಕ ಆತ್ಮೀಯವಾಗಿ ಅಭಿನಂದಿಸಿದರು.

ಟಿಸಿಎಸ್ ಟೆಕ್ ಬೈಟ್ಸ್ 15ನೇ ಆವೃತ್ತಿ ರಸಪ್ರಶ್ನೆ

ಮೈಸೂರು,ಮಾ.9–ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮತ್ತು ಬೋರ್ಡ್ ಫಾರ್ ಐಟಿ ಎಜುಕೇಶನ್ ಸ್ಟಾಂಡರ್ಡ್ಸ್ (ಬೈಟ್ಸ್), ಐಟಿ ಉದ್ಯಮಗಳು ಮತ್ತು ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ 15ನೇ ಆವೃತ್ತಿಯ ಎಂಜಿನಿಯರಿಂಗ್ ಐಟಿ ರಸಪ್ರಶ್ನೆ ಘೋಷಿಸಿದೆ. ಕರ್ನಾಟಕದ ಎಲ್ಲಾ ಸ್ಟ್ರೀಮ್‌ಗಳು ಮತ್ತು ಸೆಮಿಸ್ಟರ್‌ಗಳ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಮುಕ್ತವಾಗಿದೆ. ಪ್ರತಿ ಸಂಸ್ಥೆಯು ರಸಪ್ರಶ್ನೆಯ ಪ್ರಾದೇಶಿಕ ಫೈನಲ್‌ಗಳಲ್ಲಿ ಭಾಗವಹಿಸಲು 20 ವಿದ್ಯಾರ್ಥಿಗಳನ್ನು ಕಳುಹಿಸಬಹುದು. ಆಯಾ ಸಂಸ್ಥೆಗಳು ಮಾರ್ಚ್ 11ರಂದು ಅಥವಾ ಮೊದಲು ಕಳುಹಿಸಬೇಕು. bitesitquiz@gmail.com. Ph: 080–41235889. ಪ್ರಾದೇಶಿಕ ಮಟ್ಟದ ರಸಪ್ರಶ್ನೆ ಮಂಗಳೂರು (ಮಾ.19), ಮೈಸೂರು (ಮಾ.21), ಕಲಬುರಗಿ (ಮಾ.26) ಧಾರವಾಡ (ಮಾ.28), ತುಮಕೂರು (ಏ.2), ಬೆಂಗಳೂರು (ಏ.5) ನಡೆಯಲಿದೆ. ಏ.5, 2024ರಂದು ಬೆಂಗಳೂರಲ್ಲಿ ನಡೆಯಲಿರುವ ರಾಜ್ಯಮಟ್ಟದ ಫೈನಲ್‌ನಲ್ಲಿ ಸ್ಪರ್ಧಿಸುವ ಅವಕಾಶ ಪಡೆಯುವರು.

ನಿಧನ

ಅರುಣ್



ಮೈಸೂರು, ಮಾ. 9–ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ನೌಕರ ಅರುಣ್ (72) ಶನಿವಾರ ಜೆ.ಪಿ. ನಗರದ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸ್ಮಶಾನದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹವಿಲ್ದಾರ್ ಎನ್.ಆರ್. ಗರುಡಾಚಾರ್



ಮೈಸೂರಿನ ಚಾಮರಾಜಪುರಂ ನಿವಾಸಿ ಹವಿಲ್ದಾರ್ ಎನ್.ಆರ್.ಗರುಡಾಚಾರ್ (85) ಮಾರ್ಚ್ 3ರಂದು ನಿಧನರಾದರು. ಮೃತರು ಮದ್ರಾಸ್ ರೆಜಿಮೆಂಟ್‌ನಲ್ಲಿ ಸೇವೆ ಸಲ್ಲಿಸಿ, ಎರಡು ಯುದ್ಧಗಳಲ್ಲಿ ಹೋರಾಡಿದ್ದಾರೆ. ಮೃತರು ಪತ್ನಿ ಕಾಂತಾಮಣಿ, ಪುತ್ರಿಯರಾದ ಪದ್ಮಾಸಿನಿ, ವಂದನಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಾ.4ರಂದು ಜಯನಗರದ ವಿದ್ಯುತ್ ಚಿತಾಗಾರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೀವನ್ ಟಾಮ್



ಮೈಸೂರಿನ ಅಮೃತ ವಿಶ್ವ ವಿದ್ಯಾಪೀಠಂನ ಅಂತಿಮ ಬಿಸಿಎ ವಿದ್ಯಾರ್ಥಿ ಜೀವನ್ ಟಾಮ್ (20) ರಸ್ತೆ ಅಪಘಾತದಲ್ಲಿ ಶುಕ್ರವಾರ ನಿಧನರಾದರು. ಮೃತರು ತಂದೆ ಟಾಮ್ ಜೋಸೆಫ್ (ಆಕಾಶವಾಣಿ ಉದ್ಯೋಗಿ), ತಾಯಿ ಮಿನಿ ಟಾಮ್, ಸಹೋದರಿಯರಾದ ದಿವ್ಯಾ ಟಾಮ್ ಮತ್ತು ಸ್ನೇಹಾ ಟಾಮ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಕಾಮನಕೆರೆ ಹುಂಡಿಯ ಮರಿಯಾನಗರದಲ್ಲಿರುವ ಮೌಂಟ್ ಕಾರ್ಮೆಲ್ ಚರ್ಚ್‌ನಲ್ಲಿ ನಾಳೆ (ಮಾ.10) ಮಧ್ಯಾಹ್ನ 3 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

5ನೇ ಟೆಸ್ಟ್: ಭಾರತಕ್ಕೆ ಇನ್ನಿಂಗ್ಸ್, 64 ರನ್ ಜಯ



ಧರ್ಮಶಾಲಾ, ಮಾ.9– ಭಾರತ ಇಂಗ್ಲೆಂಡ್ ವಿರುದ್ಧದ ಐದನೇ ಟೆಸ್ಟ್ ಪಂದ್ಯದಲ್ಲಿ ಇನ್ನಿಂಗ್ಸ್ ಹಾಗೂ 64 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಆ ಮೂಲಕ ಐದು ಪಂದ್ಯಗಳ ಟೆಸ್ಟ್ ಸರಣಿಯನ್ನು 4–1 ಅಂತರದಲ್ಲಿ ಮುಡಿಗೇರಿಸಿಕೊಂಡಿತು.

ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಶನಿವಾರ 259 ರನ್‌ಗಳ ಹಿನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ಆರ್.ಅಶ್ವಿನ್ ಸ್ಪಿನ್ ಮೋಡಿಗೆ ನಲುಗಿ 48.1 ಓವರ್‌ಗಳಿಗೆ 195 ರನ್‌ಗಳಿಗೆ ಆಲೌಟ್ ಆಯಿತು. ಇಂಗ್ಲೆಂಡ್ ಪರ ಜೋ ರೂಟ್ 84 ರನ್ ಗಳಿಸಿದ್ದು ಬಿಟ್ಟರೆ ಇನ್ನುಳಿದ ಬ್ಯಾಟ್ಸ್‌ಮನ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲಿಲ್ಲ. ಭಾರತದ ಪರ ಆರ್.ಅಶ್ವಿನ್ 5, ಜಸ್‌ಪ್ರೀತ್ ಬುಮ್ರಾ ಹಾಗೂ ರವೀಂದ್ರ ಜಡೇಜಾ ತಲಾ 2 ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನ 8 ವಿಕೆಟ್ ನಷ್ಟಕ್ಕೆ 473 ರನ್‌ಗಳಿಂದ ಶನಿವಾರ ಮೂರನೇ ದಿನದಾಟ ಆರಂಭಿಸಿದ ಭಾರತ ಕೇವಲ 4 ರನ್‌ಗಳನ್ನು ಮಾತ್ರ ಕಲೆ ಹಾಕಿತು. ಎರಡನೇ ದಿನ ಅತ್ಯುತ್ತಮ ಬ್ಯಾಟ್ ಮಾಡಿದ್ದ ಕುಲ್ದೀಪ್ ಯಾದವ್ 30 ರನ್ ಗಳಿಸಿ ಇಂದು ಜೇಮ್ಸ್ ಆಂಡರ್ಸನ್ ಎಸೆತದಲ್ಲಿ ವಿಕೆಟ್ ಒಪ್ಪಿಸಿದರು. ನಂತರ ಜಸ್‌ಪ್ರೀತ್ ಬುಮ್ರಾ 20 ರನ್ ಗಳಿಸಿ ಶೋಯೆಬ್ ಬಶೀರ್ ಎಸೆತದಲ್ಲಿ ಸ್ಟಂಪ್ ಔಟ್ ಆದರು. ಆ ಮೂಲಕ ಟೀಮ್ ಇಂಡಿಯಾ ಪ್ರಥಮ ಇನಿಂಗ್ಸ್‌ನಲ್ಲಿ 124.1 ಓವರ್‌ಗಳಿಗೆ 477 ರನ್‌ಗಳಿಗೆ ಆಲ್‌ಔಟ್ ಆಯಿತು. ಆ ಮೂಲಕ ಭಾರತ ಪ್ರಥಮ ಇನಿಂಗ್ಸ್‌ನಲ್ಲಿ 259 ರನ್‌ಗಳ ಮುನ್ನಡೆ ಪಡೆಯಿತು. ಕುಲದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೇ, ಯಶಸ್ವಿ ಜೈಸ್ವಾಲ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

112 ವರ್ಷಗಳ ಹಿಂದಿನ ದಾಖಲೆ ಸರಿಗಟ್ಟಿದ ಭಾರತ

ಧರ್ಮಶಾಲಾ: ಇಂಗ್ಲೆಂಡ್ ವಿರುದ್ಧದ ಐದನೇ ಮತ್ತು ಕೊನೆ ಪಂದ್ಯದಲ್ಲಿ ಭಾರತ ಇನ್ನಿಂಗ್ಸ್ ಮತ್ತು 64 ರನ್‌ಗಳಿಂದ ಗೆಲುವು ಸಾಧಿಸಿದ್ದು, ಆ ಮೂಲಕ ಐತಿಹಾಸಿಕ ದಾಖಲೆ ಸರಿಗಟ್ಟಿದೆ. ಭಾರತ ಈ ಗೆಲುವಿನ ಮೂಲಕ 112 ವರ್ಷದಲ್ಲೇ ಮೊದಲ ಬಾರಿಗೆ ಐದು ಪಂದ್ಯಗಳ ಸರಣಿಯಲ್ಲಿ ಮೊದಲ ಪಂದ್ಯ ಸೋತು ನಂತರ 4–1 ರಿಂದ ಗೆದ್ದ ಏಕೈಕ ತಂಡ ಎಂಬ ಇತಿಹಾಸ ನಿರ್ಮಿಸಿದೆ. ಈ ಸಾಧನೆ ಮಾಡಿರುವುದು ಕೇವಲ 2 ತಂಡಗಳು ಮಾತ್ರ. 1897–98 ಮತ್ತು 1901–02ರಲ್ಲಿ ಇಂಗ್ಲೆಂಡ್ ವಿರುದ್ಧ ಆಸ್ಟ್ರೇಲಿಯಾ, 1912ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಇಂಗ್ಲೆಂಡ್ ಈ ಸಾಧನೆ ಮಾಡಿತ್ತು. ಇದೀಗ ಈ ಸಾಧನೆ ಭಾರತ ಮಾಡಿದೆ. ಇದೀಗ ಬರೋಬ್ಬರಿ 112 ವರ್ಷಗಳ ಬಳಿಕ ಟೀಂ ಇಂಡಿಯಾ 4–1 ಅಂತರದಿಂದ ಇಂಗ್ಲೆಂಡ್ ತಂಡವನ್ನು ಬಗ್ಗು ಬಡಿದು ಐತಿಹಾಸಿಕ ದಾಖಲೆ ಬರೆದಿದ್ದು ಈ ಮೂಲಕ ಈ ಸಾಧನೆ ಮಾಡಿದ ವಿಶ್ವದ ಮೂರನೇ ತಂಡ ಎನಿಸಿಕೊಂಡಿದೆ.

ಉದ್ಬೂರಿನಲ್ಲಿ ಮುಡಾ ಅಧ್ಯಕ್ಷರಿಗೆ ಅದ್ಧೂರಿ ಸ್ವಾಗತ; ಆತ್ಮೀಯ ಸನ್ಮಾನ




ಮೈಸೂರು,ಮಾ.9(ಪಿಎಂ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನೂತನ ಅಧ್ಯಕ್ಷ ಕೆ.ಮರೀಗೌಡ ಅವರಿಗೆ ಉದ್ಬೂರಿನಲ್ಲಿ ಗ್ರಾಮಸ್ಥರು ಅದ್ಧೂರಿಯಾಗಿ ಸ್ವಾಗತಿಸಿ, ಆತ್ಮೀಯವಾಗಿ ಸನ್ಮಾನಿಸಿದರು.

ಮೈಸೂರು ತಾಲೂಕಿನ ಉದ್ಬೂರು ಗ್ರಾಮಕ್ಕೆ ಮುಡಾ ಅಧ್ಯಕ್ಷರಾಗಿ ಪ್ರಥಮ ಬಾರಿಗೆ ಭೇಟಿ ನೀಡಿದ ಕೆ.ಮರೀಗೌಡ ಅವರನ್ನು ಗ್ರಾಮಸ್ಥರು, ಪಟಾಕಿ ಸಿಡಿಸಿ ಸಂಭ್ರಮದಿಂದ ಬರಮಾಡಿಕೊಂಡರು. ಅಲ್ಲದೆ, ಗ್ರಾಮದ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ರುದ್ರಾಭಿಷೇಕ ಮಾಡಿಸಿ, ಅವರನ್ನು ಅಭಿನಂದಿಸಿದರಲ್ಲದೆ, ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಿದರು.

ಇದೇ ವೇಳೆ ಮಾತನಾಡಿದ ಕೆ.ಮರೀಗೌಡ ಅವರು, ನಾನು ಈ ಗ್ರಾಮಕ್ಕೆ ಸುಮಾರು 40 ವರ್ಷಗಳಿಂದಲೂ ಬರುತ್ತಿದ್ದೇನೆ. ಈ ಗ್ರಾಮದ ಜನರು ಅಂದಿನಿಂದಲೂ ಪ್ರೀತಿ, ಗೌರವದಿಂದ ನನ್ನನ್ನು ಕಾಣುತ್ತಿದ್ದಾರೆ. ಈ ಜನರ ಋಣವನ್ನು ಈ ಜನ್ಮದಲ್ಲಿ ತೀರಿಸಲು ಸಾಧ್ಯವಿಲ್ಲ ಎಂದು ಗ್ರಾಮಸ್ಥರಿಗೆ ಧನ್ಯವಾದ ತಿಳಿಸಿದರಲ್ಲದೆ, ಶ್ರೀ ಲಕ್ಷ್ಮೀನಾರಾಯಣಸ್ವಾಮಿ ಎಲ್ಲರಿಗೂ ಒಳ್ಳೆಯದು ಮಾಡಲಿ ಎಂದರು.

ಜಿಪಂ ಮಾಜಿ ಸದಸ್ಯೆ ನಾಗಮ್ಮ, ತಾಪಂ ಮಾಜಿ ಸದಸ್ಯ ದಾಸನಾಯಕ, ಗ್ರಾಪಂ ಮಾಜಿ ಅಧ್ಯಕ್ಷ ಉದ್ಬೂರು ಕೃಷ್ಣ, ಗ್ರಾಮದ ಯಜಮಾನರಾದ ಸೋಮನಾಯಕ, ನಾಗನಾಯಕ, ದೇವನಾಯಕ, ಮಾಕಿ ಮಾದೇವ, ಶಿವಪ್ಪ ಚಂದ್ರು, ಗ್ರಾಮದ ಯುವ ಜನರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.3.2024 ಭಾನುವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಪೂಭಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಭಾರತ ಕಮ್ಯೂನಿಸ್ಟ್ ಪಕ್ಷ :** ಕಾರ್ಮಿಕ ವರ್ಗದ ಮಹಾನ್ ನಾಯಕ ಕಾಮ್ರೇಡ್ ಲೆನಿನ್ ಕುರಿತು ವಿಚಾರ ಸಂಕಿರಣ, ಉಪಸ್ಥಿತರು : ಸಿಪಿಐ ಜಿಲ್ಲಾ ಸಮಿತಿ ಸದಸ್ಯ ಎನ್. ವಿಜಯಕುಮಾರ್, ಸಿಪಿಐ ರಾಜ್ಯ ನಾಯಕ ಹೆಚ್.ಆರ್. ಶೇಷಾದ್ರಿ, ಎಐಡಿವೈಓ ಅಖಿಲ ಭಾರತ ಉಪಾಧ್ಯಕ್ಷ ಡಾ. ಜಿ. ಶಶಿಕುಮಾರ್, ಸಿಪಿಐ ರಾಜ್ಯ ಸಮಿತಿ ಸದಸ್ಯ ನಾ. ದಿವಾಕರ್, ಹೆಚ್.ಬಿ. ರಾಮಕೃಷ್ಣ, ಜಗದೀಶ್ ಸೂರ್ಯ, ಸಥಳ: ಐಡಿಯಲ್ ಜಾವಾ ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30 ರಿಂದ.

■ **ಮೈಸೂರು ಆರ್ಟ್ ಗ್ಯಾಲರಿ:** ಸಾಧಕರೊಂದಿಗೆ ಸಂವಾದ 90, ತಿಂಗಳ ಸಾಧಕರು ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಮುಖ್ಯ ಅತಿಥಿಗಳು: ಕರ್ನಾಟಕ ಕಲಾಶ್ರೀ ಡಾ.ಕೆ.ಕುಮಾರ್, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಶಿವಲಿಂಗಪ್ಪ, ವಿಶೇಷ ಆಹ್ವಾನಿತರು: ಮಾಲಿನಿ ಆರ್. ಪಾಲಾಕ್ಷ, ರಾಜು ಶೆಟ್ಟಿ, ವೆಂಕಟರಮಣ ಕಲೆಗಾರ್, ಬಿ.ಆರ್.ನಾಗರತ್ನ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ :** ಶಿವರಾತ್ರಿ ಅಮಾವಾಸ್ಯೆ, ಸನಿಶಾಂತಿ, ಗುರುಶಾಂತಿ, ರಾಹುಶಾಂತಿ, ಕೇತುಶಾಂತಿ, ಮೃತ್ಯುಂಜಯ ಹೋಮ, ಮಾಂಗಲ್ಯ ಚಂಡಿಕಾ ಹೋಮ, ಸ್ವಯಂ ಪಾರ್ವತಿ ಹೋಮ, ದಕ್ಷಿಣಾಮೂರ್ತಿ, ಧನ್ವಂತರಿ ಹೋಮ, ಸುಬ್ರಮಣ್ಯ ಕುಜಶಾಂತಿ ಹೋಮ, ನವಗ್ರಹ ಹೋಮ, ಸ್ಥಳ: ದೇವಸ್ಥಾನ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಸಂಜೆ 6ಕ್ಕೆ 88ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಸಮಾರೋಪ ಭಾಷಣ : ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಸಾನ್ನಿಧ್ಯ : ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ, ಶ್ರೀಮತಿ ಕವಿತಾ ಮತ್ತು ತಂಡದವರಿಂದ ಪುಣ್ಯ ಕೋಟಿ ನೃತ್ಯ ರೂಪಕ, ಬೆಳಗ್ಗೆ 11ಕ್ಕೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾನ್ನಿಧ್ಯ : ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ, ಉದ್ಘಾಟನೆ : ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಪ್ರಭಾವತಿ ಹೀರೇಮಠ್, ಉಪಸ್ಥಿತರು : ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ರೋಹಿಣಿ ಡಿ. ಬಸಾಪುರ್, ಮನಶಾಸ್ತ್ರಜ್ಞ ಡಾ. ಭಾರತಿ, ಎಸ್‌ಬಿಐ ಮೇನೇಜರ್ ನಳಿನಾಕ್ಷಿ, ಸ್ಥಳ: ಓಂ ಶಾಂತಿ ಮಂಟಪ, ಕಾಳಿದಾಸ ರಸ್ತೆ, ಚಂದ್ರಕಲಾ ಆಸ್ಪತ್ರೆ ಬಳಿ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಮಹಾಶಿವರಾತ್ರಿ ಅಮಾವಾಸ್ಯೆ ವಿಶೇಷ ಪೂಜೆ, ಸ್ಥಳ: ಸುತ್ತೂರು ಶ್ರೀಕ್ಷೇತ್ರ.

■ **ವೇದಶಾಸ್ತ್ರ ಪೋಷಿಣೀ ಸಭಾ:** ಶತೋತ್ತರ ಸಂಭ್ರಮ, ರಾಜ್ಯಸ್ತರೀಯ ವಿದ್ವಾಂಸರ ಸಮ್ಮಾನ ಸಮಾರಂಭ, ಸಮ್ಮಾನ ಪ್ರದಾತರು: ನವದೆಹಲಿ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ವಿದ್ವಾನ್ ಡಾ.ಪರಮೇಶ್ವರ ನಾರಾಯಣ ಶಾಸ್ತ್ರೀ, ಅಧ್ಯಕ್ಷತೆ: ವೇದಶಾಸ್ತ್ರ ಪೋಷಿಣೀ ಸಭಾ ಅಧ್ಯಕ್ಷ ವಿದ್ವಾನ್ ಪ್ರೊ. ನಾಗರಾಜ ಭಟ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣ ಆರಾತ್ರಿಕ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ಎಂ.ಎಸ್.ಕೆ. ಪ್ರಭು ಆಧರಿಸಿದ ಬೆತ್ತಲೆ ಅರಸನ ರಾಜ ರಹಸ್ಯ ನಾಟಕ ಪ್ರದರ್ಶನ, ನಿರ್ದೇಶನ : ಮಂಡ್ಯ ರಮೇಶ್, ರಂಗರೂಪ : ಶ್ರೀಮತಿ ಕುಸುಮ ಆಯರಹಳ್ಳಿ, ನಾಟಕ ವಿನ್ಯಾಸ : ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಗೆಳೆಯರ ಬಳಗ ಅಭಿವೃದ್ಧಿ ಸಹಕಾರ ಸಂಘ, ಐಶ್ವರ್ಯ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಗೆಳೆಯರ ಬಳಗ ಅಭಿವೃದ್ಧಿ ಸಹಕಾರ ಸಂಘ, ವಿಜಯನಗರ 3ನೇ ಹಂತ, ಬೆಳಗ್ಗೆ 7.30ಕ್ಕೆ.


ಬಹುರೂಪಿ ನಾಟಕೋತ್ಸವದಲ್ಲಿಂದು

ರಂಗಾಯಣ : 'ಇವ ನಮ್ಮವ ಇವ ನಮ್ಮವ' ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ–ಡಾ.ತೀತೀರ ರೇಖಾ ವಸಂತ, 6.40 ಪದಸಂಸ್ಕೃತಿ, ಪ್ರಸ್ತುತಿ–ಪ್ರೊ.ಲಕ್ಷ್ಮೀ ನಾರಾಯಣ ಅರೋರಾ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ–ವಿಶ್ವ ಕಿಡ್ನಿ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಡಾ.ಕೆ.ಬಿ.ಶಶಿಕಿರಣ್, 10.00 ಕೇಳಿಗಿಳಿಗಳೇ, ಕಥೆ ಕೇಳು ಪುಟ್ಟಾ–ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಹೊಸಕೋಟೆಯ ಶ್ರೀ ಗುರುಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರನಾಮ–ವೃಂದಗಾನ, 12.45 ಜನಪದಸಂಗೀತ–ನಿಂಗಶೆಟ್ಟಿ ಮತ್ತು ಸಂಗಡಿಗರು, 1.20 ಭಾವಗೀತೆ–ಕೆ.ಆರ್.ಸುಬ್ರಹ್ಮಣ್ಯ, ರತ್ನಮಾಲಾ ಪ್ರಕಾಶ್, ಅರ್ಚನಾ ಉಡುಪ, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ಜಗಜ್ಯೋತಿ ಬಸವೇಶ್ವರ', 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಮೋಕ್ಷ ಸಂಗ್ರಾಮ, ಪ್ರಸ್ತುತಿ–ಧರ್ಮಸ್ಥಳದ ಬಿ.ಭುಜಬಲಿ ಮತ್ತು ತಂಡದವರು, 6.50 ಕೃಷಿರಂಗ– ತೋರಣ ಹೂರಣ, ಪ್ರಸ್ತುತಿ–ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಸಂಗೀತ ಪರಿಚಾರಕ ಸಿ.ಆರ್.ಹಿಮಾಂಶು ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ವಿದುಷಿ ಕಲ್ಪನಾ ಜೋಕರ್‌ಕರ್–ಗಾಯನ



ಕಿಂದರಿಜೋಗಿ (ಸಂಜೆ 5.30ಕ್ಕೆ)

ಕೊರಗರ ಡೊಳ್ಳು : ಬಾಬು ಕೊರಗ ಮತ್ತು ತಂಡ, ಪಂಬೂರ್, ಉಡುಪಿ
ಗೊರವರ ಕುಣಿತ : ರಾಜಶೇಖರ ಮತ್ತು ತಂಡ, ರಾಮಸಮುದ್ರ, ಚಾಮರಾಜನಗರ

ಕಿರು ರಂಗಮಂದಿರ (ಸಂಜೆ 6ಕ್ಕೆ)

ಬ್ಲ್ಯಾಕ್‌ಔಟ್ (ಕನ್ನಡ), ರಚನೆ : ಜಿ.ವಿ. ಶಿವಾನಂದ, ನಿರ್ದೇಶನ : ಸಂದೀಪ್ ಪೈ.ಎಸ್.ತಂಡ : ರಂಗಸಿರಿ ಪ್ರೊಡಕ್ಷನ್, ಬೆಂಗಳೂರು

ಭೂಮಿಗೀತ (ಸಂಜೆ 6.30ಕ್ಕೆ)

ಕಿಟನ್ ಕೋಲಾ (ಬಂಗಾಳಿ), ರಚನೆ : ಸೆಲಿಮ್ ಆಲ್ ದೀನ್, ನಿರ್ದೇಶನ : ಸೌರವ್ ಪಲೋಧಿ ತಂಡ : ಠಾಕುರ್ಪುಕುರ್ ಇಚೆಮೊಟೊ, ಕೊಲ್ಕತ್ತಾ

ವನರಂಗ (ಸಂಜೆ 7ಕ್ಕೆ)

ಕರಿಯದೇವರ ಹುಡುಕಿ (ಕನ್ನಡ), ಮೂಲ : ಪ್ರೊ. ಜಿ. ಶಂಕರ್ ಪಿಳ್ಳೈ, ಅನುವಾದ : ನಾ. ದಾಮೋದರ ಶೆಟ್ಟಿ, ನಿರ್ದೇಶನ : ನಿರಂಜನ ಖಾಲಿಕೊಡ, ತಂಡ : ಸಮುದಾಯ, ಬೆಂಗಳೂರು

ಕಲಾಮಂದಿರ (ಸಂಜೆ 7.30ಕ್ಕೆ)

ಚಿಲ್ಲರ ಸಮರಂ (ಮಲಯಾಳಂ), ರಚನೆ : ಎಂ.ಪಿ. ರಾಜೇಶ್, ನಿರ್ದೇಶನ : ಅರುಣ್ ಲಾಲ್ ತಂಡ : ಲಿಟಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್, ಕೇರಳ

ಬಹುರೂಪಿ ಚಲನಚಿತ್ರೋತ್ಸವ

ಶ್ರೀರಂಗ (10.30 ರಿಂದ ಮ. 12)

ಕೇವ್ ಆಫ್ ಫರ್‌ಗಾಟನ್ ಡ್ರೀಮ್ಸ್ (ಇಂಗ್ಲಿಷ್), ನಿರ್ದೇಶನ : ವೆರ್‌ನರ್ ಹೆರ್‌ಜಾಗ್, ಜರ್ಮನಿ

ಮ. 12 ರಿಂದ ಮ. 1.30

500 ಇಯರ್ಸ್ ಲೇಟರ್ (ಇಂಗ್ಲಿಷ್), ನಿರ್ದೇಶನ : ಓವೆನ್ ಅಲಿಕ್ ಶಹಾದಾಹ್

ಮ. 2 ರಿಂದ ಸಂಜೆ 4.30 ರವರೆಗೆ

ದಿ ಹೆಲ್ಪ್ (ಇಂಗ್ಲೀಷ್), ನಿರ್ದೇಶನ : ಟೇಟೆ ಟೇಲರ್

ಬಿ.ವಿ. ಕಾರಂತ ರಂಗಚಾವಡಿ

ರಾಷ್ಟ್ರೀಯ ವಿಚಾರ ಸಂಕಿರಣ

ರಂಗಭೂಮಿ–ತತ್ವಜ್ಞಾನ, ತಂತ್ರಜ್ಞಾನ ಮತ್ತು ಅವುಗಳ ಸಾಂಸ್ಕೃತಿಕ ಪ್ರಭಾವ

ಗೋಷ್ಠಿ–1 (ಬೆಳಗ್ಗೆ 10.30 ರಿಂದ 12) ವಿಷಯ : ರಂಗಭೂಮಿ ಮತ್ತು ತತ್ವಜ್ಞಾನ : ವಿಚಾರ ಮಂಡನೆ : ತತ್ವಜ್ಞಾನಿ ಡಾ. ಸುಂದರ್ ಸರುಕ್ಕೈ, ಪ್ರತಿಸ್ಪಂದನೆ : ಉಡುಪಿ ರಂಗ ನಿರ್ದೇಶಕ ಡಾ. ಶ್ರೀಪಾದ ಭಟ್, ಹೆಗ್ಗೋಡು ರಂಗ ನಿರ್ದೇಶಕ ಬಿ.ಆರ್.ವೆಂಕಟರಮಣ ಐತಾಳ, ಅಧ್ಯಕ್ಷತೆ : ರಂಗ ನಿರ್ದೇಶಕ ರಘುನಂದನ.

ಗೋಷ್ಠಿ–2 (ಮ. 12.10 ರಿಂದ 1.40) ವಿಷಯ : ರಂಗಭೂಮಿ ಮತ್ತು ತಂತ್ರಜ್ಞಾನ : ವಿಚಾರ ಮಂಡನೆ : ರಂಗ ನಿರ್ದೇಶಕ ಪ್ರೊ. ದೀಪನ್ ಶಿವರಾಮನ್, ಪ್ರತಿಸ್ಪಂದನೆ : ವಿನ್ಯಾಸಕಾರ ಶಶಿಧರ ಉಡುಪ, ರಂಗ ನಿರ್ದೇಶಕ ಶಕೀಲ್ ಅಹಮ್ಮದ್, ಅಧ್ಯಕ್ಷತೆ : ರಂಗ ನಿರ್ದೇಶಕ : ಸುರೇಶ್ ಆನಗಳ್ಳಿ.

ಗೋಷ್ಠಿ–3 (ಮ.2.30 ರಿಂದ 4) ವಿಷಯ : ಸಮುದಾಯದತ್ತ ಸಮಕಾಲೀನ ರಂಗಭೂಮಿ : ವಿಚಾರ ಮಂಡನೆ : ನಾಟಕಕಾರ ಕೋಟಗಾನಹಳ್ಳಿ ರಾಮಯ್ಯ, ಪ್ರತಿಸ್ಪಂದನೆ : ರಂಗ ನಿರ್ದೇಶಕರಾದ ಕೆ.ಪಿ. ಲಕ್ಷ್ಮಣ್, ಶ್ರೀಜಿತ್ ಸುಂದರಮ್, ಅಧ್ಯಕ್ಷತೆ : ರಂಗ ನಿರ್ದೇಶಕರಾದ ಶ್ರೀಮತಿ ಭಾಗೀರಥಿಬಾಯಿ ಕದಂ, ಸಂಜೆ 4ಕ್ಕೆ ಸಮಾರೋಪ, ಸಮಾರೋಪ ನುಡಿ : ಹಿರಿಯ ಕವಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಸಂಜೆ 4 ರಿಂದ ಬಿ.ವಿ. ರಂಗಚಾವಡಿ ವಿಶೇಷ ಕಾರ್ಯಕ್ರಮಗಳು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 10 ಭಾನುವಾರ 2024

ಸಂಪುಟ: 44 | ಸಂಚಿಕೆ: 321 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸಿದ್ದರಾಮಯ್ಯನವರ ಕುರ್ಚಿ ಉಳಿಸಬೇಕೆಂದಿದ್ದರೆ ನನಗೆ ಟಿಕೆಟ್ ತಪ್ಪಿಸುತ್ತಾರೆ...!!

–ಸಂಸದ ಪ್ರತಾಪ್‌ಸಿಂಹ ತೀಕ್ಷ್ಣ ಪ್ರತಿಕ್ರಿಯೆ



ಮೈಸೂರು, ಮಾ.9–ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುರ್ಚಿ ಉಳಿಸಬೇಕೆಂದಿದ್ದರೆ, ಅಂತಹವರು ಲೋಕಸಭಾ ಚುನಾವಣೆಯಲ್ಲಿ ನನಗೆ ಟಿಕೆಟ್ ತಪ್ಪಿಸುತ್ತಾರೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಪ್ರತಿಕ್ರಿಯಿಸಿದ್ದಾರೆ.

ಸುದ್ದಿವಾಹಿನಿಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಕುರ್ಚಿ ಉಳಿಸಲು ನಮ್ಮ ಪಕ್ಷದ ಕೆಲವರು ಪ್ರಯತ್ನಿಸುತ್ತಿರಬಹುದು. ಆದರೆ ನನಗೆ ಟಿಕೆಟ್ ದೊರೆಯುತ್ತದೆ ಎಂಬ ವಿಶ್ವಾಸವಿದೆ ಎಂದರು.

ಚುನಾವಣೆಯಲ್ಲಿ ಸ್ಪರ್ಧಿಸಲು ಮೈಸೂರು–ಕೊಡಗಿನ ಭಾಗದ ಪಕ್ಷದ ಸದಸ್ಯರಾಗಿರುವವರಿಗೆ ಟಿಕೆಟ್ ಕೇಳುವ ಹಕ್ಕು ಇರುತ್ತದೆ. ಪ್ರಜಾಪ್ರಭುತ್ವದಲ್ಲಿ ಅದು ಸಹಜ. ನಾನು ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಕಳೆದ 10 ವರ್ಷ ಸಂಸದನಾಗಿ ನಿಯತ್ತಿನಿಂದ ಕೆಲಸ ಮಾಡಿದ್ದೇನೆ. ಅಭಿವೃದ್ಧಿ ಮತ್ತು ಹಿಂದುತ್ವ ವಿಚಾರದಲ್ಲಿ ಬೇರೆ ಯಾರೂ ನನ್ನನ್ನು ಮ್ಯಾಚ್ ಮಾಡಲು ಆಗುವುದಿಲ್ಲ. ಪತ್ರಕರ್ತ ಕಂ ರಾಜಕಾರಣಿಯಾಗಿ ನಾನು ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದರು.ರಾಜಕಾರಣದಲ್ಲಿ ದ್ವೇಷ, ಅಸೂಯೆ ಜಾಸ್ತಿಯಾಗೇ ಇರುತ್ತದೆ. ಒಂದೆಡೆ ಯಾರೋ ಅಸೂಯೆ ಪಟ್ಟರೆ, ಮತ್ತೊಂದೆಡೆ ಪ್ರೀತಿಸುವವರ ಹಾರೈಕೆ ಹೆಚ್ಚಾಗಿರುತ್ತದೆ. ದೇಶಕ್ಕೆ ಮೋದಿ ಬೇಕು ಎಂದು ಕೋಟ್ಯಾಂತರ ಮಂದಿ ಆಶೀರ್ವಾದ ಮಾಡುತ್ತಾರೆ. ಅವರ ಹಾರೈಕೆ, ಆಶೀರ್ವಾದದ ಮುಂದೆ ಒಂದಷ್ಟು ಜನರ ಶಾಪ ತಟ್ಟುವುದಿಲ್ಲ ಎಂದ ಅವರು, ಓರ್ವ ಸಂಸದನಾಗಬೇಕಾದರೆ, ಟಿಕೆಟ್ ಪಡೆಯಬೇಕಾದರೆ ಜನರ ಆಶೀರ್ವಾದ ಮುಖ್ಯವಾಗುತ್ತದೆ. ನನಗೆ ಮೈಸೂರು–ಕೊಡಗು ಜನರ ● 9ನೇ ಪುಟಕ್ಕೆ

ಪ್ರತಾಪ್‌ಸಿಂಹರಿಗೆ ಬಿಜೆಪಿ ಟಿಕೆಟ್ ಅನುಮಾನ?

ರಾಜ್ಯ ಬಿಜೆಪಿ ನಾಯಕರ ಹೊಂದಾಣಿಕೆ ರಾಜಕಾರಣಕ್ಕೆ ಬಲಿಪಶು ಆಗುವರೇ ಪ್ರತಾಪ್‌ಸಿಂಹ...?

ಮೈಸೂರು, ಮಾ.9(ಬಿಎಲ್‌ಯು)–ರಾಜ್ಯ ಬಿಜೆಪಿ ನಾಯಕರ ಹೊಂದಾಣಿಕೆ ರಾಜಕಾರಣದಿಂದಾಗಿ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಅವರಿಗೆ ಈ ಬಾರಿ ಟಿಕೆಟ್ ತಪ್ಪುವ ಸಾಧ್ಯತೆಗಳಿವೆ ಎಂಬ ವದಂತಿ ಹರಡಿದೆ. ಉನ್ನತ ಮೂಲಗಳ ಪ್ರಕಾರ ರಾಜ್ಯ ಬಿಜೆಪಿ ನಾಯಕರ ಹೊಂದಾಣಿಕೆ ರಾಜಕಾರಣಕ್ಕೆ ಪ್ರತಾಪ್‌ಸಿಂಹ ಬಲಿಯಾಗುವ ಮುನ್ಸೂಚನೆಗಳು ಕಂಡು ಬಂದಿವೆ. 'ರಾಜ್ಯ ಬಿಜೆಪಿಯ ಕೆಲವು ನಾಯಕರು ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ' ಎಂಬ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಅವರ ಗಂಭೀರ ಆರೋಪಕ್ಕೆ ಇಂತಹ ರಾಜಕೀಯ ಬೆಳವಣಿಗೆಗಳು ಪುಷ್ಟಿ ನೀಡಿವೆ.


ಸಂಸದ ಪ್ರತಾಪ್‌ಸಿಂಹ ಅವರಿಗೆ ಈ ಭಾರಿ ಟಿಕೆಟ್ ಕೈತಪ್ಪುವ ಸಾಧ್ಯತೆ ಇದೆ ಎಂಬ ವದಂತಿಗಳಿಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ನಾಲ್ಕು ಗೋಡೆಗಳ ಮಧ್ಯೆ ನಡೆದಿರುವುದನ್ನು ಹೇಳಲು ಸಾಧ್ಯವಿಲ್ಲ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಕರ್ನಾಟಕದಲ್ಲಿ 2023ರಲ್ಲಿ ನಡೆದ ವಿಧಾನಸಭಾ ಚುನಾವಣೆ ವೇಳೆ ರಾಜ್ಯ ಬಿಜೆಪಿ ನಾಯಕರ ಹೊಂದಾಣಿಕೆ ರಾಜಕಾರಣ ಹಾಗೂ ಕುತಂತ್ರ ರಾಜಕಾರಣದಿಂದ ಬಿಜೆಪಿ ರಾಜ್ಯದಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು.

ಲೋಕಸಭಾ ಚುನಾವಣೆಯಲ್ಲೂ ಹೊಂದಾಣಿಕೆ ರಾಜಕಾರಣದಲ್ಲಿ ತೊಡಗಿರುವ ರಾಜ್ಯ ಬಿಜೆಪಿ ನಾಯಕರು ಪ್ರತಾಪ್‌ಸಿಂಹ ಅವರಿಗೆ ಟಿಕೆಟ್ ತಪ್ಪಿಸುವ ಹುನ್ನಾರ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಈ ನಾಯಕರ ಹೊಂದಾಣಿಕೆ ರಾಜಕಾರಣವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ವರದಾನವಾಗುವ ಸಾಧ್ಯತೆಯಿದೆ. ಈ ಮೂಲಕ ಮೈಸೂರು–ಕೊಡಗು ಭಾಗದಲ್ಲಿ ಕಾಂಗ್ರೆಸ್ ಅನ್ನು ವಿಧಾನಸಭಾ ಚುನಾವಣೆಯಲ್ಲಿ ಭದ್ರಕೋಟೆಯಾಗಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ಬಿಜೆಪಿ ನಾಯಕರ ಹೊಂದಾಣಿಕೆ ರಾಜಕೀಯವು ಲೋಕಸಭಾ ಚುನಾವಣೆಯಲ್ಲಿಯೂ ವಿಜಯ ಪತಾಕೆ ಹಾರಿಸಲು ● 9ನೇ ಪುಟಕ್ಕೆ

ಮಾಜಿ ಶಾಸಕ ವಾಸು ಇನ್ನಿಲ್ಲ



ಪಾರ್ಥಿವ ಶರೀರವನ್ನು ಮೈಸೂರಿನ ಜಯಲಕ್ಷ್ಮಿಪುರಂನ ಟೆಂಪಲ್ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿದೆ. ಇಂದು (ಮಾ.10) ಅರ್ಧ ಗಂಟೆ ರೈಲ್ವೆ ನಿಲ್ದಾಣ ಬಳಿಯ ಕಾಂಗ್ರೆಸ್ ಕಚೇರಿಯಲ್ಲಿ ಪಾರ್ಥಿವ ಶರೀರ ಇರಿಸಿ, ಗೌರವ ಸಲ್ಲಿಸಿದ ಬಳಿಕ ಮಧ್ಯಾಹ್ನ 3 ಗಂಟೆಗೆ ಬನ್ನೂರು ರಸ್ತೆಯಲ್ಲಿರುವ ವಿದ್ಯಾವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (VVIET) ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.



ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಮಾಜಿ ಶಾಸಕ ವಾಸು ಅವರ ಅಂತಿಮ ದರ್ಶನ ಪಡೆದರು. ಈ ವೇಳೆ ವಾಸು ಅವರ ಪುತ್ರರಾದ ಬಿಜೆಪಿ ಮುಖಂಡ ಕವೀಶ್‌ಗೌಡ, ಅವೀಶ್‌ಗೌಡ, ರಿತೇಶ್‌ಗೌಡ, ಹಿರಿಯ ಸಹಕಾರಿ ಹಿ.ಬಸವೇಗೌಡ ಇನ್ನಿತರರಿದ್ದಾರೆ.

ಮೈಸೂರು, ಮಾ.9(ಆರ್‌ಕೆ)–ಶಾಸಕರಾದರೂ 'ಮೇಯರ್ ವಾಸು' ಎಂದೇ ಚಿರಪರಿಚಿತರು, ಜನಾನುರಾಗಿಯಾಗಿದ್ದ ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ವಾಸು(72) ಇಂದು ಬೆಳಿಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಅನಾರೋಗ್ಯದಿಂದ ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ತಮ್ಮ ನಿವಾಸದಲ್ಲೇ ಚಿಕಿತ್ಸೆ ಪಡೆಯುತ್ತಿದ್ದರಾದರೂ ಆರೋಗ್ಯದಲ್ಲಿ ತೀವ್ರ ವ್ಯತ್ಯಯವಾದ ಹಿನ್ನೆಲೆಯಲ್ಲಿ ಕಳೆದ ರಾತ್ರಿ ವಿಜಯನಗರ 3ನೇ ಹಂತದ ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ತೀವ್ರ ನಿಗಾ ಘಟಕದಲ್ಲಿ ಶನಿವಾರ ಬೆಳಿಗ್ಗೆ 10–20ರಲ್ಲಿ ವಾಸು ಅವರು ಕೊನೆಯುಸಿರೆಳೆದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ವಾಸು ಅವರು ಪುತ್ರರಾದ ಬಿಜೆಪಿ ಮುಖಂಡ ಕವೀಶ್‌ಗೌಡ, ಅವೀಶ್‌ಗೌಡ, ರಿತೇಶ್‌ಗೌಡ, ಸೊಸೆಯಂದಿರು, ಅಪಾರ ಬಂಧು–ಬಳಗ, ಸ್ನೇಹಿತರು, ಹಿತೈಷಿಗಳು, ಅಭಿಮಾನಿಗಳು, ರಾಜಕೀಯ ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರನ್ನು ಅಗಲಿದ್ದಾರೆ. 2006ರಲ್ಲಿ ಅವರ ಪತ್ನಿ ಶ್ರೀಮತಿ ಲಲಿತಾ ಅವರು ನಿಧನರಾಗಿದ್ದರು. ಪಾರ್ಥಿವ ಶರೀರವನ್ನು ಮೈಸೂರಿನ ಜಯಲಕ್ಷ್ಮಿಪುರಂನ ಟೆಂಪಲ್ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿದೆ. ನಾಳೆ(ಮಾ.10) ಅರ್ಧ ಗಂಟೆ ರೈಲ್ವೆ ನಿಲ್ದಾಣ ● 9ನೇ ಪುಟಕ್ಕೆ

ಎರಡ್ಮೂರು ದಿನದಲ್ಲಿ ಬಿಜೆಪಿ ಪಟ್ಟಿ ಪ್ರಕಟ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾಹಿತಿ ● ಮೊದಲ ಸುತ್ತಿನ ಮಾತುಕತೆ ಪೂರ್ಣ; ಮೊದಲ ಹಂತದಲ್ಲಿ ಶೇ.50ರಷ್ಟು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆ



ಬೆಂಗಳೂರು, ಮಾ. 9(ಕೆಎಂಶಿ)–ಲೋಕಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಪಟ್ಟಿ ಎರಡು–ಮೂರು ದಿನಗಳಲ್ಲಿ ಬಿಡುಗಡೆಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಸಂಬಂಧ ಪಕ್ಷದ ವರಿಷ್ಠರು ರಾಜ್ಯದ ಮುಖಂಡರೊಂದಿಗೆ ಎರಡು ಸುತ್ತಿನ ಮಾತುಕತೆ ಮುಗಿಸಿದ್ದಾರೆ, ಚರ್ಚೆ ಸಂದರ್ಭದಲ್ಲಿ ರಾಜ್ಯ 28 ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾತುಕತೆ ನಡೆಸಿ, ಸಂಭವನೀಯ ಅಭ್ಯರ್ಥಿಗಳ ಪಟ್ಟಿ ನೀಡಿದ್ದೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೇ.50ರಷ್ಟು ಕ್ಷೇತ್ರಗಳಿಗೆ ಮೊದಲ ಹಂತದಲ್ಲಿಯೇ ಅಭ್ಯರ್ಥಿಗಳ ಪಟ್ಟಿ ಹೊರಬೀಳಲಿದೆ, ರಾಜ್ಯ ನಾಯಕರಿಂದ ಮಾಹಿತಿ ಪಡೆದಿರುವ ವರಿಷ್ಠರು ಕೆಲವು ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ಹಾಗೂ ಚುನಾವಣಾ ಪೂರ್ವ ಸಮೀಕ್ಷೆ ವರದಿ ಮೇಲೆ ಅಭ್ಯರ್ಥಿಗಳ ಆಯ್ಕೆ ಮಾಡಲಿದ್ದಾರೆ. ಈ ಬಾರಿ 28 ಕ್ಷೇತ್ರಗಳಲ್ಲೂ ಗೆಲ್ಲಬೇಕೆಂಬ ಗುರಿ ನಮ್ಮದಾಗಿದೆ, ಹಾಗಾಗಿ ವರಿಷ್ಠರು ಹಲವು ಸುತ್ತಿನ ಕಸರತ್ತಿನ ನಂತರ ಗೆಲುವಿನ ರೂವಾರಿಗಳ ಹೆಸರನ್ನು ಪ್ರಕಟಿಸಲಿದ್ದಾರೆ.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಹೊಸ ಇತಿಹಾಸ ಸೃಷ್ಟಿಸುವ ವಿಶ್ವಾಸವಿದೆ, ಹಿಂದಿಗಿಂತ ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಪರ ವಾತಾವರಣ ರಾಜ್ಯದಲ್ಲಿದ್ದು, ಇದರ ಮೂಲಕ ನಮ್ಮ ಗುರಿಯನ್ನು ಮುಟ್ಟುತ್ತೇವೆ. ಪ್ರಧಾನಿ ಅವರು ಕಳೆದ 10 ವರ್ಷಗಳಲ್ಲಿ ನೀಡಿರುವ ಕಾರ್ಯಕ್ರಮಗಳು ಜನರ ಮನೆ ಬಾಗಿಲಿಗೆ ಮುಟ್ಟಿವೆ, ದೇಶದ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿಯೇ ಉತ್ತಮ ಮತ್ತು ಮೋದಿ ಅವರ ಆಡಳಿತವೇಬೇಕೆಂಬ ತೀರ್ಮಾನಕ್ಕೆ ರಾಜ್ಯದ ಜನರೂ ಬಂದಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಹೆಸರಿನಲ್ಲಿ ಮತ ಗಳಿಸಲು ಹೊರಟಿದೆ, ಆದರೆ, ಜನತೆ ಲೋಕಸಭಾ ಚುನಾವಣೆಯಲ್ಲಿ ಪಾಠ ಕಲಿಸುತ್ತಾರೆ.

ರಾಜ್ಯದ 7 ಸೇರಿ 39 ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟ

● ಬೆಂಗಳೂರು ಗ್ರಾಮಾಂತರದಿಂದ ಡಿ.ಕೆ.ಸುರೇಶ್, ಶಿವಮೊಗ್ಗದಿಂದ ಗೀತಾ ಶಿವರಾಜ್‌ಕುಮಾರ್, ಹಾಸನದಿಂದ ಜಿ.ಪುಟ್ಟಸ್ವಾಮಿಗೌಡರ ಮೊಮ್ಮಗ ಶ್ರೇಯಸ್ ಪಟೇಲ್ ಸ್ಪರ್ಧೆ, ಮಂಡ್ಯದಲ್ಲಿ ಸ್ಟಾರ್ ಚಂದ್ರು ಸ್ಪರ್ಧೆ ● ಕೇರಳದ ವಯನಾಡಿನಿಂದ ರಾಹುಲ್ ಗಾಂಧಿ, ತಿರುವನಂತಪುರಂನಿಂದ ಶಶಿ ತರೂರ್, ಅಲಪುಳ್ಳದಿಂದ ಕೆ.ಸಿ. ವೇಣುಗೋಪಾಲ್ ಅಭ್ಯರ್ಥಿ



ಡಿ.ಕೆ.ಸುರೇಶ್



ಗೀತಾ ಶಿವರಾಜ್‌ಕುಮಾರ್



ಶ್ರೇಯಸ್ ಪಟೇಲ್




ಸ್ಟಾರ್ ಚಂದ್ರು

ನವದೆಹಲಿ, ಮಾ. 9– ಕರ್ನಾಟಕದ ಏಳು ಕ್ಷೇತ್ರ ಸೇರಿದಂತೆ ರಾಷ್ಟ್ರದ 39 ಕ್ಷೇತ್ರಗಳಿಗೆ ಕಾಂಗ್ರೆಸ್ ಮೊದಲ ಪಟ್ಟಿಯನ್ನು ಮಾ.8ರಂದು ಬಿಡುಗಡೆ ಮಾಡಿದೆ.

ಕರ್ನಾಟಕದಲ್ಲಿ ಹಾಲಿ ಸಂಸದ ಡಿ.ಕೆ. ಸುರೇಶ್ ಅವರನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಲಾಗಿದೆ. ಶಿವಮೊಗ್ಗ ಕ್ಷೇತ್ರಕ್ಕೆ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಪತ್ನಿ ಗೀತಾ ಶಿವರಾಜ್ ಕುಮಾರ್, ಮಂಡ್ಯಗೆ ವೆಂಕಟರಮಣೇಗೌಡ ಅಲಿಯಾಸ್ ಸ್ಟಾರ್ ಚಂದ್ರು ಹಾಸನಕ್ಕೆ ಮಾಜಿ ಸಚಿವ ಜಿ. ಪುಟ್ಟಸ್ವಾಮಿಗೌಡರ ಮೊಮ್ಮಗ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ವಿರುದ್ಧ ಹೊಳೆನರಸೀಪುರದಿಂದ ಸ್ಪರ್ಧಿಸಿ, ಅತ್ಯಂತ ಕಡಿಮೆ ಅಂತರದಲ್ಲಿ ಸೋತಿದ್ದ ಶ್ರೇಯಸ್ ಪಟೇಲ್, ವಿಜಯಪುರಕ್ಕೆ ರಾಜು ಅಲಗೂಡು, ಹಾವೇರಿಗೆ ಆನಂದಸ್ವಾಮಿ ಗಡ್ಡದೇವರ ಮಠ ಅವರ ಹೆಸರನ್ನು ಘೋಷಿಸಲಾಗಿದೆ. ಇತ್ತೀಚೆಗಷ್ಟೇ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದ ಮುದ್ದಹನುಮೇಗೌಡರಿಗೆ ಕಾಂಗ್ರೆಸ್ ತುಮಕೂರಿನಲ್ಲಿ ಅವಕಾಶ ಕಲ್ಪಿಸಿದೆ. ಎಐಸಿಸಿ ನಾಯಕ ರಾಹುಲ್ ಗಾಂಧಿ ಅವರು ಕೇರಳದ ವಯನಾಡು ಕ್ಷೇತ್ರದಿಂದ ಮತ್ತೆ ಸ್ಪರ್ಧಿಸಲಿದ್ದಾರೆ. ಕರ್ನಾಟಕ ಕಾಂಗ್ರೆಸ್ ಮಾಜಿ ಉಸ್ತುವಾರಿ ಕೆ.ಸಿ.ವೇಣುಗೋಪಾಲ್ ಕೇರಳದ ಅಲಪ್ಪುಳದಲ್ಲಿ, ಹಿರಿಯ ಕಾಂಗ್ರೆಸ್ ನಾಯಕ ಶಶಿ ತರೂರ್ ತಿರುವನಂತ ಪುರಂನಲ್ಲಿ ಕಣಕ್ಕಿಳಿಯಲಿದ್ದಾರೆ. ಛತ್ತೀಸ್ ಗಢದಲ್ಲಿ ಮಾಜಿ ಮುಖ್ಯಮಂತ್ರಿ ಭೂಪೇಶ್ ವಘೇಲಾ ರಾಜ್ ನಂದಗಾಂವ್‌ನಿಂದ ಸ್ಪರ್ಧಿಸಲಿದ್ದಾರೆ.

ಮಂಡ್ಯದಿಂದ ಕುಮಾರಸ್ವಾಮಿ ಸ್ಪರ್ಧೆ?



ಇಷ್ಟವಿಲ್ಲದಿದ್ದರೂ ಪ್ರಧಾನಿ ಮೋದಿ ಮಾತಿಗೆ ಮನ್ನಣೆ

ಬೆಂಗಳೂರು, ಮಾ. 9(ಕೆಎಂಶಿ)–ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯುವ ಸಾಧ್ಯತೆ ಬಹುತೇಕ ಖಚಿತ.

ದೆಹಲಿ ರಾಜಕಾರಣದಲ್ಲಿ ಆಸಕ್ತಿ ಇಲ್ಲದಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆಯನ್ನು ತಳ್ಳಿಹಾಕಲಾಗದೆ ಚುನಾವಣಾ ಕಣ್ಕಕಳಿಯಲು ಮುಂದಾಗಿದ್ದಾರೆ. ಮಂಡ್ಯ ಸೇರಿದಂತೆ ಮೂರು ಕ್ಷೇತ್ರಗಳಿಂದ ಕಣಕ್ಕಿಳಿಯಲು ಕುಮಾರಸ್ವಾಮಿ ಅವರಿಗೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಂದ ಒತ್ತಡವಿದೆ.

ಆದರೆ, ತಮಗೆ ರಾಜಕೀಯ ಬದುಕು ಕೊಟ್ಟ ರಾಮನಗರ ಜಿಲ್ಲೆ ಬಿಟ್ಟು ಚುನಾವಣಾ ಕಣಕ್ಕಿಳಿಯುವ ಆಸಕ್ತಿ ಇಲ್ಲ.

ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರಿದ ನಂತರ ಪ್ರಧಾನಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲೆಲ್ಲಾ ಕೇಂದ್ರ ರಾಜಕಾರಣಕ್ಕೆ ಬರುವಂತೆ ಸಲಹೆ ನೀಡಿರುವುದಲ್ಲದೆ, ಬಹಿರಂಗ ಪಡಿಸಲಾಗದ ಕೆಲವು ವಿಚಾರಗಳನ್ನು ಮುಂದಿಟ್ಟಿದ್ದಾರೆ.

ಈಗಾಗಲೇ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಕೂಟಕ್ಕೆ ಯಾವ ಕ್ಷೇತ್ರಗಳು ಎಂಬುದು ನಿಗದಿಯಾಗಿವೆ. ತಮ್ಮ ಪಕ್ಷಕ್ಕೆ ದಕ್ಕಿರುವ ಕ್ಷೇತ್ರಗಳಲ್ಲಿ ಹಾಸನ ಹೊರತುಪಡಿಸಿ ಉಳಿದ ಕ್ಷೇತ್ರಗಳಲ್ಲಿ ಚುನಾವಣಾ ಸಭೆಗಳನ್ನು ನಡೆಸಿದ್ದಾರೆ. ಮಂಡ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂರು ಬಾರಿ ಸ್ಥಳೀಯ ಮುಖಂಡರೊಂದಿಗೆ ಸಮಾಲೋಚನೆ ಮಾಡಿರುವ ಕುಮಾರಸ್ವಾಮಿ ಅಭ್ಯರ್ಥಿ ಹೆಸರು ಬಹಿರಂಗ ಪಡಿಸಿಲ್ಲ. ಅವರ ಮನಸ್ಸಿನಲ್ಲಿ ಪಾಂಡವಪುರದ ಮಾಜಿ ಸಂಸದ ಪುಟ್ಟರಾಜು ಅವರನ್ನು ಕಣಕ್ಕಿಳಿಸಬೇಕೆಂಬ ಇಚ್ಛೆ ಇದೆ. ಆದರೆ, ಪ್ರಧಾನಿ ಅವರ ಮಾತನ್ನು ತಳ್ಳಿಹಾಕಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ.

ರಾಜ್ಯಸಭೆಗೆ ಇನ್‌ಫೋಸಿಸ್ ಡಾ.ಸುಧಾಮೂರ್ತಿ



ಮೈಸೂರು, ಮಾ. 9– ದಾನಿಗಳು ಹಾಗೂ ಲೇಖಕಿಯೂ ಆದ ಇನ್‌ಫೋಸಿಸ್‌ನ ಸುಧಾಮೂರ್ತಿ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂತರಾಷ್ಟ್ರೀಯ ಮಹಿಳಾ ದಿನದಂದೇ ರಾಜ್ಯಸಭೆಗೆ ನಾಮನಿರ್ದೇಶನ ಮಾಡಿದ್ದಾರೆ. ಕೇಂದ್ರ ಸರ್ಕಾರ ಸುಧಾಮೂರ್ತಿ ಅವರ ಹೆಸರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿ ಶಿಫಾರಸು ಮಾಡಿತ್ತು. ಇದನ್ನು ರಾಷ್ಟ್ರಪತಿಯವರು ಅನುಮೋದಿಸಿದ್ದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗಡೆಯವರನ್ನು ನಾಮನಿರ್ದೇಶನ ಮಾಡಲಾಗಿತ್ತು. ● 9ನೇ ಪುಟಕ್ಕೆ

ಮೈಸೂರು–ಚೆನ್ನೈ ನಡುವೆ ಮತ್ತೊಂದು ವಂದೇ ಭಾರತ್ ಎಕ್ಸ್‌ಪ್ರೆಸ್

● ಬುಧವಾರ ಹೊರತು ವಾರದ 6 ದಿನ ಸಂಚಾರ
● ಮಾ.12ರಂದು ಚೆನ್ನೈನಲ್ಲಿ ಪ್ರಧಾನಿ ಮೋದಿ ಚಾಲನೆ




ಮೈಸೂರು, ಮಾ.9(ಎಂಕೆ)– ಮೈಸೂರು–ಚೆನ್ನೈ ನಡುವೆ ಮತ್ತೊಂದು 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಸಂಚಾರ ಸದ್ಯದಲ್ಲಿಯೇ ಆರಂಭವಾಗಲಿದೆ. ಸಂಸದ ಪ್ರತಾಪ್ ಸಿಂಹ ಅವರ ಮನವಿ ಮೇರೆಗೆ ಮೈಸೂರು–ಚೆನ್ನೈ ನಡುವೆ ಮತ್ತೊಂದು 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಸಂಚಾರ ಆರಂಭಿಸಲಿದ್ದು, ಮಾ.12 ರಂದು ಚೆನ್ನೈನಿಂದ ಪ್ರಧಾನಿ ಮೋದಿಯವರು ಸಂಚಾರಕ್ಕೆ ಹಸಿರು ನಿಶಾನೆ ತೋರಲಿದ್ದಾರೆ. ಈಗಾಗಲೇ ಮೈಸೂರು–ಚೆನ್ನೈ ನಡುವೆ ಬುಧವಾರ ಹೊರತುಪಡಿಸಿ ವಾರದ 6 ದಿನಗಳು ಮಧ್ಯಾಹ್ನ 1.05ಕ್ಕೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಚೆನ್ನೈಗೆ ಸಂಚರಿಸುತ್ತಿದ್ದು, ಹೊಸದಾಗಿ ಆರಂಭವಾಗುವ ಮತ್ತೊಂದು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಾಡಿಯೂ ಬುಧವಾರ ಹೊರತು ವಾರದ 6 ದಿನಗಳು ಬೆಳಗ್ಗೆ 6 ಗಂಟೆಗೆ ಮೈಸೂರಿನಿಂದ ಹೊರಟು ಮಧ್ಯಾಹ್ನ 12.20ಕ್ಕೆ ಚೆನ್ನೈ ತಲುಪಲಿದೆ. ಮತ್ತೆ ಸಂಜೆ 5 ಗಂಟೆಗೆ ಚೆನ್ನೈನಿಂದ ಹೊರಟು ರಾತ್ರಿ 11.20ಕ್ಕೆ ಮೈಸೂರಿಗೆ ಆಗಮಿಸಲಿದೆ. ಮಾರ್ಗದ ನಡುವೆ ಮಂಡ್ಯ, ಬೆಂಗಳೂರು, ಕೃಷ್ಣರಾಜಪುರಂ, ಜೋಲಾರ್‌ಪೇಟ್, ಕಟ್ಪಾಡಿಯಲ್ಲಿ ನಿಲ್ಲಿಸಲಿದೆ(ಸ್ಟಾಪ್) ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಕುಡಿಯುವ ನೀರಿನ ನೆಪದಲ್ಲಿ ತಮಿಳುನಾಡಿಗೆ ಕಾವೇರಿ ನೀರು...!?

ಶ್ರೀರಂಗಪಟ್ಟಣ, ಮಾ,9(ವಿನಯ್ ಕಾರೇಕುರ)–ಈ ಬಾರಿ ಅವಧಿಗೂ ಮುನ್ನವೇ ಬಿಸಿಲು ಬೇಗೆ ಕಾವೇರಿದ್ದು, ಕಾವೇರಿ ಕೊಳ್ಳ ಸೇರಿದಂತೆ ಮುಂಗಾರು ಹಾಗೂ ಹಿಂಗಾರೂ ಕೂಡ ಕೈ ಕೊಟ್ಟ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಭೀಕರ ಬರಗಾಲ ತಾಂಡವವಾಡುತ್ತಿದೆ, ಇಂತಹ ಸಂದರ್ಭದಲ್ಲಿ ಬೆಂಗಳೂರಿ ನಲ್ಲಿ ತಲೆದೋರಿರುವ ಕುಡಿಯುವ ನೀರಿನ ಭವಣೆ ನೀಗಿಸುವ ನೆಪದಲ್ಲಿ ತಮಿಳುನಾಡಿಗೆ ಕೃಷ್ಣರಾಜ ಸಾಗರ ಜಲಾಶಯದಿಂದ 2600ಕ್ಕೂ ಹೆಚ್ಚು ಕ್ಯೂಸೆಕ್ ನೀರನ್ನು ನದಿಗೆ ಬಿಡುತ್ತಿದೆ.

ಈಗಾಗಲೇ ಬೆಂಗಳೂರು, ಮಂಡ್ಯ ಮತ್ತು ಮೈಸೂರು ಸೇರಿದಂತೆ ಕಾವೇರಿ ನದಿ ನೀರನ್ನೇ ನಂಬಿದ್ದ ಹಲವು ಜಿಲ್ಲೆಗಳು ಜಲಕ್ಷಾಮ ಎದುರಿಸುತ್ತಿದ್ದು, ವ್ಯವಸಾಯಕ್ಕಿರಲಿ ಕುಡಿಯುವ ನೀರಿಗೂ ಹಾಹಾಕಾರ ಎದುರಿಸುತ್ತಿವೆ. ಈ ಸಂದರ್ಭದಲ್ಲಿ ಸರ್ಕಾರ ನಿನ್ನೆ ರಾತ್ರಿಯಿಂದ ನದಿಗೆ ನೀರು ಹರಿಸುತ್ತಿದೆ. ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದು, ಬೆಂಗಳೂರಿನ ಜನರ ಕುಡಿಯುವ ನೀರಿಗೆಂದು ಹೇಳಿ ತಮಿಳು ನಾಡಿಗೆ ನೀರು ಬಿಡಲಾಗುತ್ತಿದೆ ಎಂದು ಹೇಳಿದ್ದಾರೆ.

ಈಗಾಗಲೇ ಕುಡಿಯುವ ನೀರಿಲ್ಲದೆ ಜನ ಹಾಗೂ ಜಾನುವಾರುಗಳು ಹಣ ನೀಡಿ ಟ್ಯಾಂಕರ್‌ಗಳ ಮೂಲಕ ತಮ್ಮ ಹೊಲ ಜಮೀನುಗಳಿಗೆ ಹಾಗೂ ದಿನ ನಿತ್ಯದ ಕೆಲಸಗಳಿಗೆ ನೀರನ್ನು ಖರೀದಿಸು ತ್ತಿದ್ದಾರೆ. ಮಾರ್ಚ್ ತಿಂಗಳ ಆರಂಭದಲ್ಲೇ ನೀರಿನ ಸಮಸ್ಯೆ ಉಂಟಾಗಿದೆ. ಇನ್ನು ಏಪ್ರಿಲ್, ಮೇ ತಿಂಗಳಲ್ಲಿ 'ದೇವರೇ ಗತಿ!' ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶಗಳ ಅನೇಕ ಭಾಗಗಳಲ್ಲಿ ಕಠಿಣ ಪರಿಸ್ಥಿತಿ ಇದೆ. ಅದರಲ್ಲಿಯೂ ನಗರದ ಹೊರ ವಲಯದಲ್ಲಿ ಸಮಸ್ಯೆ ವಿಪರೀತವಾಗಿದೆ. ದುಡ್ಡಿದ್ದವರು ಟ್ಯಾಂಕರ್ ನೀರು ಖರೀದಿಸಿ ತುಂಬಿಸಿ ಟ್ಟುಕೊಳ್ಳುತ್ತಿದ್ದಾರೆ. ಬಡ ವರ್ಗದವರು ಸಂಘ, ಸಂಸ್ಥೆಗಳು, ಬಿಬಿಎಂಪಿ ಪೂರೈಸುವ ಉಚಿತ ನೀರಿಗಾಗಿ ಕಾಯುತ್ತಿದ್ದಾರೆ. ಟ್ಯಾಂಕರ್‌ಗಳನ್ನೂ ಅವಲಂಬಿಸಿರುವ ಬೆಂಗಳೂರು ಜನತೆ ಆರ್‌ಆರ್ ನಗರದ ಮೆಲೋಡಿ ಅಪಾರ್ಟ್‌ಮೆಂಟ್ಸ್, ಗೊಟ್ಟಿಗೆರೆಯ ಜೆಪಿಸಿ ಪಟೇಲ್ ಅಪಾರ್ಟ್‌ಮೆಂಟ್, ರಾಯರ ನೆರಳು ಅಪಾರ್ಟ್‌ಮೆಂಟ್ಸ್, ಚನ್ನಸಂದ್ರದ ಹಿಲ್ ವ್ಯೂ ರೆಸಿಡೆನ್ಸಿ, ಷಣ್ಮುಖ ರೆಸಿಡೆನ್ಸಿ, ಜ್ಞಾನಭಾರತಿ ಪ್ರೆಸ್ ಲೇಔಟ್‌ಗಳಲ್ಲಿ ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸುತ್ತಿದ್ದಾರೆ. ರಾಜರಾಜೇಶ್ವರಿ ನಗರದ ಐಡಿಯಲ್ ಹೋಮ್ಸ್ ಬಡಾವಣೆ, ಬಂಗಾರಪ್ಪ ಗುಡ್ಡ, ಕೆರೆಪಾಳ್ಯ, ಚನ್ನಸಂದ್ರ, ಗಟ್ಟಿಗೆರೆ, ರಾಮ್ಕೊ ಲೇಔಟ್ ಇನ್ನಿತರ ಕಡೆಗಳಿಗೆ ಜಲಮಂಡಳಿಯಿಂದಲೇ ಉಚಿತವಾಗಿ ನೀರು ಪೂರೈಕೆ ಮಾಡಲಾಗುತ್ತಿದೆ.



ತಲಾ 2000 ಲೀಟರ್ ಸಾಮರ್ಥ್ಯದ 4 ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಇಟ್ಟುಕೊಂಡು ನೀರು ಸಾಗಿಸುತ್ತಿದ್ದೇವೆ. ಒಂದು ವಾಹನ ದಿನಕ್ಕೆ ಏಳೆಂಟು ಟ್ರಿಪ್ ಮಾಡಲು ಸಾಧ್ಯವಾಗುತ್ತಿದೆ. ಬಿಸಿಲೇರುತ್ತಿದ್ದಂತೆ ಕೊಳವೆ ಬಾವಿಗಳಲ್ಲಿ ನೀರು ಕುಸಿಯುತ್ತಿದೆ. ಮಧ್ಯಾಹ್ನ ಒಂದು ಸಿಂಟೆಕ್ಸ್ ತುಂಬಿಸಬೇಕಿದ್ದರೆ ಒಂದೂವರೆ ತಾಸು ಬೇಕಾಗುತ್ತದೆ. ಅದಕ್ಕಾಗಿ ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿನಲ್ಲಿ ನೀರು ಪೂರೈಸುತ್ತಿದ್ದೇವೆ ಎಂದು ಎಂದು ಟ್ಯಾಂಕರ್‌ಗಳ ಮಾಲೀಕರು, ಚಾಲಕರು ಹೇಳುತ್ತಿದ್ದಾರೆ.

ನಕ್ಕರೆ ಅದೇ ಸ್ವರ್ಗ

ವೈದ್ಯರು : ನಿಮ್ಮ ನಾಡಿ ಒಂದೇ ಸಮನೆ ಬಡಿಯುತ್ತಿದೆ. ನಾಲಿಗೆ ಬಣ್ಣ ಕೊಂಚ ಬದಲಾಗಿದೆ. ಸರಿಯಾಗಿ ಹಸಿವಾಗುತ್ತದೆ ತಾನೇ?
ರೋಗಿ : ಕೆಲವೊಮ್ಮೆ ಆಗುತ್ತದೆ, ಕೆಲವೊಮ್ಮೆ ಇಲ್ಲ
ವೈದ್ಯರು : ಯಾವಾಗ ಹಸಿವಾಗುವುದಿಲ್ಲ?
ರೋಗಿ : ಹೊಟ್ಟೆ ತುಂಬಾ ಊಟ ಮಾಡಿದ ಮೇಲೆ!

ಮೈಸೂರು ಮಿತ್ರ
ಭಾನುವಾರ, 10 ಮಾರ್ಚ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಜ್ಞಾನಕ್ಕಾಗಿ ಹೂಡಿದ ಬಂಡವಾಳವು
ಅತೀ ಹೆಚ್ಚಿನ ಬಡ್ಡಿಯನ್ನು ತರುತ್ತದೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾವಿರ ಚಿತ್ತಾರವನ್ನು ಒಂದು ಮಸಿ ನುಂಗಿತು

ನಿಮ್ಮ ಪತ್ರಗಳು

■ ಪ್ರೀತಿಗೊಂದು ವಿಮೆ

ಮಾನ್ಯರೆ,

ಮನಸ್ಸಿಗೆ ಹಿತ ಹಾಗೂ ದಣಿವಿಗೆ ನೀರೆರೆದು ತಣಿಸಿ ಸಂತೈಸೋ ಜೀವ ಸಂಗಾತಿ. ಪ್ರೀತಿ ಅಂದರೆ ಸಕ್ಕರೆಯಂತೆ ಸಿಹಿಯಲ್ಲ ಅದು ತುಸು ಕಹಿಯಾಗಿಯೇ ಇರುತ್ತದೆ. ನಾಲಿಗೆಗೆ ಅಷ್ಟೇ ಕಹಿ, ದೇಹಕ್ಕೆ ಅದು ಅಮೃತ. ಪ್ರೀತಿಗೆ ಕಹಿ ಅಂದರೆ ಕೋಪ, ಅದು ಹಾಗೇನೆ ನನ್ನದೆಂಬ ಹೆಮ್ಮೆಯಲ್ಲಿ ದೇವರ ಮುಡಿಗೇರಿದ ಹೂವಿನ ಹಾಗೇ ಸಲ್ಲಿದ ಮೇಲೆ ಅದು ಅಲ್ಲಿಗೆ ಮೀಸಲು. ಒಮ್ಮೆ ಮುಡಿಸಿದ ಹೂ ಮತ್ತೆಲ್ಲಿಗೂ ಮುಡಿಸುವುದಿಲ್ಲ. ಕಾಳಜಿ ಒಮ್ಮೆ ಉಸಿರುಗಟ್ಟಿಸುತ್ತದೆ. ಆದರೆ ಅದರ ಉದ್ದೇಶ ನನ್ನದೆಂಬ ಜರಿವ ಹೂವಿಗೆ ಕಾಳಜಿಯೆಂಬ ಪೊರೆ. ಬೊಗಸೆ ಕನಸುಗಳಲ್ಲಿ ಆಕೆಯ ಪಾಲು ತುಸು ಹೆಚ್ಚು.

ಆಸುಪಾಸಿನ ಜರುಗಿನ ವೈಭವದ ಮರೀಚಿಕೆಯ ಗತಿಗಳೆಲ್ಲವೂ ಮತಿಹೀನರಂತೆ ಚಿಂತಿಸುವಂತೆ ಮಾಡುತ್ತವೆ. ಕಳೆವ ಕ್ಷಣಗಳಲಿ ಋಣದ ಅರಿವನು ನೆನೆದು ಪಡೆದ ಫಲದ ಸವಿಯನು ಸವಿಯುವ ಮನಸ್ಥಿತಿ ಬಹುಮುಖ್ಯ. ಋಣದ ಅರಿವಿದ್ದ ನಮ್ಮ ಗುಣವು ಕೂಡ ಒಳಿತಿನ ಹಾದಿಲಿ ಸಾಗುತ್ತೆ.

ಜೀವನದ ಜೊತೆಗಾತಿಗೊಂದು ಪ್ರೀತಿಯ ವಿಮೆಯೊಂದು ಇರಲೇಬೇಕು. ಇಲ್ಲಿ ವಿಮೆ ಅಂದ್ರೆ ಕೂಡಿಟ್ಟ ಹಣವಲ್ಲ, ಆಕೆಗೆ ನಮ್ಮ ದೈನಂದಿನ ಅವಶ್ಯಕತೆಗಳನ್ನು ನೀಗುವ ಪ್ರತಿಯೊಂದು ಕೆಲಸವು ತಿಳಿದಿರಬೇಕು. ಮನೆಗೆ ಗ್ಯಾಸ್ ಕಾಯ್ದಿರಿಸುವುದು, ದಿನಸಿ ತರುವುದು, ಕರೆಂಟ್ ಬಿಲ್ ಕಟ್ಟುವುದು, ಮಕ್ಕಳ ಆಗು–ಹೋಗುಗಳ ನಿಭಾಯಿಸೋದು. ನಮ್ಮ ಬ್ಯಾಂಕ್ ವ್ಯವಹಾರಗಳ ಅರಿವು ಆಕೆಗೆ ಇರಬೇಕು. ಆನ್‌ಲೈನ್ ಬ್ಯಾಂಕಿಂಗ್ ಹಾಗೂ ಖಾತೆಗಳನ್ನು ನಿಭಾಯಿಸುವುದನ್ನು ಕಲಿಸಬೇಕು. ಜೀವನವೇ ಹಾಗೇ ಎಲ್ಲರೂ ನಮ್ಮವರು ಎಂಬ ಭಾವನೆಯಲ್ಲಿದ್ದು, ನಮಗೆ ನಾವೇ ಹೊರತು ಬೇರೆ ಯಾರಿಲ್ಲ ಎಂಬಂತೆ ಬದುಕುವುದು.

ಆಕೆಗೆ ಪ್ರೀತಿಯ ಜೊತೆ ತಾನು ಒಬ್ಬಳೇ ಬದುಕಬಲ್ಲೆ ಎಂಬ ಆತ್ಮವಿಶ್ವಾಸ ಹಾಗೂ ತಯಾರಿ ನೀಡಲೇಬೇಕು. ಇದೇ ನಾವು ಆಕೆಗೆ ನೀಡುವ ವಿಮೆ. ನಾವು ಆಕೆಯ ಜೊತೆ ಮುಂದೊಂದು ದಿನ ಇಲ್ಲದಿದ್ದರೂ ಆಕೆಗೆ ತನ್ನ ಜೀವ ಘಟ್ಟವನ್ನು ತಲುಪಲು ಇವೆಲ್ಲವೂ ಅತ್ಯಮೂಲ್ಯ.

ಆಕೆಯ ಎದೆಗೆ ಒಂದಷ್ಟು ಬೆಲೆ ಕಟ್ಟಲಾಗದ ನೆನಪಿನ ಕಾಣಿಕೆಗಳ ಹೊರತುಪಡಿಸಿ ಬೆಲೆ ಕಟ್ಟಲಾಗದ ಭಾವ ಗುಚ್ಛಗಳ ನೆನಪನಿತ್ತುಬಿಡಿ. ನಿಮ್ಮ ಹೆಸರಿನ ಮುಂದೆ ಅವಳ ಹೆಸರಿರಲಿ. ನಡೆವ ಹಾದಿಯಲಿ ಆಕೆಯ ಕಿರುಬೆರಳ ಸಾಂಗತ್ಯ ತುಸು ಹೆಚ್ಚೆ ಇರಲಿ. ಇರುಳಲಿ ತುಸು ಮರುಳನಾಗಿ ಅವಳೆದೆಗೆ ಒರಗಿ ಮರೆತು ಬಿಡಿ ಜಗವ. ವರಕವಿ ಬೇಂದ್ರೆಯವರ ನುಡಿಯಂತೆ 'ಹುಟ್ಟಿನ ಹೊಟ್ಟೆಯಲ್ಲಿ ಸಾವಿನ ಸಾಮಾನ್ಯಿರುವ'. ನಮ್ಮ ಜೀವನ ನೀರಿನ ಮೇಲಿನ ಗುಳ್ಳೆಯಂತೆ ನಾವಿರುವಾಗಲೇ ಪ್ರೀತಿಗೊಂದು ವಿಮೆ ಮಾಡಿಸಿಬಿಡಿ.

–ಮಂಜೇಶ್ ದೇವಗಳ್ಳಿ, ಮೈಸೂರು

■ ರಾಜ್ಯದಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಳ

ಮಾನ್ಯರೆ,

ರಾಜ್ಯದಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಳವಾಗಿರುವುದು ಸಂತೋಷಕರ ಸಂಗತಿಯಾಗಿದೆ. ಈಗಾಗಲೇ ಆನೆಗಳ ಗಣತಿಯಲ್ಲಿ ಮೊದಲ ಸ್ಥಾನ ಪಡೆದಿರುವ ನಮ್ಮ ರಾಜ್ಯ ಹುಲಿ ಗಣತಿಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಇದೀಗ ಚಿರತೆಗಳ ಗಣತಿಯಲ್ಲಿ ಸಹ 3ನೇ ಸ್ಥಾನದಲ್ಲಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ತನ್ಮೂಲಕ ನಮ್ಮ ರಾಜ್ಯ ವನ್ಯಜೀವಿಗಳ ಆವಾಸ ಸ್ಥಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

2022 ರಲ್ಲಿ ನಡೆಸಿದ ಗಣತಿ ಪ್ರಕಾರ ದೇಶದಲ್ಲಿ ಸುಮಾರು 13,874 ಚಿರತೆಗಳಿವೆ ಎಂದು ಕೇಂದ್ರ ಪರಿಸರ ಸಚಿವಾಲಯದ ವರದಿ ತಿಳಿಸಿದೆ. ನಮ್ಮ ರಾಜ್ಯದಲ್ಲಿ ಒಟ್ಟಾರೆ 1879 ಚಿರತೆಗಳಿದ್ದು, ಕರ್ನಾಟಕ ಗಣತಿಯಲ್ಲಿ 3ನೇ ಸ್ಥಾನದಲ್ಲಿದೆ. ಮಧ್ಯಪ್ರದೇಶ 3,907 ಚಿರತೆಗಳೊಂದಿಗೆ ಮೊದಲ ಸ್ಥಾನದಲ್ಲಿದೆ. ಮಹಾರಾಷ್ಟ್ರ 1985 ಚಿರತೆಗಳೊಂದಿಗೆ 2 ನೇ ಸ್ಥಾನದಲ್ಲಿದ್ದು, ನಂತರದ ಸ್ಥಾನದಲ್ಲಿ ನಮ್ಮ ರಾಜ್ಯವಿದೆ. ಚಿರತೆಗಳ ಸಂಖ್ಯೆ ಹೆಚ್ಚಳದ ಜೊತೆ, ಮೈಸೂರು ಭಾಗದಲ್ಲಿ ಮಾನವ–ವನ್ಯಜೀವಿ ಸಂಘರ್ಷವು ಸಹ ಹೆಚ್ಚುತ್ತಿದೆ. 2023 ರ ಫೆಬ್ರವರಿ 1 ರಂದು ರಾಜ್ಯ ಸರ್ಕಾರ, ಚಿರತೆ ಕಾರ್ಯಪಡೆ ರಚಿಸಿದ ಬಳಿಕ ಒಂದು ವರ್ಷದಲ್ಲಿ ಮೈಸೂರು, ಮಂಡ್ಯದಲ್ಲಿ 69 ಚಿರತೆಗಳನ್ನು ಸೆರೆ ಹಿಡಿಯಲಾಗಿದೆ. ಚಿರತೆಗಳು ಕಾಡಿನಿಂದ ನಾಡಿಗೆ ಬಂದು ಜನರಲ್ಲಿ ಭಯ ಮತ್ತು ಆತಂಕವನ್ನು ಸಹ ಸೃಷ್ಟಿಸುತ್ತಿದೆ. ಚಿರತೆಗಳ ದಾಳಿಯಿಂದ ಕಾಡಂಚಿನ ಗ್ರಾಮಗಳ ಅನೇಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಬಹುಶಃ ಕಾಡಿನಲ್ಲಿ ಅವುಗಳಿಗೆ ಆಹಾರ ದೊರಕದಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಒಂದು ವರದಿಯ ಪ್ರಕಾರ ದೇಶದ ಶೇಕಡಾ 59 ರಷ್ಟು ಚಿರತೆಗಳು ಸಂರಕ್ಷಿತ ಪ್ರದೇಶಗಳಿಂದ ಹೊರಗಿರುವುದು ತೀವ್ರ ಆತಂಕಕಾರಿ ವಿಚಾರ. ಚಿರತೆಗಳ ಹೆಚ್ಚಳದೊಂದಿಗೆ, ಅವುಗಳಿಂದಾಗುವ ಉಪಟಳವನ್ನು ನಿವಾರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, ಮೊ. 9341731661

■ ಕಾಂತರಾಜ ಅರಸ್ ರಸ್ತೆ ದುರಸ್ತಿಗೊಳಿಸಿ

ಮಾನ್ಯರೇ,



ಮೈಸೂರು ಸರಸ್ವತಿಪುರಂನ ಕಾಂತರಾಜ ಅರಸ್ ರಸ್ತೆಯಲ್ಲಿನ ಭಾರತ್ ಪೆಟ್ರೋಲ್ ಬಂಕ್ ಎದುರು ಪೈಪ್ ಅಳವಡಿಸುವ ಸಲುವಾಗಿ ರಸ್ತೆಯನ್ನು ಅಗೆದು, ಅಳವಡಿಕೆಯ ನಂತರ ರಸ್ತೆ ಗುಂಡಿಯನ್ನು ವ್ಯವಸ್ಥಿತವಾಗಿ ಮುಚ್ಚದೆ ಹಳ್ಳ ದಿಣ್ಣೆಗಳಾಗಿ ವಾಹನ ಸವಾರರಿಗೆ ಬಹಳ ತೊಂದರೆಯಾಗಿತ್ತು. ಈ ಸಂಬಂಧ 'ಮೈಸೂರು ಮಿತ್ರ' ನಿಮ್ಮ ಪತ್ರಗಳು ವಿಭಾಗದಲ್ಲಿ ಸುದ್ದಿ ಪ್ರಕಟವಾಗುತ್ತಿದ್ದಂತೆ, ಎಂ ಸ್ಯಾಂಡ್ ಮತ್ತು ಜಲ್ಲಿ ಕಲ್ಲುಗಳಿಂದ ದುರಸ್ತಿ ಕಾರ್ಯವನ್ನೂ ಮಾಡಿದರು. ಆದರೆ ಹದಿನೈದು ದಿನ ಕಳೆದರೂ ಡಾಂಬರ್ ಅಥವಾ ಕಾಂಕ್ರೀಟ್ ಹಾಕುವವರು ಬರಲೇ ಇಲ್ಲ! ಹೀಗಾಗಿ, ಪುನಃ ಆ ಜಾಗ ಹಳ್ಳವಾಗಿ, ಜಲ್ಲಿ ಕಲ್ಲುಗಳೆಲ್ಲಾ ರಸ್ತೆ ಪೂರ ಚೆಲ್ಲಾಪಿಲ್ಲಿಯಾಗಿ ಈ ರಸ್ತೆಯಲ್ಲಿ ವಾಹನ ಚಲಾಯಿಸುವುದು ಮೊದಲಿಗಿಂತಲೂ ದುಸ್ತರವಾಗಿ ಬಿಟ್ಟಿದೆ. ಅದೇನೋ ಹೇಳ್ತಾರಲ್ಲ, ಗಣೇಶನ ಮಾಡಿ ಅಂದ್ರೆ, ಶಿವರಾತ್ರಿ ಬಂತಲ್ಲ ಅದಕ್ಕೋ ಏನೋ ಅವರಪ್ಪ ಶಿವಪ್ಪನ ಮಾಡಿ ಕೂರಿಸಿದ್ದಾರೆ! ಅದೇನೆ ಇರಲಿ ಸಂಬಂಧಪಟ್ಟವರು ಇನ್ನಾದರೂ ತುರ್ತಾಗಿ ಎಚ್ಚೆತ್ತು ರಸ್ತೆಯನ್ನು ದುರಸ್ತಿಗೊಳಿಸಿ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

11. ರಾಜವೈದ್ಯ ಚಂದ್ರಭಾನ್ ಸಿಂಗ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

ಪಾಶ್ಚಿಮಾತ್ಯ ವೈದ್ಯಕೀಯ ಪದ್ಧತಿ ಇಂದಿನಂತೆ ಸಾಕಷ್ಟು ಅಭಿವೃದ್ಧಿ ಹೊಂದದೆ, ಚಿಕಿತ್ಸಾ ಸೌಲಭ್ಯಗಳೂ ಇಲ್ಲದಿದ್ದ ದಿನಗಳಲ್ಲಿ ಜನ ಸಾಂಪ್ರದಾಯಿಕ ಆಯುರ್ವೇದ, ಯುನಾನಿ ಇತ್ಯಾದಿ ವೈದ್ಯ ಪದ್ಧತಿಗಳನ್ನು ಅವಲಂಬಿಸಬೇಕಾಗಿತ್ತು. ಈ ವೈದ್ಯರುಗಳಿಂದಲೇ ಔಷಧೋಪಚಾರ ಪಡೆದುಕೊಳ್ಳಬೇಕಾಗುತ್ತಿತ್ತು ಅಂದಿಗೆ ಆಯುರ್ವೇದ ಚಿಕಿತ್ಸೆ ನೀಡಬಲ್ಲ ಪ್ರಖ್ಯಾತ ವೈದ್ಯರಿದ್ದರು. ಅಗತ್ಯವಾದ ಬೇರು, ನಾರು ಸಾಕಷ್ಟು ಮತ್ತು ಸುಲಭವಾಗಿ ದೊರೆಯುತ್ತಿದ್ದು, ಈ ಪಂಡಿತರು ತಯಾರಿಸುತ್ತಿದ್ದ ಔಷಧಿಗಳು ಹೆಚ್ಚು ಪರಿಣಾಮಕಾರಿಯಾಗಿದ್ದವು. ರೋಗ ರುಜಿನಗಳನ್ನು ಬಹುಮಟ್ಟಿಗೆ ವಾಸಿ ಮಾಡುತ್ತಿದ್ದವು. ಅಂತಹ ಖ್ಯಾತ ಆಯುರ್ವೇದ ಪಂಡಿತರಲ್ಲಿ 'ರಾಜವೈದ್ಯ' ಚಂದ್ರಭಾನ್ ಸಿಂಗ್ (1912–1974) ಒಬ್ಬರು.

ಪಂಡಿತ್ ಪಿ.ಹೆಚ್.ಚಂದ್ರಭಾನ್ ಸಿಂಗ್ ಅವರ ಹಿರಿಯರಾದ ಧೀರ್‌ಸಿಂಗ್ ಅವರು ಉತ್ತರ ಪ್ರದೇಶದ ಕಾನ್ಪುರ ಜಿಲ್ಲೆಯಿಂದ ಬಂದು ಮೈಸೂರಿನಲ್ಲಿ ನೆಲೆಸಿದ್ದರು. ಮಹಾರಾಜ ನಂಜರಾಜ ಒಡೆಯರ ಸೈನ್ಯದಲ್ಲಿ (1766–1770) ಉದ್ಯೋಗವನ್ನು ಪಡೆದುಕೊಂಡು ತಮ್ಮ ಸೇವೆಯಿಂದ ಅವರ ಮೆಚ್ಚುಗೆ ಗಳಿಸಿದರು. ಆನೆಯನ್ನು ಮತ್ತು ಆಭರಣಗಳನ್ನು ಬಹುಮಾನವಾಗಿ ಪಡೆದುಕೊಂಡರು.

ಹೈದರಾಲಿ ಪ್ರಬಲನಾದಾಗ (1776–1801) ಧೀರ್ ಸಿಂಗ್ ಕಿತ್ತೂರಿಗೆ ಹೋದರು. ಅವರ ಮಗನಿಗೆ ಚಿತ್ರದುರ್ಗದ ಮದಕರಿ ನಾಯಕನ ಬಳಿ ಉದ್ಯೋಗ ದೊರೆಯಿತು. ಕೆಲಕಾಲದ ನಂತರ ಅವರು ಆ ಸ್ಥಳ ಬಿಟ್ಟು ಗುತ್ತಿಯ ಮುರ್ಠಾರಿ ರಾವ್ ಬಳಿ ಸೇವೆಗೆ ಸೇರಿದರು. ಅಲ್ಲಿ ಕೆಲಕಾಲ ಇದ್ದಮೇಲೆ ಮತ್ತೆ ಕಿತ್ತೂರಿಗೆ ಹಿಂತಿರುಗಿದರು. ಮೈಸೂರಿನಿಂದ ದೂರವಿದ್ದ ಹರಿಸಿಂಗರ ಮಗ ಭಾನುಸಿಂಗರಿಗೆ ಹೈದರಾಲಿಯಿಂದ ಆಹ್ವಾನ ಬರಲಾಗಿ ಅವರು ಮತ್ತೆ ಮೈಸೂರಿನ ಸೈನ್ಯದ ಸೇವೆಗೆ ಸೇರಿದರು. ಕಡಪ ಕದನದಲ್ಲಿ ಭಾಗವಹಿಸಿ ಅವರು ವಿಜಯ ಗಳಿಸಿದಾಗ ಅವರ ಸಾಹಸವನ್ನು ಮೆಚ್ಚಿದ ಹೈದರ್ ಅವರಿಗೆ ಐದು ಕತ್ತಿಗಳು ಮತ್ತು ಚಿನ್ನದ ಆಭರಣಗಳನ್ನು ಬಳುವಳಿ ನೀಡಿದ. ಹೈದರಾಲಿ ಹಾಗೂ ಶಾಮ್ ಸಿಂಗ್ ಅವರ ನಡುವೆ ನಡೆದ ಕದನದಲ್ಲಿ ಶಾಮ್ ಸಿಂಗ್ ಅವರ ಸೋಲಿಗೆ ಭಾನುಸಿಂಗರು ಕಾರಣರಾದರು. ಟಿಪ್ಪು ಸುಲ್ತಾನ್ ಅಧಿಕಾರ ವಹಿಸಿಕೊಂಡ ನಂತರ ಭಾನುಸಿಂಗ್ ಅವರಿಗೆ 'ಜಮಾದಾರ್' ಹುದ್ದೆಯಲ್ಲಿ ಬಡ್ತಿ ದೊರಕಿತು. ಅನಂತರ ಅವರಿಗೆ ಕದನವೊಂದರಲ್ಲಿ ಕತ್ತಿ ಪೆಟ್ಟು ಬಿದ್ದು ಅದೇ ನೋವಿನಿಂದ ನಿಧನರಾದರು.

ತಂದೆಯ ಮರಣಾನಂತರ ರಾಜರಾಮರಿಗೆ ಸುಭೇದಾರ್ ಉದ್ಯೋಗ ಹಾಗೂ ಕರಡಿಗೆರೆ ಗ್ರಾಮದ ಇನಾಂ ದೊರೆಯಿತು. ರಾಜರಾಮರಿಗೂ ಕರಿಘಟ್ಟದ ಹೋರಾಟದಲ್ಲಿ ಪೆಟ್ಟು ಬಿತ್ತು. ಅವರು ತೋರಿಸಿದ ಧೈರ್ಯಕ್ಕೆ ಬಹುಮಾನ ಸಹ ಬಂದಿತ್ತು (1799–1811). ಟಿಪ್ಪುವಿನ ಮರಣಾನಂತರ ರಾಜರಾಮರಿಗೆ ಪೂರ್ಣಯ್ಯನವರಿಂದ ರಿಸಾಲ್ದಾರ್ ಆಗಿ ಬಡ್ತಿ ಲಭ್ಯವಾಯಿತು. ವೆಂಕಟಗಿರಿ ಪಾಳೆಯಗಾರನನ್ನು ಗೆದ್ದದ್ದಕ್ಕಾಗಿ 'ಅಫ್ತಾಬ್' ಬಿರುದು, ಬಹುಮಾನ ಪಡೆದುಕೊಂಡರು. ರಾಜರಾಮರ ಪುತ್ರ ಹರಿಸಿಂಗ್ ಮಾಲಿ ಸಾಹೇಬರ ಜೊತೆ ಪೂನಾಗೆ ಪ್ರಯಾಣ ಮಾಡಿ ಭೋನ್‌ಸ್ಲೆ ಮತ್ತು ಸಿಂಧ್ಯ ಅವರ ಮೇಲೆ ನಡೆದ ಕದನದಲ್ಲಿ ಭಾಗವಹಿಸಿ 1853ರಲ್ಲಿ ಭಕ್ಷಿಯಾಗಿ ನೇಮಕಗೊಂಡರು.

ಹರಿಸಿಂಗರ ಮರಿಮಗನೇ ಆಯುರ್ವೇದ ಪಂಡಿತ ಚಂದ್ರಭಾನುಸಿಂಗ್. ತಂದೆ ಹೆಸರಾಂತ ಮನೆತನದ ವೈದ್ಯರಾದ ಪಂಡಿತ್ ಹರಿಸಿಂಗ್. ಇವರ ಯಾತ್ರಾ ಸ್ಥಳ ನಂಜನಗೂಡು ತಾಲೂಕಿಗೆ ಸೇರಿದ ಸುತ್ತೂರು ಮತ್ತು ಬೆಳಗಲಿ ಗ್ರಾಮ. ಇವರ ತವರೂರು ಕ್ಲೋಸ್‌ಪೇಟೆ, ಇಂದಿನ ರಾಮನಗರ. ರಾಜಧಾನಿ ಮೈಸೂರಿಗೆ ತಂದೆಯ ಜೊತೆ ಪ್ರಯಾಣ ಮಾಡಿ ಚಂದ್ರಭಾನುಸಿಂಗ್ ತಂದೆಯಿಂದ ಆಯುರ್ವೇದ ವಿದ್ಯೆಯಲ್ಲಿ ತರಬೇತಿ ಪಡೆದರು. ಮಾತೃಭಾಷೆ ಹಿಂದಿ ಅಲ್ಲದೆ ಕನ್ನಡ ಮತ್ತಿತರ ಭಾಷೆಗಳಲ್ಲಿ ವ್ಯವಹಾರ ಪಡೆದುಕೊಂಡರು. 1894–1901ರಲ್ಲಿ ಮಹಾರಾಣಿ ಅವರು ರೀಜೆಂಟ್ ಆಗಿದ್ದಾಗ ಗುರುಕಾರ್ ಬಸವಲಿಂಗಪ್ಪನವರಿಗೆ ಹರಿಸಿಂಗರ ಪರಿಚಯವಾಗಿದ್ದು ಚಂದ್ರಭಾನುಸಿಂಗ್ ಅವರಿಗೆ ಲೋಕರಂಜನ್ ಮಹಲ್ ಇಲಾಖೆಯಲ್ಲಿ ಕೆಲಸ ನೀಡಿದರು. 1902ರಿಂದ 1912ರವರೆಗೆ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಕಂಠೀರವ ನರಸಿಂಹರಾಜ ಒಡೆಯರಿಗೆ ಸೇವೆ ಸಲ್ಲಿಸುವ ಅವಕಾಶ ಅವರಿಗೆ ದೊರೆಯಿತು.

ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಒಮ್ಮೆ ಬೆನ್ನುಫಣಿ ಕಾಣಿಸಿಕೊಂಡಾಗ ಸರಿಯಾದ ಚಿಕಿತ್ಸೆ ಲಭ್ಯವಾಗದೆ ಖಾಯಿಲೆ ಜಾಸ್ತಿಯಾಗಲು ಪ್ರಾರಂಭವಾದಾಗ ಅವರು ಚಂದ್ರಭಾನ್ ಸಿಂಗ್ ಅವರಿಗೆ ಹೇಳಿ ಕಳುಹಿಸಿದರಂತೆ. ಅದರಂತೆ ಚಂದ್ರಭಾನ್ ಸಿಂಗ್ ಅವರು ಅರಮನೆಗೆ ಬಂದು, ಕೃಷ್ಣರಾಜ ಒಡೆಯರನ್ನು ಪರಿಶೀಲಿಸಿ, ಚಿಕಿತ್ಸೆ ಪ್ರಾರಂಭಿಸಲಾಗಿ ಕೆಲ ದಿನಗಳಲ್ಲಿ ಬೆನ್ನುಫಣಿ ವಾಸಿಯಾಗಿ, ಮಹಾರಾಜರು ಚೇತರಿಸಿಕೊಂಡರಂತೆ. ಇವರ ಚಿಕಿತ್ಸೆಯನ್ನು ಮೆಚ್ಚಿದ ಮಹಾರಾಜರು ಇವರಿಗೆ 'ರಾಜವೈದ್ಯ' ಬಿರುದು ನೀಡಿ ಗೌರವಿಸಿದರು.

1912ರಲ್ಲಿ ಪ್ಲೇಗ್ ವ್ಯಾಧಿ ಬಂದು ಅವರು ಅರಮನೆ ಕೆಲಸ ಬಿಟ್ಟು, ಶ್ರೀಸತ್ಯನಾರಾಯಣ ವೈದ್ಯಶಾಲೆಯನ್ನು ಸ್ಥಾಪಿಸಿ ಹಗಲಿರುಳೆನ್ನದೆ ನಿರಂತರ ಉಚಿತ ಸೇವೆ ನೀಡಲು ಪ್ರಾರಂಭಿಸಿದರು. ಹಾಗೆ ಸೇವೆ ಮಾಡುವಾಗ ಅರಮನೆ–ಗುರುಮನೆಗಳ ಪ್ರೀತಿ–ವಿಶ್ವಾಸವನ್ನು ಗಳಿಸಿದರು.

ಹಲವಾರು ಸಂಸ್ಥೆಗಳು ಚಂದ್ರಭಾನು ಸಿಂಗ್ ಅವರ ಸೇವೆಯನ್ನು ಗುರುತಿಸಿ ಇವರಿಗೆ 'ಆಯುರ್ವೇದೋಪಾಧ್ಯಾಯ', 'ಆಯುರ್ವೇದ ಬೃಹಸ್ಪತಿ', 'ಆಯುರ್ವೇದ ಸೇವಾರತ್ನ', 'ಭಿಷಗ್ರತ್ನ' 'ಚಿಕಿತ್ಸಾ ವಿಶಾರದ' 'ವೈದ್ಯಭೂಷಣ', 'ವೈದ್ಯ ಚಿಂತಾಮಣಿ', 'ವೈದ್ಯಶಿರೋಮಣಿ', 'ಆಯುರ್ವೇದ ಚಕ್ರವರ್ತಿ' ಮುಂತಾದ ಬಿರುದು–ಬಹುಮಾನಗಳನ್ನು ನೀಡಿ ಗೌರವಿಸಲಾಯಿತು. ಆಂಧ್ರದ ಆಯುರ್ವೇದ ಸಂಸ್ಥೆಯಿಂದ ಮನ್ನಣೆ ಮತ್ತು ಗೌರವ ಸದಸ್ಯತ್ವವೂ ಪ್ರಾಪ್ತವಾಯಿತು. ಬಿಹಾರದ ಅಖಿಲ ಭಾರತೀಯ ಆಯುರ್ವೇದ ಪೀಠದವರು 'ಡಾಕ್ಟರ್ ಆಫ್ ಸೈನ್ಸ್' ಪ್ರಶಸ್ತಿ ನೀಡಿ ಅವರ ಫಲಕಾರಿ ಚಿಕಿತ್ಸಾ ಪದ್ಧತಿಗೆ ಮನ್ನಣೆ ನೀಡಿತ್ತು.

ತಮ್ಮ ಚಿಕಿತ್ಸಾ ಕ್ರಮಗಳಿಂದ ಚಂದ್ರಭಾನ್ ಸಿಂಗ್ ದೇಶಾದ್ಯಂತ ಮನ್ನಣೆ–ಗೌರವ ಸಂಪಾದಿಸಿದ್ದರು. ತಮ್ಮದೇ ಕ್ರಮದಲ್ಲಿ ಇವರು ತಯಾರು ಮಾಡಿದ ಔಷಧಿಗಳು ಖ್ಯಾತಿ ಪಡೆದಿದ್ದವು. ಹಲವಾರು ಪ್ರದರ್ಶನಗಳಲ್ಲಿ ಅವು ಬಹುಮಾನಗಳನ್ನು ಪಡೆದುಕೊಂಡಿದ್ದವು. ಬಂಜೆ ರೋಗದಿಂದ ಮಕ್ಕಳಿಲ್ಲದೆ ಸಂಕಟಪಡುತ್ತಿದ್ದ ಸಾವಿರಾರು ದಂಪತಿಗಳಿಗೆ ಇವರು ಯಶಸ್ವಿಯಾಗಿ ಚಿಕಿತ್ಸೆ ನೀಡಿ ದೇಶಾದ್ಯಂತ ಖ್ಯಾತಿ ಪಡೆದಿದ್ದರು. ದೇಶದ ವಿವಿಧೆಡೆಗಳಲ್ಲಿಂದ ಇವರಲ್ಲಿಗೆ ದಂಪತಿಗಳು ಬಂದು ಚಿಕಿತ್ಸೆ ಪಡೆಯುತ್ತಿದ್ದರು.

ಚಂದ್ರಭಾನುಸಿಂಗ್ ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆಗಿದ್ದರು. ಮೈಸೂರಿನ ಆಯುರ್ವೇದ ಕಾಲೇಜಿನ ಆಸ್ಪತ್ರೆ ಮತ್ತು ಮೂಲಿಕಾ ವನವನ್ನು ಸ್ಥಾಪಿಸುವ ಕಾರ್ಯದಲ್ಲಿ ಮೊದಲಿಗರಾಗಿದ್ದರು. ಕಾಲೇಜು ಮಂಡಲಿಯ ಸಲಹೆಗಾರರಾಗಿ, ಪರೀಕ್ಷಕರಾಗಿ ಸೇವೆ ಸಲ್ಲಿಸಿದರು. ಮಹಾರಾಜ ಕೃಷ್ಣರಾಜ ಒಡೆಯರು ಮತ್ತು ಯುವರಾಜ ಕಂಠೀರವ ನರಸಿಂಹರಾಜ ಒಡೆಯರ ಕೃಪಾಕಟಾಕ್ಷದಿಂದ ರಾಜಪೂತರ ಕಾಲೋನಿಯನ್ನು ಏರ್ಪಡಿಸಿ ನರಸಿಂಹರಾಜ ಕಾಲೋನಿ ಎಂದು ಹೆಸರು ಬರಲು ಕಾರಣರಾಗಿದ್ದುದೂ ಅಲ್ಲದೆ ಮೊದಲ ನಿವೇಶನದಲ್ಲಿ ಸಾರ್ವಜನಿಕರ ಸಹಾಯದಿಂದ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನವನ್ನು ಸ್ಥಾಪಿಸಿದರು.

ಸಿಂಗ್ ಪಂಡಿತರು ಸಿ.ವಾಸುದೇವರಾಯ್, ಟಿ.ಎಸ್.ಸುಬ್ಬರಾವ್, ಸಿದ್ಧಲಿಂಗದೇವರು, ಆರ್.ಕೆ.ನಾಯ್ಡು ಜಿ.ಆರ್.ಜೋಯಿಸ್, ಎಸ್. ಸತ್ಯಮೂರ್ತಿ, ವಿ.ಮಾಣಿಕ್ಯಮೊದಲಿಯಾರ್, ಎಂ.ವೆಂಕಟಕೃಷ್ಣಯ್ಯ, ಡಿ.ನರಸಿಂಹಶಾಸ್ತ್ರಿ, ತಗಡೂರು ರಾಮಚಂದ್ರರಾವ್, ಮತ್ತಿತರ ಪ್ರಮುಖರ ಜೊತೆಯಲ್ಲಿ 1928ರ ಮೇ ತಿಂಗಳಲ್ಲಿ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಮೈಸೂರು ಸ್ಟೇಟ್ ಕಾಂಗ್ರೆಸ್ ಹುಟ್ಟುಹಾಕಿ ಅದರ ಮೊದಲ ಅಧಿವೇಶನವನ್ನು ಏರ್ಪಡಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿಯೂ ಪಾಲ್ಗೊಂಡಿದ್ದರು. ದಳವಾಯಿ ಆಂಗ್ಲೋ ಸಂಸ್ಕೃತ ಶಾಲೆಯ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿದ್ದರು. ಹಲವಾರು ಆಯುರ್ವೇದ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಅವರ ಪತ್ನಿ ದೇವೂಬಾಯಿರವರು ಪ್ರಾರಂಭಿಸಿದ ನಿಮ್ನವರ್ಗದ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯದ ವಾರ್ಡನ್ ಆಗಿದ್ದರು.

ಮೈಸೂರಿಗೆ ಸೇರಿದ ಬೋಗಾದಿಯಲ್ಲಿನ ದೊಡ್ಡ ಮಾರಗೌಡನಹಳ್ಳಿಯಲ್ಲಿನ ತಮ್ಮ 32 ಎಕರೆ ಜಮೀನನ್ನು ಗ್ರಾಮೀಣ ವಿದ್ಯಾರ್ಥಿಗಳಿಗೆ ಒಂದು ರೆಸಿಡೆನ್ಷಿಯಲ್ ಶಾಲೆ ಸ್ಥಾಪಿಸಲು ಸರ್ಕಾರಕ್ಕೆ ದಾನ ಮಾಡಿದರು. ಅವರಿಗೆ ತಮ್ಮ ಜಮೀನನ್ನು ದಾನ ಮಾಡಲು ಪ್ರೇರಣೆ ನೀಡಿದ್ದು ಆಗ ಆಚಾರ್ಯ ವಿನೋಬಾ ಭಾವೆಯವರು ಪ್ರಾರಂಭಿಸಿದ್ದ 'ಭೂದಾನ್ ಚಳುವಳಿ'. ಗಾಂಧೀಜಿ ತತ್ವಗಳ ಅನುಸಾರ ಆಚಾರ್ಯ ಭಾವೆಯವರು ದೇಶಾದ್ಯಂತ ಸಂಚರಿಸಿ ಶ್ರೀಮಂತರಿಂದ ಜಮೀನು, ಹಣ ದಾನವಾಗಿ ಪಡೆದು ಬಡ ರೈತರಿಗೆ ನೀಡುವುದು ಚಳುವಳಿಯ ಉದ್ದೇಶವಾಗಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಪಂಡಿತ ಚಂದ್ರಭಾನು ಸಿಂಗ್ ಅವರು ಭಾವೆ ಅವರ ಕರೆಗೆ ಓಗೊಟ್ಟು ಬೋಗಾದಿಯಲ್ಲಿನ ತಮ್ಮ ಕೃಷಿ ಭೂಮಿಯನ್ನು ದಾನ ಮಾಡಿದ್ದರಲ್ಲಿ ಆಶ್ಚರ್ಯವಿಲ್ಲ. ಈ ಭೂಮಿ ಬಹಳ ವರ್ಷಗಳು ಖಾಲಿ ಬಿದ್ದಿತು. 2007ರಲ್ಲಿ ಸರ್ಕಾರ ಈ ಜಮೀನಿನ ಪ್ರಯೋಜನ ಪಡೆದುಕೊಳ್ಳಲು ನಿರ್ಧರಿಸಿ, ಇಲವಾಲದ ಅಲೋಕ ಕಟ್ಟಡದಲ್ಲಿ ಸ್ಥಾಪಿಸಲಾಗಿದ್ದ ಜವಾಹರ್ ನವೋದಯ ವಿದ್ಯಾಶಾಲೆಯನ್ನು ಚಂದ್ರಭಾನ್ ಸಿಂಗ್ ಅವರ ನಿವೇಶನದಲ್ಲಿ ಹೊಸ ಕಟ್ಟಡವನ್ನು ಕಟ್ಟಿ ಅಲ್ಲಿಗೆ ವರ್ಗಾಯಿಸಿತು. ಈ ಶಾಲೆ ಈಗ ಈ 32 ಎಕರೆ ಸುಂದರ ನೈಸರ್ಗಿಕ ವಾತಾವರಣದಲ್ಲಿ ಗ್ರಾಮೀಣ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ 6ರಿಂದ 12ನೇ ತರಗತಿವರೆಗೆ ಉತ್ತಮ ಶಿಕ್ಷಣ ನೀಡುತ್ತಿದೆ. ಮರಗಿಡಗಳು, ಹಣ್ಣಿನ ತೋಟ, ಚಿಟ್ಟೆಗಳ ಉದ್ಯಾನವನ, ಇವುಗಳಿಂದ ಕೂಡಿ ವಿಶಾಲ ಹಸಿರು ಪ್ರದೇಶ ಅಲ್ಲಿ ರೂಪುಗೊಂಡು ಸುಂದರ ವಾತಾವರಣ ಸೃಷ್ಟಿಸಿದೆ. ಒಬ್ಬ ಆಯುರ್ವೇದ ಪಂಡಿತರಾಗಿ ಮುಂದೆ ಬಂದಿದ್ದ ಚಂದ್ರಭಾನು ಸಿಂಗ್ ಅವರ ಉದ್ದೇಶ ಇಂದು ಸಫಲವಾಗಿದೆ.

ಡಾ.ಚಂದ್ರಭಾನ್ ಸಿಂಗ್ 1974ರ ಅಕ್ಟೋಬರ್ 15ರಂದು ನಿಧನರಾದರು. ಮೈಸೂರಿನ ಹೊರವಲಯದ ಗೋಕುಲಂ ಒಂದನೇ ಘಟ್ಟದ ಬಳಿ ಏಳು ಎಕರೆ ಪ್ರದೇಶದಲ್ಲಿ ತಮ್ಮ ತಾತನ ಬಯಕೆಯಂತೆ ಒಂದು ಆಧುನಿಕ ಆಸ್ಪತ್ರೆಯನ್ನು ನಿರ್ಮಿಸಲು ಅವರ ಇಬ್ಬರು ಮೊಮ್ಮಕ್ಕಳು ನಿರ್ಧರಿಸಿದ್ದಾರೆ. ತಾತ ಚಂದ್ರಭಾನ್ ಸಿಂಗ್ ತಮ್ಮ ಪತ್ನಿ ದೇವೂಬಾಯಿ ಅವರ ಜ್ಞಾಪಕಾರ್ಥವಾಗಿ ಇಲ್ಲೊಂದು ಆಸ್ಪತ್ರೆಯನ್ನು ನಿರ್ಮಿಸಬೇಕೆಂದು ತಮ್ಮ ಉಯಿಲಿನಲ್ಲಿ ಬರೆದಿಟ್ಟಿದ್ದು ಅವರ ಬಯಕೆಯನ್ನು ಈಡೇರಿಸಲು ಅವರ ಮೊಮ್ಮಕ್ಕಳಾದ ಡಾ.ಎನ್.ಚಂದ್ರಭಾನ್ ಸಿಂಗ್ ಮತ್ತು ಡಾ. ಚಂದ್ರನಾಥ್ ಸಿಂಗ್ ಈಗ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಡಾ. ಚಂದ್ರಭಾನ್ ಸಿಂಗ್ ಅವರು ಆಲೋಪತಿ ವೈದ್ಯರಾಗಿದ್ದರೆ ಅವರ ಸಹೋದರ ಡಾ.ಚಂದ್ರನಾಥ್ ಸಿಂಗ್ ಆಯುರ್ವೇದ ವೈದ್ಯರಾಗಿ ತಲೆತಲಾಂತರದಿಂದ ನಡೆದುಕೊಂಡು ಬರುತ್ತಿರುವ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಅವರು ಸ್ಥಾಪಿಸಿದ ಶ್ರೀಸತ್ಯನಾರಾಯಣ ವೈದ್ಯ ಶಾಲೆ ಚಲುವಾಂಬಾ ಅಗ್ರಹಾರದಲ್ಲಿ ಇಂದಿಗೂ ಕಾರ್ಯನಿರ್ವಹಿಸುತ್ತಿದ್ದು, ಅವರ ಮನೆತನದವರು ವೈದ್ಯ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಸರ್ಕಾರಿ ಶಾಲೆಗಳಿಗೆ ಮುಡಾದಿಂದ ಸೌಲಭ್ಯ ಕಲ್ಪಿಸಲು ಕ್ರಮ

ಮುಡಾ ಅಧ್ಯಕ್ಷ ಕೆ. ಮರೀಗೌಡ ಭರವಸೆ

ಮೈಸೂರು,ಮಾ.9(ಪಿಎಂ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವತಿಯಿಂದ ಮೈಸೂರು ತಾಲೂಕಿನ ಶಾಲೆಗಳಿಗೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.



ಬೀರಿಹುಂಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶನಿವಾರ ಮುಡಾ ಅಧ್ಯಕ್ಷ ಕೆ.ಮರೀಗೌಡ ಅವರು ಸೌಲಭ್ಯಗಳನ್ನು ವಿತರಿಸಿದರು.


ಮೈಸೂರು ತಾಲೂಕು ಬೀರಿಹುಂಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶನಿವಾರ ನಡೆದ 'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನಮು ತಾವು ಓದಿದ ಶಾಲೆಗೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲು 10 ಲಕ್ಷ ರೂ.ಗಳನ್ನು ರಾಜ್ಯದಲ್ಲಿಯೇ ಪ್ರಥಮವಾಗಿ ನೀಡಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ನನ್ನ ಹುಟ್ಟೂರಿನ ಸದರಿ ಶಾಲೆಗೆ ಅಗತ್ಯ ಸೌಲಭ್ಯಗಳಿಗಾಗಿ ಸುಮಾರು ಎರಡು ಲಕ್ಷ ರೂ.ಗಳ ಸಾಮಗ್ರಿಗಳನ್ನು ನೀಡುತ್ತಿದ್ದೇನೆ ಎಂದು ಹೇಳಿದರು.

ಸ್ವಾತಂತ್ರ್ಯ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಹಣವನ್ನು ವಿನಿಯೋಗಿಸಿ, ಸರ್ಕಾರಿ ಶಾಲೆಗಳಲ್ಲಿ ಉಚಿತ ಶಿಕ್ಷಣ ಹೆಚ್ಚಿನ ಒತ್ತು ನೀಡಿವೆ. ನುರಿತ ಶಿಕ್ಷಕರನ್ನು ನೇಮಕ ಮಾಡಿಕೊಂಡು ಗುಣಮಟ್ಟದ ಶಿಕ್ಷಣವನ್ನೂ ನೀಡಲಾಗುತ್ತಿದೆ. ಆದರೆ ಬಹುತೇಕ ಪೋಷಕರು ಶಾಲೆಯಲ್ಲಿ ನಡೆಯುವ ಸಭೆ–ಸಮಾರಂಭಗಳಿಗೆ ಹಾಜರಾಗುದಿಲ್ಲ, ತಮ್ಮ ಮಕ್ಕಳ ಬಗ್ಗೆ ವಿಚಾರಿಸುವುದೂ ಇಲ್ಲ. ಮಕ್ಕಳು ನಿಮ್ಮ ತಂದೆ ತಾಯಿಯರನ್ನು ಶಾಲೆಗೆ ಕಡ್ಡಾಯವಾಗಿ ಕರೆದು ತರಬೇಕು, ಅವರಲ್ಲಿ ಜಾಗೃತಿ ಮೂಡಿಸಬೇಕು. ಶಾಲೆ ಎಂದರೆ ದೇವಸ್ಥಾನ ಇದ್ದಂತೆ, ಇಲ್ಲಿ ಓದುವ ಮಕ್ಕಳು ದೇಶದ ಸಂಪತ್ತು ಎಂದು ತಿಳಿಸಿದರು.

ಇಂದಿನ ಕೇಂದ್ರ ಸರ್ಕಾರವು ಶಿಕ್ಷಣದಲ್ಲಿ ಕೇಸರೀಕರಣ, ಕೋಮುವಾದ ಬಿತ್ತುವ ಕೆಲಸ ಮಾಡುತ್ತಿದೆ. ಇಂತಹ ವ್ಯವಸ್ಥೆ ವಿರುದ್ಧ ಗಂಭೀರ ಚಿಂತನೆ ಅಗತ್ಯ. ನಾನು ಓದುವಾಗ ಈ ಶಾಲೆಯಲ್ಲಿ ಒಂದೆ ರೂಮು ಇತ್ತು. ನಾನು ನಡೆದುಕೊಂಡೇ ಬೇರೆ ಊರಿನ ಶಾಲೆಗೆ ಹೋಗಬೇಕಾಗಿತ್ತು ಇಲ್ಲಿಗೆ ಪ್ರೌಢಶಾಲೆ, ಐಟಿಐ ಕಾಲೇಜು, ಎಸ್‌ಎಸ್‌ಎಲ್‌ಸಿ ಸೆಂಟರ್ ತರಲು ಪ್ರಯತ್ನಿಸಿದ್ದೇನೆ. ನನ್ನ ಶಾಲೆಯ ಮಕ್ಕಳು ಐಎಎಸ್, ಕೆಎಎಸ್ ಅಧಿಕಾರಿಗಳಾಗಬೇಕು. ಜಿಲ್ಲಾಧಿಕಾರಿಗಳಾಗಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಟ್ಟಣದ ಮಕ್ಕಳ ಜೊತೆ ಸರಿಸಾಟಿಯಾಗಿ ಸ್ಪರ್ಧೆ ಮಾಡಬೇಕು. ಆದ್ದರಿಂದ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಿವೃತ್ತ ಶಿಕ್ಷಕಿ ಜಯಶ್ರೀ ಮರೀಗೌಡ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಮೌಲ್ಯಗಳು ಮತ್ತು ಶಿಸ್ತನ್ನು ಅಳವಡಿಸಿಕೊಳ್ಳಬೇಕು. ತಂದೆ–ತಾಯಿ, ಗುರು–ಹಿರಿಯರು ಮತ್ತು ಶಿಕ್ಷಕರಿಗೆ ಗೌರವ ಕೊಡಬೇಕು. ಮೊಬೈಲ್‌ನಿಂದ ದೂರವಿದ್ದು, ಓದುವ ಹವ್ಯಾಸ ಅಳವಡಿಸಿಕೊಂಡು ಗುರಿ ಸಾಧನೆ ಮಾಡಬೇಕೆಂದು ಕಿವಿಮಾತು ಹೇಳಿದರು. ಡಿಡಿಪಿಐ ಹೆಚ್.ಕೆ. ಪಾಂಡು, ಬಿಆರ್‌ಸಿ ಮಹದೇವ್, ಪಿಡಿಓ ರಾಮದಾಸ್, ಮುಖಂಡರಾದ ಡಾ.ಆರ್.ವಿ.ಸುಧಾ, ವಸಂತ, ಮಹದೇವ್, ಅನುಸೂಯ, ಮುರಳಿ, ಜ್ಯೋತಿ, ಗುಡ್ಡಪ್ಪ, ಮಲ್ಲೇಶ್, ಅಕ್ಕಿ ಶಿವಣ್ಣ, ಕರೀಗೌಡ, ಡಿ.ಸಾಲುಂಡಿ ಚಂದ್ರು, ಧನಗಳ್ಳಿ ಬಸವರಾಜು, ಪ್ರಕಾಶ್ ಮತ್ತಿತರರು ಹಾಜರಿದ್ದರು.

ಚುನಾವಣಾ ಆಯುಕ್ತ ಅರುಣ್ ಗೋಯಲ್ ದಿಢೀರ್ ರಾಜೀನಾಮೆ



ನವದೆಹಲಿ: ಚುನಾವಣಾ ಆಯುಕ್ತ ಅರುಣ್ ಗೋಯಲ್ ಶನಿವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇನ್ನು ಕೆಲವೇ ವಾರಗಳಲ್ಲಿ ದೇಶದಲ್ಲಿ ಲೋಕಸಭೆ ಚುನಾವಣೆ ನಡೆಯಲಿರುವ ಸಂದರ್ಭದಲ್ಲಿ ಚುನಾವಣಾ ಆಯುಕ್ತರ ರಾಜೀನಾಮೆ ನೀಡಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಕೂಡ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ಕೇಂದ್ರ ಚುನಾವಣಾ ಆಯೋಗವು ಶೀಘ್ರದಲ್ಲೇ ಚುನಾವಣಾ ದಿನಾಂಕಗಳನ್ನು ಘೋಷಿಸಲಿದೆ. ಅರುಣ್ ಗೋಯಲ್ ಅವರ ಈ ಹೆಜ್ಜೆಯ ನಂತರ ಇದೀಗ ಚುನಾವಣಾ ಆಯೋಗದಲ್ಲಿ 2 ಹುದ್ದೆಗಳು ಖಾಲಿ ಇದೆ.

ಇದೀಗ ಚುನಾವಣಾ ವ್ಯವಸ್ಥೆಯ ಸಂಪೂರ್ಣ ಜವಾಬ್ದಾರಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರ ಹೆಗಲ ಮೇಲೆ ಬಿದ್ದಿದೆ. ಅರುಣ್ ಗೋಯಲ್ ಅವರು ಮುಖ್ಯ ಚುನಾವಣಾ ಆಯುಕ್ತರೊಂದಿಗೆ ಚುನಾವಣಾ ತಯಾರಿಗಾಗಿ ಹಲವು ರಾಜ್ಯಗಳಿಗೆ ಭೇಟಿ ನೀಡಿದ್ದರು. ಇದೀಗ ದಿಢೀರನೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಭಾನುವಾರ 10 ಮಾರ್ಚ್ 2024





10 ವರ್ಷಗಳಲ್ಲಿ 11 ರೈಲುಗಳು

ಮೈಸೂರು ವಿಮಾನ ನಿಲ್ದಾಣಕ್ಕೆ ಫೈಟು, ರನ್ ವೇ ವಿಸ್ತರಣೆ

ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಹಾಗೂ ರನ್ ವೇ ವಿಸ್ತರಣೆಗಾಗಿ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಬಸವರಾಜ ಬೊಮ್ಮಾಯಿಯವರ ಸರ್ಕಾರದಿಂದ 319 ಕೋಟಿ ರೂ.ಗಳನ್ನು ಮಂಜೂರು ಮಾಡಿಸಿದ್ದಾರೆ. ಮುಂದಿನ 3 ವರ್ಷಗಳಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಅಭಿವೃದ್ಧಿಪಡಿಸಲಿದ್ದಾರೆ. ಮೈಸೂರು ವಿಮಾನ ನಿಲ್ದಾಣಕ್ಕೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ' ಎಂದು ಹೆಸರಿಡಲು ಪ್ರಯತ್ನಗಳು ಸಾಗಿವೆ.

ಮಾದರಿ ಮೈಸೂರು ಕನಸು ಪ್ರತಾಪ್ ಸಿಂಹರಿಂದ ನನಸು

ಮೈಸೂರು ರಿಂಗ್ ರಸ್ತೆ ಉನ್ನತೀಕರಣ

ಮುಡಾ ವ್ಯಾಪ್ತಿಯಲ್ಲಿದ್ದ ಸುಮಾರು 41.5 ಕಿ. ಮೀ ಉದ್ದದ ಮೈಸೂರಿನ ರಿಂಗ್ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಉನ್ನತೀಕರಿಸಿ, ರೂ.147.7 ಕೋಟಿ ವೊತ್ತದಡಿ ಡಾಂಬರೀಕರಣ ಮಾಡಿಸಿದ್ದಾರೆ. ಕಗ್ಗತ್ತಲಾಗಿದ್ದ ರಿಂಗ್ ರಸ್ತೆಗೆ 4528 ಎಲ್ಇಡಿ ಬಲ್ಬ್ 17 ಹೈಮಾಸ್ಟ್ ಮತ್ತು 18 ಮಿನಿ ಮಾಸ್ಟ್ ಲೈಟ್ ಅಳವಡಿಸುವ ಜತೆಗೆ ರಸ್ತೆಯುದ್ದಕ್ಕೂ ಇರುವ 10 ಅಡಿ ಮೀಡಿಯನ್‌ನಲ್ಲಿ 6 ಸಾವಿರ ಹೆಬ್ಬೇವು ಮರಗಳನ್ನು ಸರ್ವಿಸ್ ರಸ್ತೆಯ ಇಕ್ಕೆಲಗಳಲ್ಲಿ 8 ಸಾವಿರ ಹಣ್ಣು ಬಿಡುವ ಮರಗಳನ್ನು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಬೆಳೆಸಿ ಪಾಲನೆ ಮಾಡಿದ್ದಾರೆ.

- ರಸ್ತೆ ಅಭಿವೃದ್ಧಿ
- ಮನೆಮನೆಗೆ ಕುಡಿಯುವ ನೀರು ವ್ಯವಸ್ಥೆ

ಚಾಮುಂಡಿಬೆಟ್ಟದ ಅಭಿವೃದ್ಧಿಗೆ 45 ಕೋಟಿ ರೂ.

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ 'ಪ್ರಸಾದ್' ಯೋಜನೆಯಡಿ 45.71 ಕೋಟಿ ರೂ. ವೆಚ್ಚದಲ್ಲಿ ಚಾಮುಂಡಿಬೆಟ್ಟವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. 9.19 ಕೋಟಿ ರೂ. ವೆಚ್ಚದಲ್ಲಿ ಪಿರಿಯಾಪಟ್ಟಣದ ಮಸಣಿಕಮ್ಮ ದೇವಸ್ಥಾನದ ಅಭಿವೃದ್ಧಿ ಮಾಡಲಾಗುತ್ತಿದೆ.

ವಸ್ತುಪ್ರದರ್ಶನ ಮೈದಾನ ಅಭಿವೃದ್ಧಿ

ಮೈಸೂರಿನ ಪ್ರಖ್ಯಾತ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದ ಅಭಿವೃದ್ಧಿಗೆ 'ಸ್ವದೇಶ್ ದರ್ಶನ' ಯೋಜನೆಯಡಿ ಅನುದಾನ ತಂದಿದ್ದಾರೆ.


"ಮೈಸೂರಿಗೆ ಎಸ್‌ಟಿಪಿಐ"

ಇನ್ಫೋಸಿಸ್ ಬಳಿ 27.64 ಕೋಟಿ ರೂ.ನಲ್ಲಿ 'ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ' ನಿರ್ಮಾಣ ಮಾಡಲಾಗಿದೆ. 2.36 ಎಕರೆ ಜಾಗದಲ್ಲಿರುವ ಈ ಕಟ್ಟಡವು 40 ಸಾವಿರ ಚದರ ಅಡಿ ವಿಸ್ತಾರವಾಗಿದ್ದು, ಅದರಲ್ಲಿ 100 ಸೀಟಿನ ಇನ್‌ಕ್ಯುಬೇಶನ್ ಸೆಂಟರ್ ಕೂಡಾ ಇದೆ.



ಮೈಸೂರು- ಕುಶಾಲನಗರ 4 ಲೇನ್ ಹೈವೆ

ಮೈಸೂರು–ಕುಶಾಲನಗರ ನಡುವೆ ರೂ. 4130 ಕೋಟಿಗಳ ವೆಚ್ಚದ ನಾಲ್ಕು ಪಥದ ಹೆದ್ದಾರಿ ನಿರ್ಮಾಣವು ಪ್ರಗತಿ ಹಂತದಲ್ಲಿದ್ದು, 2025ರೊಳಗೆ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲು ಪ್ರತಾಪ್ ಸಿಂಹ ಅವರು ಕಾಮಗಾರಿಯನ್ನು ಚುರುಕುಗೊಳಿಸಿದ್ದಾರೆ.




“ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ, ಮೈಸೂರು–ಕೊಡಗು ಕ್ಷೇತ್ರದ ಬಹುತೇಕ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಮೈಸೂರಿನಲ್ಲಿ ಉದ್ಯಮ ಕ್ಷೇತ್ರದಲ್ಲಿ ಕ್ರಾಂತಿ, ನಿರುದ್ಯೋಗ ಸಮಸ್ಯೆ ನಿವಾರಣೆ, ರೈಲು ನಿಲ್ದಾಣದ ಉನ್ನತೀಕರಣ, ಹೊಸ ರೈಲುಗಳ ಸೇರ್ಪಡೆ, ಸುಸಜ್ಜಿತ ಆಸ್ಪತ್ರೆಗಳು ಹೀಗೆ ಹತ್ತಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಕ್ಷೇತ್ರದ ಜನರ ವಿಶ್ವಾಸ ಹಾಗೂ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಮೈಸೂರು–ಕೊಡಗು ಕ್ಷೇತ್ರದ ಸಂಸದ ಪ್ರತಾಪ್ ಸಿಂಹ. 2014 ರಲ್ಲಿ ಸಂಸದರಾಗಿ ಅಧಿಕಾರದ ಚುಕ್ಕಾಣಿ ಹಿಡಿದಾಗಿನಿಂದ ೨೦೨೪ ರವರೆಗೂ ಬದ್ಧತೆ, ಪ್ರಾಮಾಣಿಕತೆ, ಜನಪರ ಕಾಳಜಿಯೊಂದಿಗೆ ಸೇವೆ ಸಲ್ಲಿಸಿದ್ದಾರೆ. ಅವರು ತಮ್ಮ ಅಧಿಕಾರಾವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳು ಅವರ ಕಾರ್ಯಕ್ಷಮತೆ, ಆಡಳಿತದ ಕಾರ್ಯ ವೈಖರಿಯನ್ನು ಸಾಕ್ಷೀಕರಿಸುತ್ತಿವೆ.”

ದಶಪಥದ ಹೆದ್ದಾರಿ

2018ರಲ್ಲಿ ಮೈಸೂರು ಮತ್ತು ಬೆಂಗಳೂರು ನಡುವೆ 6 ಪಥದ ಹೆದ್ದಾರಿ, ತಲಾ ಎರಡು ಪಥಗಳಿರುವ ಸರ್ವಿಸ್ ರಸ್ತೆಗಳು ಸೇರಿದಂತೆ ಒಟ್ಟು 10 ಪಥಗಳ ರಸ್ತೆ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಯಿತು.ಕೋವಿಡ್ ನಡುವೆಯೂ 4 ವರ್ಷಗಳಲ್ಲಿ ಭೂಸ್ವಾಧೀನ, ರಸ್ತೆ ನಿರ್ಮಾಣ ಕಾರ್ಯ ಮುಗಿಸಿ 2023ಕ್ಕೆ ದಶಪಥದ ಹೆದ್ದಾರಿಯನ್ನು ಲೋಕಾರ್ಪಣೆ ಮಾಡಲಾಗಿದೆ.







ಕೊಡಗು- ಮೈಸೂರಿನಲ್ಲಿ ರಸ್ತೆ ಅಭಿವೃದ್ಧಿ

ಗ್ರಾಮ ಸಡಕ್ ಯೋಜನೆಯಡಿ ಕೊಡಗು ಜಿಲ್ಲೆಯಲ್ಲಿ ರೂ.70 ಕೋಟಿ ವೆಚ್ಚದಲ್ಲಿ 83.83 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಮೈಸೂರು ಜಿಲ್ಲೆಯಲ್ಲಿ (ಮೈಸೂರು ತಾಲೂಕು, ಹುಣಸೂರು ಹಾಗೂ ಪಿರಿಯಾಪಟ್ಟಣ) ರೂ. 96 ಕೋಟಿ ವೆಚ್ಚದಲ್ಲಿ 128.56 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಮಡಿಕೇರಿಯಿಂದ ಸಂಪಾಜೆವರೆಗೂ ರೂ. 58 ಕೋಟಿ ವೆಚ್ಚದಲ್ಲಿ 19 ರಿಟೈನಿಂಗ್ ವಾಲ್ ನಿರ್ಮಾಣ ಮಾಡಿ ರೂ.19.40 ಕೋಟಿ ವೆಚ್ಚದಲ್ಲಿ 21 ಕಿಮೀ ರಸ್ತೆ ಡಾಂಬರೀಕರಣ ನಡೆಯುತ್ತಿದೆ. ಮೈಸೂರು ರಿಂಗ್ ರಸ್ತೆಯಲ್ಲಿರುವ 4 RUB ಗಳ ನಿರ್ಮಾಣ ರೂ.76.09 ಕೋಟಿಗಳ ಅನುದಾನದಡಿ ಕಾಮಗಾರಿ ನಡೆಯುತ್ತಿದೆ. ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲೂಕು ತಾತನಹಳ್ಳಿ ಅಪಘಾತ ವಲಯ ಸುಧಾರಣೆಗಾಗಿ ರೂ. 1.93 ಕೋಟಿಗಳ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿ ಮುಗಿದಿದೆ. ಕೇಂದ್ರ ರಸ್ತೆ ನಿಧಿಯಿಂದ (ಸಿ.ಆರ್.ಎಫ್) ಮೈಸೂರು ನಗರ, ಚಾಮುಂಡೇಶ್ವರಿ, ಹುಣಸೂರು, ಪಿರಿಯಾಪಟ್ಟಣದ ರಸ್ತೆ ಅಭಿವೃದ್ಧಿಗಾಗಿ ರೂ. 202 ಕೋಟಿ ಅನುದಾನ. ಮೈಸೂರು ನಗರದ ಹೂಟಗಳ್ಳಿಯಿಂದ ದಕ್ಷಾ ಪಿ.ಯು. ಕಾಲೇಜುವರೆಗೆ ಸುಮಾರು 4.82 ಕಿ.ಮೀ ವಲಯ ಸುಧಾರಣೆಗಾಗಿ 34.50 ಕೋಟಿ ರೂ.ಗಳ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ಚನ್ನರಾಯಪಟ್ಟಣದಿಂದ ಸೋಮವಾರಪೇಟೆ, ಮಡಿಕೇರಿ, ವಿರಾಜಪೇಟೆ ಮೂಲಕ ಮಾಕುಟ್ಟದವರೆಗೂ, ಅಂದರೆ ಕೇರಳ ಗಡಿಯವರೆಗೂ ಸಾಗುವ ರಸ್ತೆಯನ್ನು ಹೈವೇಯಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಮುಖ್ಯ ರೂವಾರಿ



145 ಕೋಟಿ ರೂ. ವೆಚ್ಚದಲ್ಲಿ 'ಅಮೃತ್'ನಿಂದ ಮಡಿಕೇರಿ, ವಿರಾಜಪೇಟೆ, ಕುಶಾಲನಗರ, ಸೋಮವಾರಪೇಟೆಗೆ ಕುಡಿಯುವ ನೀರು ಕೊಡಲಾಗುತ್ತಿದೆ.

ಕೇಂದ್ರ ಸರ್ಕಾರದ ಅಮೃತ್ ಯೋಜನೆಯಡಿ 29 ಕೋಟಿ ವೆಚ್ಚದಲ್ಲಿ ವಿಜಯನಗರ ಟ್ಯಾಂಕ್ ಮರು ನಿರ್ಮಾಣ ಮಾಡಲಾಗುತ್ತಿದೆ. ಹುಣಸೂರು ತಾಲೂಕಿನ ಮರದೂರು ಗ್ರಾಮದ ಬಳಿ ಲಕ್ಷ್ಮಣತೀರ್ಥ ನದಿಯಿಂದ ಬತ್ತಿ ಹೋಗಿರುವ 49 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗೆ ಬಸವರಾಜ ಬೊಮ್ಮಾಯಿಯವರ ಸರಕಾರದಿಂದ 85 ಕೋಟಿ ಯೋಜನೆಗೆ ಒಪ್ಪಿಗೆ ಕೊಡಿಸಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣ ಅಭಿವೃದ್ಧಿ

ಮೈಸೂರು ಕೇಂದ್ರ ರೈಲ್ವೆ ನಿಲ್ದಾಣವನ್ನು 356 ಕೋಟಿ ರೂ. ವೆಚ್ಚದಲ್ಲಿ ನವೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು 2022 ಜೂನ್ 20ರಂದು ಮೋದಿಜಿ ಶಂಕುಸ್ಥಾಪನೆ ಮಾಡಿದ್ದಾರೆ. ಇದರಲ್ಲಿ ಒಟ್ಟು 12 ಸ್ಟೇಬ್ಲಿಂಗ್ ಲೇನ್, ಪಿಟ್‌ಲೇನ್ ಮತ್ತು ಹೊಸ ಪ್ಲಾಟ್‌ಫಾರಂಗಳಿರಲಿವೆ. ಮೈಸೂರು ನಗರದ ಅಶೋಕಪುರಂ ರೈಲ್ವೆ ಯಾರ್ಡ್ ಅನ್ನು 37.5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಇದರಲ್ಲಿ ಒಂದು ಸುಸಜ್ಜಿತವಾದ ಸ್ಟೇಷನ್, ಫುಟ್ ಓವರ್ ಬ್ರಿಡ್ಜ್ 3 ಪ್ಲಾಟ್‌ಫಾರಂ, 2 ಸ್ಟೇಬಲಿಂಗ್ ಲೈನ್ ಹಾಗೂ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.



“ಮೈಸೂರಿಗೆ ಮೆಟ್ರೋ”

ಪ್ರಧಾನಿ ಮೋದಿಯವರು, 2023 ಅಕ್ಟೋಬರ್‌ನಲ್ಲಿ ನೋಯ್ಡಾ, ಗಾಝಿಯಾಬಾದ್, ಲಕ್ನೋ, ಕಾನ್ಪುರ, ಮೀರತ್, ಆಗ್ರಾ ಮುಂತಾದ ಉತ್ತರಪ್ರದೇಶದ ನಗರಗಳಂತೆ ಬೆಳೆಯುತ್ತಿರುವ ಮೈಸೂರಿಗೂ ಮೆಟ್ರೋ ಸೇವೆ ಒದಗಿಸುವ ಸುಳಿವು ನೀಡಿದ್ದು, 3ನೇ ಟರ್ಮ್‌ನಲ್ಲಿ ಮೈಸೂರಿಗೆ ಮೆಟ್ರೋ ತರುವ ಪ್ರಯತ್ನ ಮಾಡಿದ್ದಾರೆ.

ಮುಂದಿನ 2 ವರ್ಷಗಳಲ್ಲಿ ಕ್ಷೇತ್ರದ ಪ್ರತಿ ಮನೆಗೂ ನಲ್ಲಿ ನೀರು !

350 ಕೋಟಿ ರೂ. ವೆಚ್ಚದ ಹಳೇಉಂಡವಾಡಿ ಕುಡಿಯುವ ನೀರಿನ ಯೋಜನೆಗೆ ಬಸವರಾಜ ಬೊಮ್ಮಾಯಿ ಸರ್ಕಾರದಿಂದ 250 ಕೋಟಿ ರೂ. ಹೆಚ್ಚುವರಿ ಅನುದಾನ ಕೊಡಿಸಿ 90 ಗ್ರಾಮಗಳಿಗೆ ಮತ್ತು ಮೈಸೂರು ನಗರಕ್ಕೆ 150 ಎಂಎಲ್‌ಡಿ ನೀರು ತಂದು ಶಾಶ್ವತವಾಗಿ ಮೈಸೂರು ನಗರ ಮತ್ತು ಚಾಮುಂಡೇಶ್ವರಿ ಕ್ಷೇತ್ರಕ್ಕೆ ನೀರು ಕೊಡಿಸುತ್ತಿದ್ದಾರೆ. 213 ಕೋಟಿಯಲ್ಲಿ ಹುಣಸೂರಿನ ಎಲ್ಲಾ ಮನೆಗಳಿಗೂ ಕಾವೇರಿ ನೀರು, ಪಿರಿಯಾಪಟ್ಟಣದ 303 ಗ್ರಾಮಗಳಿಗೆ 239 ಕೋಟಿ ರೂ. ವೆಚ್ಚದ ಜಲಜೀವನ್ ಮಿಷನ್‌ನಡಿ ಹಾಡ್ಯ ಬಳಿ ಕಾವೇರಿಯಿಂದ ಕುಡಿಯುವ ನೀರು ಪೂರೈಸುವ 239 ಕೋಟಿ ರೂ. ವೆಚ್ಚದ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ.



ಮನೆಮನೆಗೆ ಗ್ಯಾಸ್ ಪೈಪ್ ಲೈನ್

ಮುಂದಿನ ಎರಡು ವರ್ಷಗಳಲ್ಲಿ ಪೈಪ್ ಮೂಲಕ ಮನೆಮನೆಗೆ ಅಡುಗೆ ಗ್ಯಾಸ್ ಕೂಡ ಕೊಡಿಸಲು ನಿರ್ಧರಿಸಿದ್ದು,ಎಜಿ ಅಂಡ್ ಪಿ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡಿದ್ದು ಮುಖ್ಯ ಪೈಪ್‌ಲೈನ್ ಅಳವಡಿಸುವ ಕೆಲಸ ನಡೆಯುತ್ತಿದೆ.

ಪೋಸ್ಟ್ ಆಫೀಸ್ ಪಾಸ್ ಪೋರ್ಟ್ ಸೇವಾ ಕೇಂದ್ರ

ದೇಶದ ಮೊಟ್ಟಮೊದಲ ಪೋಸ್ಟ್ ಆಫೀಸ್ ಪಾಸ್‌ಪೋರ್ಟ್ ಸೇವಾ ಕೇಂದ್ರ ವನ್ನು ಮೈಸೂರಿನ ಮೇಟಗಳ್ಳಿಯಲ್ಲಿ ತೆರೆದಿದ್ದು, ಇದುವರೆಗೂ ಸುಮಾರು 55 ಸಾವಿರಕ್ಕೂ ಹೆಚ್ಚು ಹೊಸ ಪಾಸ್‌ಪೋರ್ಟ್ ವಿತರಣೆ ಮಾಡಲಾಗಿರುತ್ತದೆ ಹಾಗೂ ಹಿರಿಯ ನಾಗರೀಕರಿಗೆ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಹೆಚ್ಚುವರಿಯಾಗಿ ಕೌಂಟರ್‌ಗಳನ್ನು ಸ್ಥಾಪಿಸಲಾಗಿರುತ್ತದೆ.



10 ವರ್ಷಗಳಲ್ಲಿ ಮೈಸೂರಿಗೆ 11 ಟ್ರೈನ್‌ಗಳು

ಮೈಸೂರು–ವಾರಣಾಸಿ ಟ್ರೈನ್ (ಬೈ ವೀಕ್ಲಿ), ಮೈಸೂರು–ಹುಬ್ಬಳ್ಳಿ–ಬೆಳಗಾವಿ 'ವಿಶ್ವಮಾನವಎಕ್ಸ್‌ಪ್ರೆಸ್' ಡೈಲಿ, ಮೈಸೂರು–ಉದಯ್‌ಪುರ್ 'ಹಮ್ ಸಫರ್ ಎಕ್ಸ್‌ಪ್ರೆಸ್', ಬೆಂಗಳೂರು (ರಾಮನಗರ)–ಮೈಸೂರು 'ಮೆಮು ಟ್ರೈನ್' ಡೈಲಿ, ಚೆನ್ನೈ–ಬೆಂಗಳೂರು–ಮೈಸೂರು 'ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್' ಡೈಲಿ, ಮೈಸೂರು–ಕಾಚಿಗುಡ (ಹೈದರಾಬಾದ್) ಡೈಲಿ ಎಕ್ಸ್‌ಪ್ರೆಸ್, ಮೈಸೂರು–ಬೆಂಗಳೂರು 'ಮೆಮು ಟ್ರೈನ್' ಡೈಲಿ ಮೈಸೂರು–ಕೋಚುವೇಲಿ (ತ್ರಿವೆಂಡ್ರಮ್), ಮೈಸೂರು–ಬೆಂಗಳೂರು 'ಮೆಮು ಟ್ರೈನ್' ಡೈಲಿ, ಬೆಂಗಳೂರು–ಮೈಸೂರು–ಮಂಗಳೂರು, ವಂದೇ ಭಾರತ್–ಮೈಸೂರು–ಚೆನ್ನೈ ರೈಲುಗಳನ್ನು ತರಿಸುವಲ್ಲಿ ಯಶಸ್ವಿಯಾಗಿದ್ದಾರೆ. ರೂ.70 ಕೋಟಿಯಲ್ಲಿ ನಾಗನಹಳ್ಳಿ ಮೆಮು ಶೆಡ್ ನಿರ್ಮಾಣ ಮಾಡಲು ಭೂಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ. ಸುಮಾರು 9.8 ಕೋಟಿ ರೂ. ವೆಚ್ಚದಲ್ಲಿ ಮೈಸೂರು ರೈಲ್ವೆ ಮ್ಯೂಸಿಯಂ ವಿಸ್ತರಣೆ ಹಾಗೂ ಅಭಿವೃದ್ಧಿಪಡಿಸಲಾಗಿರುತ್ತದೆ. ಸುಮಾರು 16.5 ಕೋಟಿ ರೂ. ವೆಚ್ಚದಲ್ಲಿ ಮೈಸೂರು ರೈಲ್ವೆ ನಿಲ್ದಾಣದ ಆಧುನೀಕರಣ ಮಾಡಲಾಗುತ್ತಿದೆ.

ಸುಸಜ್ಜಿತ ಆಸ್ಪತ್ರೆಗಳು

ಶಿಥಿಲಾವಸ್ಥೆಯಲ್ಲಿರುವ ಪ್ರತಿಷ್ಠಿತ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವ್ಯಾಪ್ತಿಗೆ ಒಳಪಡುವ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಹಾಗೂ ಪಿ.ಕೆ.ಟಿ.ಬಿ ಆಸ್ಪತ್ರೆಗಳನ್ನು 89.5 ಕೋಟಿ ರೂ. ಗಳಲ್ಲಿ ನವೀಕರಣ ಮಾಡಲಾಗುತ್ತಿದೆ. ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಪಿ.ಕೆ.ಟಿ.ಬಿ ಆಸ್ಪತ್ರೆಯ ಆವರಣದಲ್ಲಿರುವ ಸುಮಾರು 7 ಎಕರೆ ಜಾಗದಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಕಟ್ಟಡ ನಿರ್ಮಾಣ ಕಾರ್ಯ ಆರಂಭವಾಗಿದೆ. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವ್ಯಾಪ್ತಿಯ ಆವರಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ 2.50 ಕೋಟಿ ರೂ. ಅನುದಾನದಡಿ ಸ್ಕಿಲ್ ಲ್ಯಾಬ್ ತೆರೆಯಲಾಗಿರುತ್ತದೆ. ಸಾಂಕ್ರಾಮಿಕ ರೋಗಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಮೈಸೂರು ನಗರದ ಕೆ.ಆರ್. ಆಸ್ಪತಿಯಲ್ಲಿ (ಜಿಲ್ಲಾ ಆಸ್ಪತ್ರೆ) ಕೇಂದ್ರ ಸರ್ಕಾರದ ಸಂಪೂರ್ಣ ಅನುದಾನದಲ್ಲಿ ವೈರಲ್ ರಿಸರ್ಚ್ ಮತ್ತು ಡಯಗ್ನಾಸ್ಟಿಕ್ ಲ್ಯಾಬೊರೇಟರಿ ಮತ್ತು ನ್ಯಾಷನಲ್ ಹೆಲ್ತ್ ಮಿಷನ್‌ನಡಿ ಸುಸಜ್ಜಿತ ಎಂಆರ್‌ಐ ಮಷಿನ್ ಅಳವಡಿಸಲಾಗಿದೆ. ಮೈಸೂರು ಮೆಡಿಕಲ್ ಕಾಲೇಜು ವ್ಯಾಪ್ತಿಯಲ್ಲಿ ಉಪನ್ಯಾಸ ಕೊಠಡಿ ಹಾಗೂ ಪರೀಕ್ಷಾ ಕೊಠಡಿಗಳನ್ನೊಳಗೊಂಡಂತೆ ಗ್ರಂಥಾಲಯ ಕಟ್ಟಡ ನಿರ್ಮಾಣ, ಪುರುಷರ ಹಾಗೂ ಮಹಿಳೆಯರ ಪ್ರತ್ಯೇಕ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಮಡಿಕೇರಿ ಜಿಲ್ಲಾಸ್ಪತ್ರೆಯನ್ನು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಜತೆಗೆ ಆ ಆಸ್ಪತ್ರೆಯಲ್ಲಿ ಕ್ರಿಟಿಕಲ್ ಕೇರ್ ಸೆಂಟರ್ ಸ್ಥಾಪಿಸಲು ಅನುದಾನವನ್ನು ತರಲಾಗಿದೆ. ಈ ಭಾಗದ ಜನರ ಬಹುದಿನಗಳ ಕನಸಾಗಿದ್ದ ಸಿಜಿಹೆಚ್‌ಎಸ್ ಆಸ್ಪತ್ರೆಯನ್ನು ಮೈಸೂರು ನಗರದ ಶಿಕ್ಷಕರ ಬಡಾವಣೆಯಲ್ಲಿ ಸ್ಥಾಪಿಸಿದ್ದಾರೆ. 72ಕ್ಕೂ ಹೆಚ್ಚು ಪ್ರಧಾನ ಮಂತ್ರಿ ಜನ್ ಔಷಧ ಕೇಂದ್ರಗಳಿವೆ.

ಸ್ಪೀಚ್ ಆ್ಯಂಡ್ ಹಿಯರಿಂಗ್ ಸಂಸ್ಥೆಯ ಉನ್ನತೀಕರಣ

ಮೈಸೂರಿನ ಸುಪ್ರಸಿದ್ಧ 'ಆಲ್ ಇಂಡಿಯಾ ಸ್ಪೀಚ್ ಆ್ಯಂಡ್ ಹಿಯರಿಂಗ್' ಅಥವಾ ವಾಕ್ ಶ್ರವಣ ಸಂಸ್ಥೆಯನ್ನು 155 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಣಗೊಳಿಸಲಾಗುತ್ತಿದೆ. ವಾಕ್, ಶ್ರವಣ ಜಾಗೃತಿಗೆ 7 ಅಂತಸ್ತಿನ ಕಟ್ಟಡದ ಮ್ಯೂಸಿಯಂ ಕೂಡ ಮುಕ್ತಾಯ ಹಂತದಲ್ಲಿದೆ.

ತಾಯಿ ಮತ್ತು ಮಗುವಿನ ಆಸ್ಪತ್ರೆ

ರಾಷ್ಟ್ರೀಯ ಹೆಲ್ತ್ ಮಿಷನ್ ಕಾರ್ಯಕ್ರಮದಡಿ ಕೃಷ್ಣರಾಜ ಕ್ಷೇತ್ರದ ಚಾಮುಂಡಿಪುರಂನ ಸೇಠ್ ಮೋಹನ್ ದಾಸ್ ತುಳಸಿದಾಸ್ ಆಸ್ಪತ್ರೆ ಆವರಣದಲ್ಲಿ 20 ಕೋಟಿ ರೂ. ವೆಚ್ಚದಲ್ಲಿ 200 ಹಾಸಿಗೆಯ ತಾಯಿ ಮತ್ತು ಮಗುವಿನ ಆಸ್ಪತ್ರೆ ನಿರ್ಮಾಣ ಮಾಡಲಾಗಿದ್ದು ಹಾಗೂ ಹುಣಸೂರು ಟೌನ್‌ನಲ್ಲಿ 18 ಕೋಟಿ ರೂ. ಮೊತ್ತದಡಿ ಆಸ್ಪತ್ರೆ ನಿರ್ಮಾಣ ಮಾಡಲು

ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ

ಸಾತಗಳ್ಳಿ ಬಳಿ ಇರುವ 19 ಎಕರೆ ಮುಡಾ ಜಾಗದಲ್ಲಿ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಕಾಡೆಮಿಯವರಿಂದ ಸ್ಟೇಡಿಯಂ ತರಲು ಪ್ರಯತ್ನಿಸಿದ್ದಾರೆ. ಸರ್ಕಾರದ ಅನುಮತಿ ದೊರೆತ ಕೂಡಲೇ ಸರಿಸುಮಾರು 100 ಕೋಟಿ ವೆಚ್ಚದಲ್ಲಿ ವಿಶ್ವದರ್ಜೆಯ ಕ್ರಿಕೆಟ್ ಸ್ಟೇಡಿಯಂ ಅನ್ನು ನಿರ್ಮಾಣ ಮಾಡಲಾಗುತ್ತದೆ.



ಕಡಕೊಳದಲ್ಲಿ ಗೂಡ್ಸ್ ಟರ್ಮಿನಲ್

ಮೈಸೂರು ಜಿಲ್ಲೆಯಲ್ಲಿ ಕೂರ್ಗಳ್ಳಿ ಮತ್ತು ಕಡಕೋಳ ಬಳಿ ಎರಡು ಪ್ರಮುಖ ಕೈಗಾರಿಕಾ ವಲಯಗಳಿದ್ದು ದೊಡ್ಡ ಪ್ರಮಾಣದ ಸರಕು ಸಾಗಣೆಗೂ ಒಂದು ಗೂಡ್ಸ್ ಟರ್ಮಿನಲ್‌ನ ಅಗತ್ಯವಿದೆ ಎಂಬುದನ್ನು ಮನಗಂಡು ಕಡಕೊಳ ಬಳಿ 55 ಎಕರೆ ಜಾಗದಲ್ಲಿ ಕಂಟೈನರ್ ಕಾರ್ಪೊರೇಶನ್ ಆಫ್ ಇಂಡಿಯಾದ ವತಿಯಿಂದ ರೂ. 102 ಕೋಟಿ ರೂ. ವೆಚ್ಚದಲ್ಲಿ ರೈಲ್ವೆ ಗೂಡ್ಸ್ ಟರ್ಮಿನಲ್ ನಿರ್ಮಾಣ ಮಾಡಲಾಗುತ್ತಿದೆ. ನಮ್ಮ ರಾಜ್ಯದ 30 ಜಿಲ್ಲೆಗಳಲ್ಲಿ ರೈಲು ಸಂಪರ್ಕವಿಲ್ಲದ ಏಕಮಾತ್ರ ಜಿಲ್ಲೆ ಕೊಡಗು ಎಂಬ ಕೊರಗನ್ನು ದೂರಮಾಡುವ ನಿಟ್ಟಿನಲ್ಲಿ ಕುಶಾಲನಗರದವರೆಗೂ ಮಾತ್ರ ರೈಲು ಸಂಪರ್ಕ ಕಲ್ಪಿಸುವ 3097 ಕೋಟಿ ರೂ. ವೆಚ್ಚದ ಯೋಜನೆಗೆ ಕೇಂದ್ರದ ಅನುಮೋದನೆ ದೊರಕಿದ್ದು, ಡಿ.ಪಿ.ಆರ್. ಸಿದ್ಧಪಡಿಸಲಾಗಿದೆ. ಟಿಪ್ಪು ಎಕ್ಸ್‌ಪ್ರೆಸ್ ಬದಲು 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಮರುನಾಮಕರಣ ಮಾಡಲಾಗಿದೆ ಮೈಸೂರು–ತಾಳಗುಪ್ಪ ರೈಲನ್ನು 'ಕುವೆಂಪು ಎಕ್ಸ್‌ಪ್ರೆಸ್' ಎಂದು ನಾಮಕರಣ.

ಮೈಸೂರಿನ ವಿವಿಧೆಡೆ ಶಿವನಾಮ ಸ್ಮರಣೆ, ಜಾಗರಣೆ



ಅರಮನೆ ಆವರಣದ ತ್ರಿನೇಶ್ವರ ಸ್ವಾಮಿ ದೇವಾಲಯಕ್ಕೆ ಚಿನ್ನದ ಕೊಳಗ ಧರಿಸಿ, ಅಲಂಕರಿಸಿರುವುದು.



ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿ 101 ಶಿವಲಿಂಗಗಳ ದರ್ಶನ ಪಡೆಯುತ್ತಿರುವ ಭಕ್ತರು

ಮೈಸೂರು,ಮಾ.9(ಎಂಟಿವೈ)–ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಶುಕ್ರವಾರ ಶಿವನಾಮ ಸ್ಮರಣೆ ಜರುಗಿತು. ದಿನವಿಡೀ ಶಿವನ ದೇಗುಲಗಳಲ್ಲಿ ವಿಶೇಷ ಪೂಜಾ ಮಹೋತ್ಸವ ಜರುಗಿದ್ದು, ಅಪಾರ ಸಂಖ್ಯೆಯಲ್ಲಿ ಭಕ್ತರು ದೇವಾಲಯಕ್ಕೆ ಆಗಮಿಸಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರಿನ ವಿವಿಧ ಬಡಾವಣೆಗಳಲ್ಲಿರುವ ಶಿವದೇವಾಲಯಗಳಲ್ಲಿ ವಿಶೇಷ ಪೂಜೆಗಾಗಿ ಶಿವಲಿಂಗಕ್ಕೆ ವಿಶೇಷ ಅಲಂಕಾರ, ಅಭಿಷೇಕ, ಶಿವಮಂತ್ರ, ಶಿವಪಾರಾಯಣ ಸೇರಿದಂತೆ ಇನ್ನಿತರ ಧಾರ್ಮಿಕ ಕಾರ್ಯ ಜರುಗಿತು. ಶಿವರಾತ್ರಿ ಜಾಗರಣೆ ಹಿನ್ನೆಲೆಯಲ್ಲಿ ದೇವಾಲಯ, ಶ್ರೀರಾಮ ಮಂದಿರಗಳಲ್ಲಿ ಶಿವನಾಮ ಸ್ಮರಣೆ, ಭಜನೆ, ಹರಿಕಥೆ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಮೂಲಕ ಮಹಾಶಿವರಾತ್ರಿ ಆಚರಣೆಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲು ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ರಾತ್ರಿಯಿಡೀ ದೇವಾಲಯಗಳ ಮುಂದೆ ಶಿವರಾತ್ರಿ ಸಂಭ್ರಮ ಮನೆ ಮಾಡಿತ್ತು.

ಚಿನ್ನದ ಕೊಳಗದಿಂದ ಕಂಗೊಳಿಸಿದ ತ್ರಿನೇಶ್ವರ: ಅರಮನೆ ಆವರಣದಲ್ಲಿರುವ ತ್ರಿನೇಶ್ವರ ದೇವಾಲಯದಲ್ಲಿ ಸಂಪ್ರದಾಯದಂತೆ ಶಿವಲಿಂಗಕ್ಕೆ ಚಿನ್ನದ ಕೊಳಗ ಧರಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು. ಮುಂಜಾನೆ 3.30ರಿಂದಲೇ ತ್ರಿನೇಶ್ವರಸ್ವಾಮಿ ಶಿವಲಿಂಗಕ್ಕೆ ವಿವಿಧ ಅಭಿಷೇಕ ನೆರವೇರಿತು. ದೇವಾಲಯದ ಅರ್ಚಕ ಸಂತಾನಂ ನೇತೃತ್ವದಲ್ಲಿ ತ್ರಿನೇಶ್ವರಸ್ವಾಮಿಗೆ ಧಾರ್ಮಿಕ ಪೂಜಾ ಕೈಂಕರ್ಯ ಜರುಗಿತು. ಬಳಿಕ ಬೆಳಗ್ಗೆ 6 ಗಂಟೆಯಿಂದ ಭಕ್ತರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಯಿತು. 11 ಕೆಜಿ ತೂಕದ ಚಿನ್ನದ ಕೊಳಗದಿಂದ ಕಂಗೊಳಿಸುತ್ತಿದ್ದ ತ್ರಿನೇಶ್ವರಸ್ವಾಮಿಯನ್ನು ಕಣ್ತುಂಬಿಕೊಂಡ ಭಕ್ತರು ಸಂಭ್ರಮಿಸಿದರು.

ಶುಕ್ರವಾರ ಬೆಳಗ್ಗೆ 6 ಗಂಟೆಯಿಂದ ಮಧ್ಯರಾತ್ರಿ 12 ಗಂಟೆವರೆಗೂ ನಿರಂತರವಾಗಿ ಭಕ್ತರು ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಬಂದು ದರ್ಶನ ಪಡೆದರು. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಹಾಗೂ ಆದ್ಯವೀರ್ ಒಡೆಯರ್ ಅವರು ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಬಂದು ದರ್ಶನ ಪಡೆದರು. ಮುಜರಾಯಿ ಇಲಾಖೆ ವತಿಯಿಂದ ದೇವಾಲಯಕ್ಕೆ ಬರುವ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಗುರುಕುಲದಲ್ಲೂ ಭಕ್ತರ ಜಂಗುಳಿ: ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವ ಜರುಗಿತು. ಬೆಳಗ್ಗಿನಿಂದ ರಾತ್ರಿವರೆಗೂ ನಿರಂತರವಾಗಿ ಭಕ್ತರು ದೇವಾಲಯಕ್ಕೆ ಆಗಮಿಸಿ, ದರ್ಶನ ಪಡೆದರು. ಗುರುಕುಲದಲ್ಲಿ 101 ಶಿವಲಿಂಗಗಳಿದ್ದು, ಭಕ್ತರು ಬಿಲ್ವಪತ್ರೆ ಸಮರ್ಪಿಸಿ ಶಿವನನ್ನು ಆರಾಧಿಸಿದರು. ಶಿವರಾತ್ರಿ ಹಿನ್ನೆಲೆಯಲ್ಲಿ ದೇಗುಲವನ್ನು ಅಲಂಕರಿಸಲಾಗಿತ್ತು. ರಸ್ತೆಯ ಎರಡೂ ಬದಿಯಲ್ಲೂ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ವಿವಿಧ ದೇವಾಲಯಗಳಲ್ಲೂ ಪೂಜೆ: ರಾಮಾನುಜ ರಸ್ತೆಯಲ್ಲಿರುವ ಶ್ರೀ ಕಾಮಕಾಮೇಶ್ವರಿ ದೇವಾಲಯ, ಅಶೋಕ ರಸ್ತೆಯಲ್ಲಿರುವ ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ, ಲಷ್ಕರ್ ಮೊಹಲ್ಲಾದ ಗರಡಿಕೇರಿಯ ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನ, ಹಳೆ ಸಂತೆಪೇಟೆಯ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ವಿ.ವಿ.ಮೊಹಲ್ಲಾದ ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ, ಗಂಗೋತ್ರಿ ಬಡಾವಣೆಯ ಮಾರುತಿ ದೇವಸ್ಥಾನ, ಖಿಲ್ಲೆ ಮೊಹಲ್ಲಾ ಭೈರವೇಶ್ವರಸ್ವಾಮಿ ದೇವಸ್ಥಾನ, ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನ, ನಾಗಲಿಂಗೇಶ್ವರ ಮಠ, ವಿಜಯನಗರದ ಯೋಗಾನರಸಿಂಹಸ್ವಾಮಿ ದೇವಾಲಯ, ದೇವರಾಜ ಮೊಹಲ್ಲಾ ದಿವಾನ್ಸ್ ರಸ್ತೆ ಅಮೃತೇಶ್ವರ ದೇವಾಲಯ, ಕುರುಬಾರಹಳ್ಳಿ ಮಲೆ ಮಹದೇಶ್ವರ ಸ್ವಾಮಿ ದೇವಾಲಯ, ಗಣಪತಿ ಸಚ್ಚಿದಾನಂದ ಆಶ್ರಮ, ಚಾಮುಂಡಿಬೆಟ್ಟದ ಮಹಾಬಲೇಶ್ವರ ಸ್ವಾಮಿ, ಲಿಂಗಾಂಬುದಿ ಕೆರೆ ಮಹಾಲಿಂಗೇಶ್ವರ ದೇವಾಲಯ, ಪಡುವಾರಹಳ್ಳಿ, ಕುಂಬಾರಕೊಪ್ಪಲು, ಸಿದ್ಧಾರ್ಥನಗರ, ಹಳ್ಳದಕೇರಿ, ಸುಣ್ಣದಕೇರಿ ಸೇರಿದಂತೆ ವಿವಿಧೆಡೆಯಿರುವ ಮಹದೇಶ್ವರಸ್ವಾಮಿ ದೇವಾಲಯಗಳಲ್ಲೂ ಶಿವರಾತ್ರಿ ಹಬ್ಬದ ವಿಶೇಷ ಪೂಜಾ ಕಾರ್ಯ ಜರುಗಿತು. ವಿವಿಧೆಡೆಯಿಂದ ಭಕ್ತರು ದೇವಾಲಯಗಳಿಗೆ ಆಗಮಿಸಿ ದರ್ಶನ ಪಡೆದರು.



ಸುತ್ತೂರು ಮಠದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವುದು.



ವಿಜಯನಗರದ ಯೋಗನರಸಿಂಹಸ್ವಾಮಿ ದೇಗುಲದಲ್ಲಿ ಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ದೇವಾಲಯದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ಪೂಜೆ ನೆರವೇರಿಸಿದರು.



ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿ ಸರಸ್ವತಿಪುರಂ ಸೇವಾ ಕೇಂದ್ರದಿಂದ ವಿಜಯವಿಠಲ ಭಜನಾ ಮಂಡಲಿಯವರು ದೇವರನಾಮ, ಕೀರ್ತನೆ, ದಾಸರ ಪದಗಳನ್ನು ನಡೆಸಿಕೊಟ್ಟರು. ವಿಜಯ, ಮೀನಾಕ್ಷಿ, ನಾಗರತ್ನ, ಹೇಮಾ, ಮೀರಾ, ಹೇಮಾವತಿ, ಸರೋಜ, ವಸಂತ ಇದ್ದಾರೆ.

ಶಿವನ ದರ್ಶನ ಮಾಡಿದರೆ ಜ್ಞಾನ, ಆರೋಗ್ಯ ಲಭ್ಯ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅಭಿಮತ



ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಶಿವಲಿಂಗಕ್ಕೆ ಹಾಲಿನ ಅಭಿಷೇಕ ಮಾಡುತ್ತಿರುವುದು.

ಮೈಸೂರು,ಮಾ.9–ಮಹಾಶಿವರಾತ್ರಿಯಂದು ಶಿವನ ದರ್ಶನ ಮಾಡಿದರೆ ಜ್ಞಾನ, ಆರೋಗ್ಯ ಶುಭ ಕ್ಷೇಮ ಸಿಗಲಿದೆ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನುಡಿದರು.

ಮಹಾಶಿವರಾತ್ರಿ ಪ್ರಯುಕ್ತ ಗಣಪತಿ ಸಚ್ಚಿದಾನಂದ ಆಶ್ರಮದ ಆವರಣದಲ್ಲಿರುವ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ವಿಶೇಷ ಅಭಿಷೇಕ ಪೂಜೆ ನೆರವೇರಿಸಿ, ನಾಡಿನ ಜನರಿಗೆ ಆಶೀರ್ವಚನ ನೀಡಿದರು. ಸೂರ್ಯನನ್ನು ನೋಡಿದರೆ ಆರೋಗ್ಯ ಸಿಗುತ್ತದೆ ಎಂದು ಹೇಳ ಲಾಗುತ್ತದೆ. ಹೋಮದ ಯಜ್ಞದ ಅಗ್ನಿ ಯನ್ನು ನೋಡಿದರೆ ಐಶ್ವರ್ಯ ಸಿಗು ತ್ತದೆ ಹಾಗೆಯೇ ಶಿವನ ದರ್ಶನ ಮಾಡಿದರೆ ಜ್ಞಾನ, ಆರೋಗ್ಯ, ಎಲ್ಲವೂ ಸಿಗುತ್ತದೆ ಎಂದು ಹೇಳುತ್ತಾರೆ. ಶಿವ ಮಂತ್ರ ಬಹಳ ಮುಖ್ಯ, ಶ್ರೀರಾಮಚಂದ್ರ ಕೂಡ ಶಿವ ಮಂತ್ರವನ್ನು ಜಪಿಸು ತ್ತಿದ್ದರು ಹಾಗೆಯೇ ಶಿವ ಕೂಡ ರಾಮ ಮಂತ್ರವನ್ನು ಜಪಿಸುತ್ತಾರೆ ಕಾಶಿಯಲ್ಲಿ ಮರಣ ಅಪ್ಪಿದರೆ ಆ ಶಿವನೇ ಬಂದು ಕಿವಿಯಲ್ಲಿ ರಾಮಮಂತ್ರ ಉಪದೇಶ ಮಾಡುತ್ತಾರೆ ಎಂಬ ನಂಬಿಕೆ ಇದೆ ಎಂದು ಶ್ರೀಗಳು ಹೇಳಿದರು.

ಶಿವ ಕೇಶವ ಇಬ್ಬರೂ ಒಂದೇ, ಶಿವರಾತ್ರಿಯ ದಿನ ಉತ್ತರ ಭಾಗಗಳಲ್ಲಿ ವಿಷ್ಣುವಿನ ದೇವಾಲಯಕ್ಕೆ ಭಕ್ತರು ಹೋಗುವ ಪದ್ಧತಿ ಇದೆ, ಶಿವನಿಗೆ ಗಂಗೆ ಅತಿಪ್ರಿಯ ಅವನು ಅಭಿಷೇಕ ಪ್ರಿಯ ಅವನಿಗೆ ಅಭಿಷೇಕ ಮಾಡಿ ಅವನ ನಾಮ ಸ್ಮರಣೆ ಮಾಡಿದರೆ ಸಾಕು ನಮಗೆ ಎಲ್ಲ ಫಲ ದೊರೆಯುತ್ತದೆ ಎಂದರು. ಶಿವನಿಗೆ ರೂಪವಿಲ್ಲ, ಅವನು ಬಿಂದು. ಕಲ್ಲಿನಲ್ಲೂ ಕೂಡ ಶಿವನನ್ನು ನಾವು ಕಾಣುತ್ತೇವೆ. ಈ ಶಿವರಾತ್ರಿಯ ದಿನ ಅವನ ಧ್ಯಾನ ಮಾಡಿದರೆ ಶಿವನಾಮ ಸ್ಮರಣೆ ಮಾಡಿದರೆ ಅವರ ಜೀವನ ಚೆನ್ನಾಗಿರುತ್ತದೆ ಎಂದು ಶ್ರೀಗಳು ತಿಳಿಸಿದರು.



ತ್ರಿನೇಶ್ವರ ಸ್ವಾಮಿ ದರ್ಶನ ಪಡೆಯಲು ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಆಗಮಿಸುತ್ತಿರುವ ಭಕ್ತರು



ಮೈಸೂರಿನ ಹಿನಕಲ್‌ನಲ್ಲಿರುವ ಹಿರಿಯ ಜೀವಿಗಳ ಆಶ್ರಯ ತಾಣ ವಾತ್ಸಲ್ಯ ಸೇವಾ ಫೌಂಡೇಶನ್ ವತಿಯಿಂದ ಮಹಾಶಿವರಾತ್ರಿ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಿರಿಯ ಜೀವಿಗಳಿಗೆ ಸಿಹಿ ಹಾಗೂ ಹಣ್ಣನ್ನು ಹಂಚುವುದರ ಮೂಲಕ ಸಂಭ್ರಮ, ಸಡಗರದಿಂದ ಆಚರಿಸಲಾಯಿತು.



ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಪಡುವಾರಹಳ್ಳಿಯ ಶ್ರೀ ಲೀಲಾ ಚೆನ್ನಯ್ಯ ಸಮುದಾಯ ಭವನದಲ್ಲಿ ಶಾಸಕ ಕೆ.ಹರೀಶ್‌ಗೌಡರು, ಪೌರಕಾರ್ಮಿಕರು, ಆಶಾ ಕಾರ್ಯಕರ್ತರಿಗೆ ಗೌರವ ಸಮರ್ಪಿಸಿದರು. ಈ ವೇಳೆ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಈಶ್ವರ್ ಚಕ್ರಿ, ಜನತಾ ಬಜಾರ್ ಮಾಜಿ ಅಧ್ಯಕ್ಷ ಚಂದ್ರಶೇಖರ್, ಎಸ್.ಆರ್. ರವಿಕುಮಾರ್, ಶೇಖರ್, ಬಾಲಣ್ಣ, ಮುಖಂಡರಾದ ರಾಜೀವ್, ಆನಂದ್ ಜ್ಞಾನೇಶ್, ಪವನ್ ಮತ್ತಿತರರು ಇದ್ದರು.

ಮೈಸೂರಿನ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಏಕಾದಶರುದ್ರ ಮಹಾ ದರ್ಶನ

ಮೈಸೂರು, ಮಾ.9(ಬಿಎಲ್‌ಯು)– ಮಹಾ ಶಿವರಾತ್ರಿ ಅಂಗವಾಗಿ ಮೈಸೂರಿನ ಅಶೋಕರಸ್ತೆಯ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ನಿನ್ನೆ ಏಕಾದಶರುದ್ರ ಮಹಾ ದರ್ಶನ ಆಯೋಜಿಸಲಾಗಿತ್ತು.


ದೇವಸ್ಥಾನದ ಶ್ರೀ ಕನ್ನಿಕಾಮಹಲ್ ಛತ್ರದಲ್ಲಿ 12 ಜ್ಯೋತಿರ್ಲಿಂಗಗಳನ್ನು ಪ್ರದರ್ಶಿಸಲಾಗಿತ್ತು. ಶಿವನ 12 ಅವತಾರಗಳನ್ನು ಶಿವಲಿಂಗಗಳಲ್ಲಿ ಪ್ರದರ್ಶಿಸಲಾಗಿತ್ತು. ಲಿಂಗಗಳಿಗೆ ಬಣ್ಣ ಬಣ್ಣದ ವರ್ಣರಂಜಿತ ಪ್ರಖರ ಬೆಳಕಿನ ಸ್ಪರ್ಶ ನೀಡಿ ಅತ್ಯಾಕರ್ಷಕ ಮೆರಗು ನೀಡಲಾಗಿತ್ತು. ಆವರಣದಲ್ಲಿದ್ದ ಶಿವಲಿಂಗಕ್ಕೆ ನಿರಂತರ ಜಲಾಭಿಷೇಕವಾಗುವಂತೆ ಮಾಡಲಾಗಿತ್ತು.

ಮಹಾಶಿವರಾತ್ರಿ ಹಬ್ಬವಾದ ನಿನ್ನೆ ಸಹಸ್ರಾರು ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿ 12 ಜ್ಯೋತಿರ್ಲಿಂಗಗಳ ದರ್ಶನ ಪಡೆದು ಧನ್ಯತಾ ಭಾವ ಮೆರೆದರು. ಈ ಸಂದರ್ಭದಲ್ಲಿ ಪ್ರತಿಯೊಬ್ಬ ಭಕ್ತರಿಗೆ ಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಲಾಗಿತ್ತು.

ಶಿವರಾತ್ರಿಯ ಜಾಗರಣೆ ವೇಳೆ ದೇವಸ್ಥಾನದ ಕನ್ಯಾಕಾ ಪರಮೇಶ್ವರಿ, ಈಶ್ವರ, ಸುಬ್ರಹ್ಮಣ್ಯ, ವಿಷ್ಣು ಸೇರಿದಂತೆ ಇತರೆ ದೇವರಿಗೆ ಇಡೀ ರಾತ್ರಿ ವಿವಿಧ ಪೂಜಾ ಪುನಸ್ಕಾರ ಮಾಡಲಾಯಿತು. ಬೆಳಿಗ್ಗೆಯಿಂದ ಉಪವಾಸದಲ್ಲಿದ್ದ ಭಕ್ತರು ರಾತ್ರಿ ಫಲಹಾರ ಮಾಡಿದ ನಂತರ ಮುಂಜಾನೆ ತನಕ ಸರದಿಯಲ್ಲಿ ಬಂದು ದೇವರ ದರ್ಶನ ಪಡೆದು ಭಕ್ತಿ ಭಾವ ಮೆರೆದರು.

ಈ ವೇಳೆ ಶ್ರೀ ಕನ್ಯಾಕಾಪರಮೇಶ್ವರಿ ದೇವಸ್ಥಾನ ಕಾರ್ಯಕಾರಿ ಸಮಿತಿ ಅಧ್ಯಕ್ಷ ಎಸ್.ಕೆ.ದಿನೇಶ್, ಕಾರ್ಯದರ್ಶಿ ಅಮರನಾಥ್ ಸೇರಿದಂತೆ ಇತರರು ಹಾಜರಿದ್ದರು.





ಮೈಸೂರಿನ ಅಶೋಕ ರಸ್ತೆ ಕನ್ಯಕಪರಮೇಶ್ವರಿ ದೇವಸ್ಥಾನದಲ್ಲಿ ಶುಕ್ರವಾರ ಮಹಾಶಿವರಾತ್ರಿ ಅಂಗವಾಗಿ ಜ್ಯೋತಿರ್ಲಿಂಗಗಳನ್ನು ಪ್ರದರ್ಶಿಸಲಾಗಿತ್ತು. ದೇವಸ್ಥಾನದ ಕಾರ್ಯಕಾರಿ ಸಮಿತಿ ಅಧ್ಯಕ್ಷ ಎಸ್.ಕೆ.ದಿನೇಶ್ ಹಾಗೂ ಇತರರನ್ನು (ಎಡಚಿತ್ರ) ಕಾಣಬಹುದು. ಜ್ಯೋತಿರ್ಲಿಂಗದಲ್ಲಿ ಶಿವನ ಒಂದು ಅವತಾರವನ್ನು (ಬಲಚಿತ್ರ) ಕಾಣಬಹುದು.



ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಮಹಾಶಿವರಾತ್ರಿಯನ್ನು ದೈವಿಕ ಸಡಗರದಿಂದ ಆಚರಿಸಲಾಯಿತು. ಯೋಗ ಬಂಧುಗಳು ವೈಯಕ್ತಿಕವಾಗಿ ಕಾಶಿಯಿಂದ ತಂದ ಗಂಗಾಜಲದಿಂದ ಲಿಂಗಕ್ಕೆ ಅಭಿಷೇಕ ಮಾಡಿದರು. ನಂತರ ಭಜನೆ, ಮಹಾಮಂಗಳಾರತಿ ಮಾಡಿ ಭಕ್ತಾದಿಗಳಿಗೆ ಪ್ರಸಾದವನ್ನು ವಿತರಿಸಲಾಯಿತು. ಯೋಗ ಗುರುಗಳಾದ ನಾ ಶ್ರೀಧರ್ ನೇತೃತ್ವದಲ್ಲಿ ಎಲ್ಲಾ ಬಂಧುಗಳಿಗೂ ಲಿಂಗ ಹಾಗೂ ರುದ್ರಾಕ್ಷಿಯನ್ನು ವಿತರಿಸಲಾಯಿತು. ಕೃಷ್ಣಮೂರ್ತಿ, ಕೃಷ್ಣಮೂರ್ತಿ ಅವಧಾನಿ, ಸಂಧ್ಯಾ, ವಿಜಯ್‌ಕುಮಾರ್, ಸುಮಿತ್ರ, ವಿಶ್ವನಾಥ್, ವಿಮಲಾ, ಶೇಖರ್, ವೀಣಾ ಹಾಗೂ ಇನ್ನಿತರ ಹಿರಿಯ ನಾಗರಿಕರು ಹಾಜರಿದ್ದರು.

ಕೆ.ಹೆಮ್ಮನಹಳ್ಳಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಸಂಭ್ರಮ

ಮೈಸೂರು, ಮಾ. 9– ನಗರದ ಬೋಗಾದಿ–ಗದ್ದಿಗೆ ರಸ್ತೆಯ ಕೆ ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ಹಾಗೂ ಶಿವರಾತ್ರಿ ಸಂಭ್ರಮಾಚರಣೆ ಸಂಪನ್ನಗೊಂಡಿತು. ಶುಕ್ರವಾರ ಬೆಳಗ್ಗೆ ನಾನಾ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಶಿವರಾತ್ರಿ ಆಚರಣೆ ಆರಂಭವಾಯಿತು. ಬೆಳಗ್ಗಿನಿಂದ ಪ್ರತಿ ಆರು ಗಂಟೆಗೊಂದರಂತೆ ರುದ್ರಾಭಿಷೇಕ, ಅಲಂಕಾರ, ಪ್ರಸಾದ ಧಾರ್ಮಿಕ ಆಚರಣೆಗಳು ನಡೆದವು. ಭಕ್ತಾದಿಗಳಿಗೆ ಸ್ವತಃ ಅಭಿಷೇಕ ಮಾಡಲು ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ಭಕ್ತಾದಿಗಳು ಭಕ್ತಿ ಭಾವದಿಂದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಧನ್ಯತೆ ಅನುಭವಿಸಿದರು.



ಶಿವರಾತ್ರಿ ಅಂಗವಾಗಿ ರಾತ್ರಿ ಶ್ರೀ ಭಗೀರಥ ಚರಿತ್ರೆ ನಾಟಕ ಪುಸ್ತಕವನ್ನು ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಪರ ಆಯುಕ್ತ ಡಿ ಜಗನ್ನಾಥ ಸಾಗರ್ ಲೋಕಾರ್ಪಣೆ ಮಾಡಿದರು. ಶ್ರೀ ಭಗೀರಥ ಚರಿತ್ರೆ ನಾಟಕಕಾರ ಎಂ ಎಸ್.ವೆಂಕಟರಾಂ, ಎಚ್.ಎಸ್.ಗೋವಿಂದಗೌಡ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಗಣೇಶ, ಮಂಡಳಿ ಪ್ರಧಾನ ಕಾರ್ಯದರ್ಶಿ ಅನಂತವರ್ಧನ್, ಜ್ಞಾನಾಮೃತ ಸೇವಾ ಟ್ರಸ್ಟ್ ಹಾಗೂ ರಾಜ್ಯ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಹೆಚ್.ಕೆ.ನಾಗೇಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಶಿವರಾತ್ರಿ ಅಂಗವಾಗಿ ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು. ರಾತ್ರಿ ಜಾಗರಣ ಪ್ರಯುಕ್ತ ಹೆಮ್ಮರಗಾಲದ ಶ್ರೀ ಮಲ್ಲಿಕಾರ್ಜುನ ಡ್ರಾಮಾ ಸೀನರಿ ಅವರ ಝುಗಮಗಿಸುವ ರಂಗಮಂಟಪದಲ್ಲಿ ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ ಕಲಾವಿದರು ಬೆಳ್ಳಾವೆ ನರಹರಿ ಶಾಸ್ತ್ರಿ ವಿರಚಿತ ಸಂಪೂರ್ಣ ರಾಮಾಯಣ ನಾಟಕ ಪ್ರದರ್ಶಿಸಿದರು.

ಮೈಸೂರಲ್ಲಿ ಹಿರಿಯ ವೈದ್ಯಾಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಮಾ.9– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸೆಯಲ್ಲಿನ ಎ.ಆರ್.ಟಿ ವಿಭಾಗಕ್ಕೆ ಒಂದು ವರ್ಷದ ಅವಧಿಗೆ ನೇರ ಸಂದರ್ಶನದ ಮೂಲಕ ಗುತ್ತಿಗೆ ಆಧಾರದ ಮೇಲೆ ಹಿರಿಯ ವೈದ್ಯಾಧಿಕಾರಿಯ ಹುದ್ದೆಗೆ ಅನುಭವ ಮತ್ತು ಅರ್ಹತೆಗನುಸಾರವಾಗಿ ನಿಗದಿತ ವಯೋಮಾನದಡಿಯಲ್ಲಿ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.


ವಿದ್ಯಾರ್ಹತೆ: ಔಷಧ ಅಥವಾ ಯಾವುದೇ ವಿಭಾಗದಲ್ಲಿ ಎಂಡಿ ಮಾಡಿರಬೇಕು ಅಥವಾ ಕನಿಷ್ಠ ಮೂರು ವರ್ಷ ಅನುಭವ ಹೊಂದಿರುವ ಯಾವುದೇ ಕ್ಲಿನಿಕಲ್ ವಿಭಾಗದಲ್ಲಿ ಡಿಪ್ಲೊಮಾದೊಂದಿಗೆ ಎಂಬಿಬಿಎಸ್ ಪೂರ್ಣಗೊಂಡಿರಬೇಕು ಅಥವಾ ಹೆಚ್.ಐ.ವಿ ಮೆಡಿಸಿನ್‌ನಲ್ಲಿ ಫೆಲೋಶಿಪ್‌ನೊಂದಿಗೆ ಎಂಬಿಬಿಎಸ್ ಅಥವಾ ಸಾರ್ವಜನಿಕ ಆರೋಗ್ಯ ಡಿಪ್ಲೊಮಾದಲ್ಲಿ ಮೂರು ವರ್ಷಗಳ ಅನುಭವ ಹೊಂದಿರಬೇಕು. ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಅಭ್ಯರ್ಥಿಗೆ 69 ವರ್ಷ ಮೀರಿರಬಾರದು.

ಅರ್ಹ ಅಭ್ಯರ್ಥಿಗಳು ಮಾ.25ರಂದು ಬೆಳಗ್ಗೆ 9ರಿಂದ 10.30 ಗಂಟೆಯೊಳಗೆ ವೈಯಕ್ತಿಕ ವಿವರ (ಬಯೋಡೆಟಾ) ಮತ್ತು ವಿದ್ಯಾರ್ಹತೆ, ಅನುಭವ ಪ್ರಮಾಣ ಪತ್ರ, ಭಾವಚಿತ್ರ ಹಾಗೂ ಇತರೆ ಸಂಬಂಧಿಸಿದ ದಾಖಲಾತಿಗಳ ಜೆರಾಕ್ಸ್ ಪ್ರತಿ ಹಾಗೂ ಮೂಲ ದಾಖಲಾತಿಗಳೊಂದಿಗೆ ಎಆರ್‌ಟಿ ಕೇಂದ್ರ ಕೊಠಡಿ ಸಂ.18ರಲ್ಲಿ ನೇರ ಸಂದರ್ಶನಕ್ಕೆ (ವಾಕ್ ಇನ್ ಇಂಟರ್‌ವ್ಯೂ) ಹಾಜರಾಗಬೇಕೆಂದು ಕೆಆರ್‌ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಕರ್ನಾಟಕ ಕೇಂದ್ರೀಯ ವಿವಿ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮಾ.9(ಜಿಎ)–ಕಲ್ಬುರ್ಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ 2024–25ರ ಸಾಲಿನ ವಿವಿಧ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯ ಬಯಸುವವರಿಗಾಗಿ ನಡೆಸುವ ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮಾ.26 ಕೊನೆ ದಿನವಾಗಿದೆ. ಹೀಗಾಗಿ ಹೆಚ್ಚಿನ ವಿದ್ಯಾರ್ಹತೆ ಪಡೆಯಬಯಸುವವರು ಪ್ರಯೋಜನ ಪಡೆಯಬೇಕು ಎಂದು ಜೀವ ವಿಜ್ಞಾನ ವಿಭಾಗದ ಡೀನ್ ಪ್ರೊ.ಎನ್.ಸತ್ಯನಾರಾಯಣ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.27ರಿಂದ ನೋಂದಣಿ ಆರಂಭವಾಗಿದೆ. ಬಿ.ಟೆಕ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಬಿಎಸ್ಸಿ ಭೌತಶಾಸ್ತ್ರ, ಬಿಎಸ್ಸಿ ಭೂಗೋಳಶಾಸ್ತ್ರ, ಬಿಎಸ್ಸಿ ಭೂವಿಜ್ಞಾನ ಮೊದಲಾದ ಸುಮಾರು 14 ಕೋರ್ಸ್‌ಗಳು ಇಲ್ಲಿವೆ. ಮೈಸೂರಿನಲ್ಲಿಯೂ ಪ್ರವೇಶ ಪರೀಕ್ಷೆ ನಡೆಯುತ್ತಿದೆ. ಇದು ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯಲ್ಲಿನ ಸಂಸ್ಥೆಯಾದರೂ ಇದರ ಬಗ್ಗೆ ಹಲವರಿಗೆ ಮಾಹಿತಿ ಇಲ್ಲ. ಹೀಗಾಗಿ ತಾವು ಈ ಮೂಲಕ ವಿದ್ಯಾರ್ಥಿಗಳಿಗೆ ಪ್ರವೇಶ ಪಡೆಯುವಂತೆ ಮನವಿ ಮಾಡುತ್ತಿರುವುದಾಗಿ ತಿಳಿಸಿದರು. ಮಾಹಿತಿಗೆ ದೂ. 011–40759000 ಅಥವಾ 011–69227700 ನ್ನು ಸಂಪರ್ಕಿಸಲು ಕೋರಿದರು.


ಸಂಸದ ವಿ.ಶ್ರೀನಿವಾಸ ಪ್ರಸಾದ್, ವಾಸು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.


'ಮೈಸೂರು ಮಿತ್ರ ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ. ಕೆ.ಬಿ.ಗಣಪತಿ ಅವರು ವಾಸು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖಂಡ ವಿಕ್ರಾಂತ್ ಪಿ.ದೇವೇಗೌಡ ಮತ್ತಿತರರಿದ್ದರು.


ಶಾಸಕ ತನ್ವೀರ್ ಸೇಠ್, ವಾಸು ಅವರ ಪುತ್ರರಿಗೆ ಸಾಂತ್ವನ ಹೇಳಿದರು.


ಮಾಜಿ ಡಿಸಿಎಂ ಡಿ.ವಿ.ಸದಾನಂದಗೌಡ, ವಾಸು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.


ವಾಸು ಅಂತಿಮ ದರ್ಶನ ಪಡೆದ ಉದ್ಯಮಿ ಪಿ.ವಿ.ಗಿರಿ, ವಾಸು ಪುತ್ರ ಕವೀಶ್‌ಗೌಡರಿಗೆ ಸಾಂತ್ವನ ಹೇಳಿದರು.


ಮಾಜಿ ಸಚಿವ ಸಾ.ರಾ.ಮಹೇಶ್, ವಾಸು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.


ವಿಧಾನಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ವಾಸು ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.


ಶನಿವಾರ ನಿಧನರಾದ ಮಾಜಿ ಶಾಸಕರಾದ ವಾಸು ಅವರಿಗೆ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಸಾಹುಕಾರ್‌ಹುಂಡಿ ಗೋಪಾಲಗೌಡ, ಸವಿತ ಸಮಾಜ ನಗರ ಅಧ್ಯಕ್ಷ ಹರೀಶ್ ರೆಡ್ಡಿ, ಎಸ್.ಎಲ್.ನಾರಾಯಣ್, ಯೋಗೇಶ್, ರಾಜಕುಮಾರ್, ಕೆ.ಪ್ರಕಾಶ್‌ರಾಜುರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.

ವಾಸು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಗಣ್ಯರು


ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಾಸು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.


ಸಂಸದ ವಿ.ಶ್ರೀನಿವಾಸ ಪ್ರಸಾದ್, ಮಾಜಿ ಸಿಎಂ ಡಿ.ವಿ.ಸದಾನಂದಗೌಡ, ಸಚಿವ ಕೆ.ವೆಂಕಟೇಶ್, ಮಾಜಿ ಡಿಸಿಎಂ ಅಶ್ವಥ್ ನಾರಾಯಣ್, ಶಾಸಕ ಪುಟ್ಟರಂಗಶೆಟ್ಟಿ, ಮಾಜಿ ಶಾಸಕ ಎಲ್.ನಾಗೇಂದ್ರ ಮತ್ತಿತರರು ವಾಸು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಮೈಸೂರು, ಮಾ.9(ಆರ್‌ಕೆ, ಎಸ್‌ಬಿಡಿ)– ಮಾಜಿ ಶಾಸಕ ವಾಸು ಅವರು ನಿಧನರಾದ ವಿಷಯ ತಿಳಿಯುತ್ತಿದ್ದಂತೆಯೇ ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರು, ಮಾಜಿ ಮೇಯರ್‌ಗಳು, ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಮುಖಂಡರು, ಕಾರ್ಯಕರ್ತರು, ವಿವಿಧ ಸಂಘ–ಸಂಸ್ಥೆಗಳ ಪ್ರಮುಖರು ಸೇರಿದಂತೆ ಸಾವಿರಾರು ಮಂದಿ ಗಣ್ಯರು ಆಸ್ಪತ್ರೆ ಮತ್ತು ನಿವಾಸಕ್ಕೆ ತೆರಳಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ತೀವ್ರ ಸಂತಾಪ ಸೂಚಿಸಿದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ವಾಸು ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ. ತಮ್ಮ ಶೋಕ ಸಂದೇಶದಲ್ಲಿ ಜನಪ್ರತಿನಿಧಿಗಳಾಗಿ ಕೆಲಸ ಮಾಡಿ ಜನಪ್ರಿಯತೆ ಗಳಿಸಿದ್ದವರು. ನನಗೂ ಆತ್ಮೀಯರಾಗಿದ್ದರು. ಇವರ ನಿಧನ ಮನಸ್ಸಿಗೆ ಅತೀವ ನೋವುಂಟು ಮಾಡಿದೆ ಎಂದು ಶೋಕಿಸಿದ್ದಾರೆ. ಶ್ರೀಯುತರ ನಿಧನದ ದುಃಖ ಸಹಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ ಎಂದಿದ್ದಾರೆ.

ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಸೇರಿದಂತೆ ಹಲವರು ಕ್ಲಿಯರ್‌ಮೆಡಿ ರೇಡಿಯೆಂಟ್ ಆಸ್ಪತ್ರೆಗೆ ತೆರಳಿ ವಾಸು ಅವರ ಪಾರ್ಥಿವ ಶರೀರದ ದರ್ಶನ ಪಡೆದರು.

ಸುತ್ತೂರು ಶ್ರೀಗಳು, ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದ ಸ್ವಾಮೀಜಿ, ಶ್ರೀ ಯೋಗನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ವಿ.ಶ್ರೀನಿ ವಾಸ ಪ್ರಸಾದ್, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವಥ್ ನಾರಾಯಣ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್, ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಎ.ಮಂಜು, ರವೀಂದ್ರ ಶ್ರೀಕಂಠಯ್ಯ, ದರ್ಶನ್ ಪುಟ್ಟಣ್ಣಯ್ಯ, ದರ್ಶನ್ ಧ್ರುವ ನಾರಾಯಣ್, ಪುಟ್ಟರಂಗಶೆಟ್ಟಿ, ಅನಿಲ್ ಚಿಕ್ಕಮಾದು, ಮಾಜಿ ಶಾಸಕರಾದ ಎಲ್.ನಾಗೇಂದ್ರ ಸಾ.ರಾ.ಮಹೇಶ್, ಹೆಚ್.ಪಿ. ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಸಿ.ಎನ್.ಮಂಜುನಾಥ್, ವಿಧಾನಪರಿಷತ್ ಮಾಜಿ ಸದಸ್ಯರಾದ ಸಂದೇಶ್ ನಾಗರಾಜ್, ಪ್ರೊ.ಮಲ್ಲಿಕಾರ್ಜುನಪ್ಪ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ಹಿರಿಯ ಮುಖಂಡ ಬಿ.ಪಿ.ಮಂಜು ನಾಥ್, ಮಾಜಿ ಮೇಯರ್‌ಗಳಾದ ಶಿವಕುಮಾರ್, ಮೋದಾಮಣಿ, ಆರಿಫ್ ಹುಸೇನ್, ಪುಷ್ಪಲತಾ ಚಿಕ್ಕಣ್ಣ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷರಾದ ಎಂ.ಚಂದ್ರಶೇಖರ್, ಪ್ರೊ.ನೀ.ಗಿರಿಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಮಾಜಿ ಕಾರ್ಪೊರೇಟರ್ ಪ್ರಶಾಂತ್ ಗೌಡ, ಅವರು ಜಯಲಕ್ಷ್ಮೀಪುರಂನಲ್ಲಿರುವ ನಿವಾಸಕ್ಕೆ ತೆರಳಿ ವಾಸು ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ಅಶ್ರು ತರ್ಪಣ ಸಲ್ಲಿಸಿದರು.

ಮಾಜಿ ಶಾಸಕ ಡಾ.ಎಸ್.ಎಲ್.ಭಾರತಿ ಶಂಕರ್, ಮಾಜಿ ಎಂಎಲ್‌ಸಿ ಆರ್. ಧರ್ಮಸೇನ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಬಿಜೆಪಿ ಮುಖಂಡರೂ ಆದ ಹಿರಿಯ ವಕೀಲ ಅರುಣ್‌ಕುಮಾರ್, ಮುಂಜು ಬುದ್ಧಿ, ಹೆಚ್.ಎ.ವೆಂಕಟೇಶ್, ಸಿ.ನಾರಾಯಣಗೌಡ, ಎಂ.ಆನಂದ, ಮಂಚೇಗೌಡನ ಕೊಪ್ಪಲು ರವಿ, ಪಡುವಾರಹಳ್ಳಿ ರವಿ, ಹೆಚ್.ಅರವಿಂದ, ಸೋಮಶೇಖರ್, ಕುಪೇಂದ್ರ ರೆಡ್ಡಿ, ಸಲೀಂ ಅಹಮದ್, ಕೆ.ಟಿ.ಶ್ರೀಕಂಠೇಗೌಡ, ಡಾ.ರವೀಂದ್ರ, ನಿವೃತ್ತ ಎಸಿಪಿ ಜಿ.ಎನ್. ಮೋಹನ್, ಮೈಸೂರ್ ರೇಸ್ ಕ್ಲಬ್ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ, ಕೂರ್ಗಳ್ಳಿ ಮಹದೇವ, ಬೆಳವಾಡಿ ರಮೇಶ್, ಶ್ರೀನಿವಾಸ, ವಿಕ್ರಾಂತ್ ಪಿ.ದೇವೇಗೌಡ, ಸಮಾಜ ಸೇವಕ ಬೂಕನಕೆರೆ ವಿಜೇಂದ್ರ, ಜೆಡಿಎಸ್ ವಕ್ತಾರ ರವಿಚಂದ್ರೇಗೌಡ, ಪ್ರಸನ್ನಗೌಡ, ಪ್ರದೀಪ್, ಕುರುಬೂರು ಶಾಂತ ಕುಮಾರ್, ಮೂಗೂರು ನಂಜುಂಡ ಸ್ವಾಮಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸಿ.ಕೆ. ಮಹೇಂದ್ರ, ಎಂ.ಸುಬ್ರಹ್ಮಣ್ಯ, ಬಿ.ರಾಘವೇಂದ್ರ, ನಾಗೇಶ ಪಾಣತ್ತಲೆ, ಜಯಶಂಕರ್, ಹುಯಿಲಾಳು ರಾಮಸ್ವಾಮಿ, ಕನ್ನಡ ಚಳವಳಿಗಾರ ತಾಯೂರು ವಿಠಲಮೂರ್ತಿ ಸೇರಿದಂತೆ ಸಾವಿರಾರು ಮಂದಿ ವಾಸು ಅವರ ಪಾರ್ಥಿವ ಶರೀರದ ದರ್ಶನ ಪಡೆದರು.

ತಾವು ಕಷ್ಟದಲ್ಲಿದ್ದರೂ ಬೇರೆಯವರಿಗೆ ಸಹಾಯ

ವಾಸು ದೈವಾಧೀನರಾಗಿದ್ದು ದುಃಖದ ಸಂಗತಿ. ಅವರದು ಭಾವನಾತ್ಮಕ ವ್ಯಕ್ತಿತ್ವ. ರಾಜಕೀಯದಲ್ಲಿದ್ದರೂ ಸಾಮಾಜಿಕ, ಶಿಕ್ಷಣ ಹೀಗೆ ಹಲವು ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರು. ಅವರು ಯಾವುದೇ ಹುದ್ದೆಯಲ್ಲಿದ್ದಾಗಲೂ 'ಮೇಯರ್ ವಾಸು' ಎಂದೇ ಚಿರಪರಿಚಿತರಾಗಿದ್ದರು. ಇದು ಮೈಸೂರಿನೊಂದಿಗಿದ್ದ ಅವರ ಅವಿನಾಭಾವ ಸಂಬಂಧಕ್ಕೆ ಸಾಕ್ಷಿ. ಸದಾ ಕಾಲ ಸಾಮಾನ್ಯರ ಕಷ್ಟಸುಖಗಳಿಗೆ ಸ್ಪಂದಿಸುತ್ತಿದ್ದರು. ಮಹಾರಾಣಿ ಕಾಲೇಜು ಮಕ್ಕಳ ತೊಂದರೆ ಅರಿತು ಸರ್ಕಾರದ ಗಮನ ಸೆಳೆದರು. ಮಹಾರಾಣಿ ಕಾಲೇಜು ಹೊಸ ಕಟ್ಟಡ ಈ ಭಾಗದ ಹೆಣ್ಣುಮಕ್ಕಳಿಗೆ ವಾಸು ಅವರು ಕೊಟ್ಟ ವರ ಎಂದರೆ ಅತಿಶಯವಾಗದು. ಗುರುಹಿರಿಯರು, ಮಠಮಾನ್ಯಗಳ ಬಗ್ಗೆ ಅಪಾರವಾದ ಗೌರವ ಹೊಂದಿದ್ದರು. ಅವರಿಗೆಷ್ಟೇ ಕಷ್ಟವಿದ್ದರೂ ಕಷ್ಟದಲ್ಲಿದ್ದವರ ಸಹಾಯಕ್ಕೆ ನಿಲ್ಲುತ್ತಿದ್ದರು. ಅವರ ಕೆಲಸಗಳನ್ನು ಅವರ ಅಭಿಮಾನಿಗಳು, ವಿಶ್ವಾಸಿಗಳು ಮುಂದುವರೆಸಲಿ.

-ಸುತ್ತೂರು ಶ್ರೀಗಳು

ದೇವಸ್ಥಾನದಲ್ಲಿ ಮದುವೆ ನಡೆಸಿಕೊಡಲು ಹೇಳಿದ್ದರು

ಮೇಯರ್ ವಾಸು ಎಂದೇ ಚಿರಪರಿಚಿತರಾಗಿದ್ದ ವಾಸು ಅವರು ಹಲವು ಬಡ ವಿದ್ಯಾರ್ಥಿಗಳಿಗೆ ಒಂದು ರೂ. ಅಪೇಕ್ಷೆಯಿಲ್ಲದೆ ವಿದ್ಯಾದಾನ ಮಾಡಿದ್ದರು. ನಾಳಿದ್ದು ನಮ್ಮ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಅವರ ಮಗನಿಗೆ ಸರಳವಾಗಿ ವಿವಾಹ ಮಾಡಿಸಿಕೊಡಬೇಕು ಎಂದು ಹೇಳಿದ್ದರು. ಈ ವೇಳೆ ನನಗೆ ಏನೂ ಮಾತನಾಡಲಾಗುತ್ತಿಲ್ಲ. ವಾಸು ಅವರ ಸೇವೆಗಳನ್ನು ಅವರ ಮಕ್ಕಳೂ ಮುಂದುವರೆಸುತ್ತಾರೆಂಬ ವಿಶ್ವಾಸವಿದೆ.

-ಡಾ.ಭಾಷ್ಯಂ ಸ್ವಾಮೀಜಿ

ಲೋಕಸಭಾ ಟಿಕೆಟ್ ಬಗ್ಗೆಯೂ ಚರ್ಚೆಯಾಗಿತ್ತು....

ಮೈಸೂರು, ಮಾ.9– ವಾಸು ಅವರು ಶಾಸಕರಾಗಿ ತುಂಬಾ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರು. ಹಿಂದೆ ಲೋಕಸಭಾ ಚುನಾವಣೆ ಟಿಕೆಟ್ ಬಗ್ಗೆಯೂ ಚರ್ಚೆಯಾಗಿತ್ತು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮೈಸೂರಿನಲ್ಲಿ ವಾಸು ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಾಸು ಅವರು ನನಗೆ ಬಹಳ ಆತ್ಮೀಯರಾಗಿದ್ದರು. ತುಂಬಾ ವರ್ಷಗಳಿಂದ ಪರಿಚಿತರಾಗಿದ್ದರು. ನಾನು ಮೀನಾಕ್ಷಿ ದೇವಿಯವರಿಂದ ಜಮೀನು ಖರೀದಿಸಿದ್ದಕ್ಕೆ ವಾಸು ಅವರೂ ಸಾಕ್ಷಿಯಾಗಿದ್ದರು. ವಾಸು ಮೇಯರ್ ಆಗಿದ್ದಾಗ ಚಾಮುಂಡೇಶ್ವರಿ ಕ್ರೀಡಾಂಗಣ ನಿರ್ಮಾಣಕ್ಕೆ 2 ಎಕರೆ ಜಮೀನನ್ನು ಉಚಿತವಾಗಿ ನೀಡಿದ್ದೆ. ನಮ್ಮ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿದ್ದರು. ನನ್ನ ಮೇಲೆ ಹೆಚ್ಚು ಅಭಿಮಾನವಿತ್ತು. ಹಿಂದೆ ಪಾರ್ಲಿಮೆಂಟ್ ಟಿಕೆಟ್ ಬಗ್ಗೆ ಕೂಡ ಚರ್ಚೆಯಾಗಿತ್ತು. ಅವರ ಆರೋಗ್ಯ ಸರಿಯಿಲ್ಲದ ಕಾರಣಕ್ಕೆ ಚರ್ಚೆ ಮುಂದುವರೆಯಲಿಲ್ಲ ಎಂದರು.

ಶಾಸಕರಾಗಿ ವಾಸು ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರು. ವೀರಪ್ಪಮೊಯ್ಲಿ ಅವರು ಸಿಎಂ ಆಗಿದ್ದಾಗ ಅವರ ರಾಜಕೀಯ ಕಾರ್ಯದರ್ಶಿ ಯಾಗಿದ್ದರು. ನಾನು ಸಹಕಾರ ಮಂತ್ರಿಯಾಗಿದ್ದಾಗ ವಾಸು ಕೈಗಾರಿಕಾ ಬ್ಯಾಂಕ್ ಅಧ್ಯಕ್ಷರಾಗಿದ್ದರು. ಸಹಕಾರ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿದ್ದ ಅವರು ಬಹಳ ದೂರದೃಷ್ಟಿತ್ವದ ರಾಜಕಾರಣಿ. ವಿದ್ಯಾಸಂಸ್ಥೆ ಕಟ್ಟಿ ಶಿಕ್ಷಣ ಕ್ಷೇತ್ರದಲ್ಲೂ ತಮ್ಮದೇ ಆದ ಛಾಪು ಮೂಡಿಸಿದರು. ನಮ್ಮ ಪಕ್ಷದ ಪ್ರಾಮಾಣಿಕ ಕಾರ್ಯಕರ್ತ. ಇಂದು ನಮ್ಮನ್ನು ಅಗಲಿದ್ದಾರೆ. ಎಲ್ಲವೂ ಭಗವಂತನ ಲೀಲೆ. ವಾಸು ಕುಟುಂಬಸ್ಥರು ಸೇರಿದಂತೆ ಅವರ ಎಲ್ಲಾ ಸ್ನೇಹಿತರಿಗೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ. ಸರ್ಕಾರದ ಪರವಾಗಿ ಬಂದು ನಾನು ಗೌರವ ಅರ್ಪಿಸಿದ್ದೇನೆ ಎಂದು ತಿಳಿಸಿದರು.

ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ...



ನಾನು ಮತ್ತು ವಾಸು ಆತ್ಮೀಯ ಸ್ನೇಹಿತರು. ನಾವಿಬ್ಬರೂ ಒಟ್ಟಿಗೆ ಸಹಕಾರ ಕ್ಷೇತ್ರಕ್ಕೆ ಪ್ರವೇಶ ಮಾಡಿದೆವು. ಜೊತೆಯಲ್ಲೇ ಸಹಕಾರಿಗಳ ಪರ ಹೋರಾಟವನ್ನೂ ಮಾಡಿದ್ದೆವು. ರಾಜಕೀಯ ಪಕ್ಷಗಳು ಬೇರೆಯಾದರೂ ನಮ್ಮಿಬ್ಬರ ನಡುವೆ ಆತ್ಮೀಯ ಬಾಂಧವ್ಯವಿತ್ತು. ಸಹಕಾರ, ರಾಜಕೀಯ ಸೇವೆ ಜೊತೆಗೆ ವಾಸು, ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದಾರೆ. ಅವರು ಶಿಕ್ಷಣ ತಜ್ಞರ ರೀತಿ ಕೆಲಸ ಮಾಡಿದ್ದರು. ಶಾಸಕರಾಗಿದ್ದಾಗಲೂ ಶಿಕ್ಷಣ ಕ್ಷೇತ್ರದ ಬಗ್ಗೆ ಅಪಾರ ಕಾಳಜಿಯಿಂದ ಹೋರಾಟ ಮಾಡಿದ ಧೀಮಂತ ನಾಯಕ. ಇವರ ಅಗಲಿಕೆಯಿಂದ ಮೈಸೂರಿಗಷ್ಟೇ ಅಲ್ಲ ಇಡೀ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಕುಟುಂಬದವರಿಗೆ ಧೈರ್ಯ ತುಂಬಿದ್ದೇನೆ. ತಾಯಿ ಚಾಮುಂಡೇಶ್ವರಿ ದುಃಖ ಸಹಿಸುವ ಶಕ್ತಿ ನೀಡಲಿ.

- ಜಿ.ಟಿ.ದೇವೇಗೌಡರು, ಶಾಸಕ

ಒಂದು ಸಂಸ್ಥೆಗೆ ವಾಸು ಹೆಸರಿಡಿ...

ವಾಸು ಅವರನ್ನು ಹಲವು ವರ್ಷಗಳಿಂದ ಬಲ್ಲೆ. ಅವರ ನಡವಳಿಕೆ, ಮಾತುಗಳು, ಪ್ರೀತಿ ಆಪ್ಯಾಯವಾಗಿತ್ತು. ಎಲ್ಲಾ ಜವಾಬ್ದಾರಿಗಳನ್ನೂ ಸಹಕಾರಿ ವ್ಯಕ್ತಿಯಾಗಿ ನಿರ್ವಹಿಸಿದ್ದರು. ರಾಜಕೀಯದಲ್ಲಿ ಜಂಟಲ್‌ಮನ್ ಆಗಿದ್ದರು. ಘನತೆ, ಗಾಂಭೀರ್ಯ ಕಾಪಾಡಿಕೊಂಡಿದ್ದರು. ಶಾಸಕರಾಗಿ ಜಯದೇವ ಆಸ್ಪತ್ರೆ, ಟ್ರಾಮಾ ಕೇರ್, ಜಿಲ್ಲಾಸ್ಪತ್ರೆ, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಮಹಾರಾಣಿ ವಾಣಿಜ್ಯ ಕಾಲೇಜು ಹೀಗೆ ಹಲವು ಕೆಲಸ ಮಾಡಿದ್ದಾರೆ. ಅವರನ್ನು ಕಳೆದುಕೊಂಡಿದ್ದು ತುಂಬಲಾರದ ನಷ್ಟ. ಅವರ ಹೆಸರು ಶಾಶ್ವತವಾಗಿ ಉಳಿಯಬೇಕು. ಈ ನಿಟ್ಟಿನಲ್ಲಿ ಅವರ ಅಭಿಮಾನಿಗಳು, ಹಿತೈಷಿಗಳ ಆಶಯದಂತೆ ವಾಸು ಅವರ ಕಾಲಘಟ್ಟದಲ್ಲಾದ ಯಾವುದಾದರೊಂದು ಸಂಸ್ಥೆಗೆ ಅವರ ಹೆಸರನ್ನು ನಾಮಕರಣ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

-ಡಾ.ಸಿ.ಎನ್.ಅಶ್ವಥ್ ನಾರಾಯಣ್

ಆತ್ಮೀಯ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ...

ವಾಸು ಅವರು ಸುಮಾರು 40 ವರ್ಷಗಳಿಂದ ಆತ್ಮೀಯರು. ಶಿಕ್ಷಣ ಮುಗಿಸಿದ ಬಳಿಕ ಅವರು ಕರ್ನಾಟಕ ಕೈಗಾರಿಕಾ ಸಹಕಾರ ಬ್ಯಾಂಕ್ ನಿರ್ದೇಶಕರಾದರು. ನಂತರ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಕೆಲಸ ಮಾಡಿದರು. ನಾನು ಸಂಸದನಾಗಿದ್ದಾಗ ಮೈಸೂರು ನಗರ ಪಾಲಿಕೆಗೆ ಅವಕಾಶ ಮಾಡಿ ಕೊಟ್ಟೆ ನಂತರ ಮೇಯರ್ ಆದರು, ಶಾಸಕರಾದರು. ವಿದ್ಯಾಸಂಸ್ಥೆ ಕಟ್ಟಿದರು. ಬಹಳ ಜನಪ್ರಿಯರಾದರು. ನನ್ನ ರಾಜಕೀಯ ಪಯಣದ 50ನೇ ವರ್ಷದ ಕಾರ್ಯಕ್ರಮದ ಜವಾಬ್ದಾರಿಯನ್ನು ಅವರೇ ವಹಿಸಿಕೊಂಡು ಪ್ರಾರಂಭ ಮಾಡಿದ್ದರು. ವಾಸು ಅವರ ಅಗಲಿಕೆಯಿಂದ ಮೈಸೂರಿಗೆ ನಷ್ಟವಾಗಿದೆ. ವೈಯಕ್ತಿಕವಾಗಿ ನಾನು ಆತ್ಮೀಯ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ.

-ವಿ.ಶ್ರೀನಿವಾಸ ಪ್ರಸಾದ್, ಸಂಸದರು

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ವೈಶಿಷ್ಟ್ಯತೆ

ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲಿನಲ್ಲಿ ನಾರಿ ಶಕ್ತಿ ಪ್ರದರ್ಶನ

- ಇಂದೇ ಒಂದು ಬೃಹತ್ ರೈಲು ನಿರ್ವಹಣೆ ಮಾಡಿದ ಮಹಿಳೆಯರು
- ಮಹಿಳಾ ಪ್ರಯಾಣಿಕರಿಗೆ ಸಿಹಿ ವಿತರಿಸಿ ಶುಭಾಶಯ ಕೋರಿಕೆ
- ತಾಂತ್ರಿಕತೆಯಲ್ಲಿ ಮಹಿಳೆಯರ ಆದ್ಯತೆಯೊಂದಿಗೆ ರೈಲ್ವೆಯಲ್ಲಿ ಲಿಂಗ ಸಮಾನತೆಯ ಮಹಾ ಸಂದೇಶ


ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಲೋಕೊ ಪೈಲಟ್ ಸೇರಿದಂತೆ ಮಹಿಳಾ ಸಿಬ್ಬಂದಿಗಳೇ ನಿರ್ವಹಣೆ ಮಾಡಿದ ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಚಾಲನೆ ನೀಡಿದರು.

ಮಹಿಳಾ ಲೋಕೊ ಪೈಲಟ್ ಸಾಧನೆ



ರೈಲ್ವೆ ಇಲಾಖೆಯ 12 ವರ್ಷಗಳ ಸೇವೆಯಲ್ಲಿ ಕಳೆದ 4 ವರ್ಷಗಳಿಂದ ಲೋಕೊ ಪೈಲಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ರೈಲು ಚಾಲನೆ ನನಗೇನು ಹೊಸದಲ್ಲ. ಈ ಮೊದಲು ಗೂಡ್ಸ್ ರೈಲು, ಪ್ಯಾಸೆಂಜರ್ ರೈಲು ಚಾಲನೆ ಮಾಡಿದ್ದೇನೆ. ರೈಲು ಚಾಲನೆ ಮಾಡುವ ಲೋಕೊ ಪೈಲಟ್ ಕರ್ತವ್ಯ ನಿರ್ವಹಣೆ ಕಷ್ಟದ ಕೆಲಸ. ಆದರೆ ಕಷ್ಟದ ಕೆಲಸ ಎಂದು ಮಹಿಳೆಯರು ಹಿಂಜರಿಯಬಾರದು. ತಾಂತ್ರಿಕ ಪರಿಣತಿ ಹೊಂದಬೇಕು. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಮಹಿಳಾ ಪ್ರಾಧಾನ್ಯತೆ ಮೆರೆಯಬೇಕು.

–ಶ್ರೀಶಾ, ಜಿ., ಲೋಕೊ ಪೈಲಟ್

ಮೈಸೂರು, ಮಾ.9(ಬಿಎಲ್‌ಯು)– ಮೈಸೂರಿನ ರೈಲ್ವೆ ವಿಭಾಗ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಹತ್ವ ಸಾರಿದೆ. ಮೈಸೂರು–ಬೆಂಗಳೂರು ನಡುವಿನ ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲನ್ನು ಮಹಿಳಾ ಸಿಬ್ಬಂದಿಗಳೇ ಪೂರ್ಣ ಪ್ರಮಾಣದಲ್ಲಿ ನಿರ್ವಹಣೆ ಮಾಡಿ ನಾರಿ ಶಕ್ತಿಯನ್ನು ಪ್ರದರ್ಶಿಸಿದರು.

ಮೈಸೂರಿನ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಭ್ರಮ ಮನೆ ಮಾಡಿತ್ತು. ಮೈಸೂರಿನಿಂದ ಬೆಂಗಳೂರಿಗೆ ಹೊರಟ ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪಿಂಕ್ ಬಲೂನ್‌ಗಳು ರಾರಾಜಿಸಿದವು.

ಇದರಲ್ಲಿ ಪ್ರಯಾಣಿಸುತ್ತಿದ್ದ ಮಹಿಳಾ ಪ್ರಯಾಣಿಕರಿಗೆ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಗುಲಾಬಿ ಮತ್ತು ಸಿಹಿ ನೀಡಿ ಶುಭಾಶಯ ಕೋರಿದರು. ಈ ವೇಳೆ ಲೋಕೋ ಪೈಲಟ್, ಸಹಾಯಕ ಲೋಕೋ ಪೈಲಟ್, ರೈಲಿನ ಇಂಜಿನ್ ಸಂಪರ್ಕ ಕಲ್ಪಿಸುವ ತಾಂತ್ರಿಕರು, ಟಿಕೆಟ್ ಕಲೆಕ್ಟರ್, ಟಿಕೆಟ್ ಪರಿವೀಕ್ಷಕರು, ರೈಲ್ವೆ ಸಂರಕ್ಷಣಾ ದಳ ಎಲ್ಲರೂ ಮಹಿಳಾ ಸಿಬ್ಬಂದಿಗಳೆ ಆಗಿದ್ದು ಕೌಶಲ್ಯ ಮೆರೆದರು. ಈ ವೇಳೆ ಮಹಿಳೆಯರಲ್ಲಿ ಹೂಡಿಕೆ ಮಾಡಿ, ಪ್ರಗತಿಯನ್ನು ವೇಗಗೊಳಿಸಿ ಎಂಬ ಘೋಷ ವಾಕ್ಯದೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಲಾಯಿತು. ಈ ಮೂಲಕ ಭಾರತೀಯ ರೈಲ್ವೆಯಲ್ಲಿ ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆಗೆ ಮಹತ್ವ ನೀಡಿರುವ ಸಂದೇಶ ಸಾರಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಿಲ್ಪಿ ಅಗರವಾಲ್, ಭಾರತೀಯ ರೈಲ್ವೆಯಲ್ಲಿ ಮಹಿಳೆಯರನ್ನು ಗುರುತಿಸುವ ಮತ್ತು ಬೆಂಬಲಿಸುತ್ತಿರುವ ಬೆಳವಣಿಗೆಯನ್ನು ಒತ್ತಿ ಹೇಳಿದರು. ಎಲ್ಲಾ ಕೆಲಸ ಕಾರ್ಯಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವ ಮತ್ತು ಉತ್ತೇಜಿಸುವ ಮಹಿಳಾ ಸಬಲೀಕರಣದ ಮಹತ್ವವನ್ನು ತಿಳಿಸಿದರು.

ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲನ್ನು ಮಹಿಳಾ ಸಿಬ್ಬಂದಿಗಳೇ ನಿರ್ವಹಣೆ ಮಾಡುವ ಮೂಲಕ ಮಹಿಳಾ ಸಾಧಕಿಯರ ಸಾಧನೆ ಏನೆಂದು ಸಮಾಜಕ್ಕೆ ಮನವರಿಕೆ ಮಾಡಿಕೊಡಲಾಗಿದೆ ಎಂದು ಶಿಲ್ಪಿ ಅಗರವಾಲ್ ಹೇಳಿದರು.

ಮಹಿಳಾ ಲೋಕೊ ಪೈಲಟ್ ಶ್ರೀಶಾ ಜಿ. ಹಾಗೂ ಸಹಾಯಕ ಲೋಕೊ ಪೈಲಟ್ ಸೋನಾ .ಜಿ ರಾಜ್ಯ ರಾಣಿ ಎಕ್ಸ್ ಪ್ರೆಸ್ ರೈಲನ್ನು ಚಾಲನೆ ಮಾಡಿದರು. ಮಧ್ಯಾಹ್ನ 2.45 ಗಂಟೆಗೆ ಬೆಂಗಳೂರಿಗೆ ಹೊರಟ ರಾಜ್ಯ ರಾಣಿ ಎಕ್ಸ್ ಪ್ರೆಸ್ ಪ್ರಯಾಣಕ್ಕೆ ಶಿಲ್ಪಿ ಅಗರವಾಲ್ ಹಸಿರು ನಿಶಾನೆ ತೋರಿದರು.

ಜನರಲ್ ಕೆ.ಎಸ್.ತಿಮ್ಮಯ್ಯ ಪ್ರತಿಮೆ ಮರುಸ್ಥಾಪನೆ

ಮಡಿಕೇರಿಯಲ್ಲಿ ಸಕಲ ಗೌರವಗಳೊಂದಿಗೆ ಅನಾವರಣ, ಗಣ್ಯಾತಿಗಣ್ಯರ ಉಪಸ್ಥಿತಿ

ಮಡಿಕೇರಿ,ಮಾ.9– ಕೊಡಗಿನ ವೀರ ಪುತ್ರ ವೀರ ಸೇನಾನಿ, ಪದ್ಮಭೂಷಣ ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಅತ್ಯಾಕರ್ಷಕವಾದ ಮತ್ತು ಯುವ ಸಮೂಹಕ್ಕೆ ಪ್ರೇರಣಾದಾಯಕವಾದ ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ಶುಕ್ರವಾರ ನಗರದಲ್ಲಿ ಸಕಲ ಗೌರವಗಳೊಂದಿಗೆ ಮರು ಸ್ಥಾಪಿಸಲಾಯಿತು. ಜಿಲ್ಲಾಡಳಿತ, ನಗರಸಭೆಯ ಉಸ್ತುವಾರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಪ್ರತಿಮೆಯನ್ನು ಪುಷ್ಪನಮನದ ಮೂಲಕ ಏರ್ ಮಾರ್ಷಲ್(ನಿ) ನಂದಾ ಕಾರ್ಯಪ್ಪ ಮತ್ತು ಮಾಜಿ ಸಚಿವ ಎಂ.ಸಿ.ನಾಣಯ್ಯ ಅವರು ಅನಾವರಣಗೊಳಿಸಿದರು. ನೂತನ ಪ್ರತಿಮೆ ಅನಾವರಣದ ಸಂದರ್ಭ ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯಿಂದ ಗೌರವ ನಮನ ಸಲ್ಲಿಸಲಾಯಿತು.



ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಪ್ರತಿಮೆಯನ್ನು ಅನಾವರಣಗೊಳಿಸುತ್ತಿರುವ ಗಣ್ಯರು.

ಈ ಸಂದರ್ಭ ಐದು ದಶಕಗಳ ಹಿಂದೆ ಜ.ತಿಮ್ಮಯ್ಯ ಅವರ ಪ್ರತಿಮೆ ಸ್ಥಾಪನೆಗೆ ಕಾರಣರಾಗಿದ್ದ ಮಾಜಿ ಸಚಿವ ಎಂ.ಸಿ. ನಾಣಯ್ಯ, ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂತರ್‌ಗೌಡ, ವಿರಾಜಪೇಟೆ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ವೀಣಾ ಅಚ್ಚಯ್ಯ, ಮಡಿಕೇರಿ ನಗರಸಭಾ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ, ಫೀ.ಮಾ. ಕಾರ್ಯಪ್ಪ ಮತ್ತು ಜ.ತಿಮ್ಮಯ್ಯ ಫೋರಂ ಅಧ್ಯಕ್ಷ ಕರ್ನಲ್(ನಿ) ಕಂಡ್ರತಂಡ ಸುಬ್ಬಯ್ಯ, ಕೊಡಗು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಮೇ.ಜ.(ನಿ) ಬಿ.ಎ.ಕಾರ್ಯಪ್ಪ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ನಗರಸಭೆ ಉಪಾಧ್ಯಕ್ಷೆ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಸತೀಶ್, ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮುತ್ತಪ್ಪ ಒಳಗೊಂಡಂತೆ ಮಾಜಿ ಸೈನಿಕರು, ಸಾರ್ವಜನಿಕರು ಜ.ತಿಮ್ಮಯ್ಯ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

ಭಾರತೀಯ ಎನ್ನುವುದು ಮೊದಲು: ವೀರ ಸೇನಾನಿಯ ಪ್ರತಿಮೆ ಅನಾವರಣಗೊಳಿಸಿದ ಏರ್ ಮಾರ್ಷಲ್(ನಿ) ನಂದಾ ಕಾರ್ಯಪ್ಪ ಮಾತನಾಡಿ, ಜನರಲ್ ಕೆ.ಎಸ್. ತಿಮ್ಮಯ್ಯ ಅವರು ತಮ್ಮ ಸೈನ್ಯದ ಅತ್ಯಪೂರ್ವವಾದ ಕಾರ್ಯ ವೈಖರಿಗಳಿಂದ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗೌರವಾದರಗಳನ್ನು ಪಡೆದ ಮಹಾನ್ ಸೇನಾನಿಯಾಗಿದ್ದಾರೆ. ಜನರಲ್ ತಿಮ್ಮಯ್ಯ ಅವರು ಬದುಕಿನುದ್ದಕ್ಕೂ 'ನಾನು ಭಾರತೀಯ ಎನ್ನುವುದು ಮೊದಲು. ಉಳಿದೆಲ್ಲವೂ ನಂತರದ್ದು' ಎನ್ನುವ ಮಹಾನ್ ಚಿಂತನೆ ಹೊಂದಿದ್ದರು. ಅಂತಹ ಉದಾತ್ತ ಚಿಂತನೆ ಯುವ ಸಮೂಹದ್ದಾಗಿರಲಿ ಎನ್ನುವ ಆಶಯವನ್ನು ವ್ಯಕ್ತಪಡಿಸಿದರು. ವೀರಸೇನಾನಿ ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಉದಾತ್ತ ಚಿಂತನೆಗಳು ಯುವ ಸಮೂಹಕ್ಕೆ ಪ್ರೇರಣಾದಾಯವಾಗಿರಲಿ ಎನ್ನುವ ಚಿಂತನೆಗಳಡಿ 1973ರಲ್ಲಿ ಅಂದಿನ ಪುರಸಭೆಯ ಅಧ್ಯಕ್ಷರಾಗಿದ್ದ ಎಂ.ಸಿ. ನಾಣಯ್ಯ ಅವರು ವೀರಸೇನಾನಿಯ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದರೆಂದು ಸ್ಮರಿಸಿದರು.

ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಮೇ.ಜ.ಬಿ.ಎ. ಕಾರ್ಯಪ್ಪ ಮಾತನಾಡಿ, ಜ.ತಿಮ್ಮಯ್ಯ ಅವರೊಬ್ಬ ಮಹಾನ್ ಸೈನಿಕರಾಗಿದ್ದವರೆಂದು ಬಣ್ಣಿಸಿದರು. ಮಾಜಿ ಸಚಿವ ಎಂ.ಸಿ. ನಾಣಯ್ಯ ಮಾತನಾಡಿ, 1973ರಲ್ಲಿ ಜ.ತಿಮ್ಮಯ್ಯ ಅವರ ಪ್ರತಿಮೆಯನ್ನು ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಅವರು ಅನಾವರಣಗೊಳಿಸಿದ್ದರು. ಆ ಸಂದರ್ಭ ಕೇಂದ್ರ ಸಚಿವರಾಗಿದ್ದ ಎಸ್.ಎಂ.ಕೃಷ್ಣ ಪಾಲ್ಗೊಂಡಿದ್ದನ್ನು ಸ್ಮರಿಸಿದರಲ್ಲದೆ, ಅಂದು ರಾಜ್ಯ ಸರ್ಕಾರ ಅಸ್ತಿತ್ವದಲ್ಲಿ ಇರಲಿಲ್ಲ. ಅಂತಹ ಸಂದರ್ಭವೂ ಅಂದಿನ ರಾಜ್ಯಪಾಲ ಧರ್ಮವೀರ ಅವರು ಪ್ರತಿಮೆ ಸ್ಥಾಪನೆಗೆ 10 ಸಾವಿರ ನೆರವನ್ನು ನೀಡಿದ್ದರು ಎಂದರು. ಪ್ರತಿಮೆಯನ್ನು ಅಂದು ಮುಂಬೈನ ಶಿಲ್ಪಿ ವಾಗ್ 30 ಸಾವಿರ ರೂ.ಗಳಿಗೆ ನಿರ್ಮಿಸಿ ಕೊಟ್ಟಿದ್ದನ್ನು ಸ್ಮರಿಸಿದರು. ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿದರು.

ಜನರಲ್ ತಿಮ್ಮಯ್ಯ ವೃತ್ತವಾಗಿ ಪರಿಗಣಿಸಿ: ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿ, ಜನರಲ್ ತಿಮ್ಮಯ್ಯ ಅವರ ಪ್ರತಿಮೆ ಇರುವ ಈ ವೃತ್ತ ವೀರ ಸೇನಾನಿಯ ಹೆಸರಿನಲ್ಲೆ ಕರೆಯಲ್ಪಡುವಂತಾಗಬೇಕು ಎಂದು ಮನವಿ ಮಾಡಿದರು. ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ ಅವರು ಮಾತನಾಡಿ, ದೇಶ ಕಂಡ ಅಪ್ರತಿಮ ವೀರ ಸೇನಾನಿ ಜ.ತಿಮ್ಮಯ್ಯ ಅವರ ಪ್ರತಿಮೆ ಸ್ಥಾಪನೆಯೊಂದಿಗೆ, ಈ ವೃತ್ತ ಅವರ ಹೆಸರಿನಲ್ಲೆ ಗುರುತಿಸಲ್ಪಡುವ ನಿಟ್ಟಿನಲ್ಲಿ ನಗರಸಭೆ ಮತ್ತೊಮ್ಮೆ ನಿರ್ಣಯ ಕೈಗೊಳ್ಳುವಂತೆ ಸಲಹೆ ನೀಡಿದರು.


ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ವೀರ ಸೇನಾನಿಯ ಪ್ರತಿಮೆ ಮರು ಸ್ಥಾಪನೆಗೆ ಕಾರಣರಾದವರನ್ನು ಸ್ಮರಿಸಿದರಲ್ಲದೆ, ವೀರಸೇನಾನಿ ಜ.ತಿಮ್ಮಯ್ಯ ಅವರ ಪ್ರತಿಮೆ ಅನಾವರಣದ ಮೂಲಕ ಅವರ ಜೀವನ ಸಂದೇಶಗಳು ಮುಂದಿನ ಪೀಳಿಗೆಗೆ ಸ್ಫೂರ್ತಿಯನ್ನು ನೀಡುವಂತಾಗಬೇಕು ಎಂದರು.

ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂತರ್‌ಗೌಡ ಮಾತನಾಡಿ, ಜ.ತಿಮ್ಮಯ್ಯ ಅವರ ಪ್ರತಿಮೆಯನ್ನು ಸುಮಾರು 3.50 ಲಕ್ಷ ರೂ. ವೆಚ್ಚದಲ್ಲಿ ದುರಸ್ತಿಪಡಿಸಿ ಸಜ್ಜುಗೊಳಿಸಲಾಗಿದ್ದು, ವೃತ್ತವನ್ನು 13.50 ಲಕ್ಷ ವೆಚ್ಚದಲ್ಲಿ ಮರು ನಿರ್ಮಿಸಲಾಗಿದೆ. ಭವಿಷ್ಯದ ದಿನಗಳಲ್ಲಿ ಈ ವೃತ್ತದಲ್ಲಿ ವಾಹನ ದಟ್ಟಣೆಗಳಿಂದ ತೊಂದರೆಯಾಗದ ರೀತಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದರ ಜೊತೆಯಲ್ಲೆ ಸಿಸಿ ಟಿವಿಗಳ ಅಳವಡಿಕೆ ಮಾಡಲು ಕ್ರಮ ಕೈಗೊಳ್ಳಬೇಕು ತಿಳಿಸಿದರು.

ಪ್ರತಿಮೆಗೆ ಭವ್ಯ ಸ್ವಾಗತ

ಮೈಸೂರಿನಿಂದ ಸಜ್ಜುಗೊಂಡು ಮಡಿಕೇರಿಗೆ ಶುಕ್ರವಾರ 11.30 ಗಂಟೆಯ ಹೊತ್ತಿಗೆ ಫೀ.ಮಾ. ಕಾರ್ಯಪ್ಪ ವೃತ್ತಕ್ಕೆ ಆಗಮಿಸಿದ ಜ.ತಿಮ್ಮಯ್ಯ ಪ್ರತಿಮೆಯನ್ನು ಹೊತ್ತ ಪ್ರತಿಮೆ ಮರು ಸ್ಥಾಪನಾ ವಾಹನವನ್ನು ಶಾಸಕರಾದಿಯಾಗಿ, ವಿವಿಧ ಸಂಘ ಸಂಸ್ಥೆಗಳು ಹಾಗೂ ಕೊಡವ ವಾಲಗದೊಂದಿಗೆ ಗೌರವ ಪೂರ್ವಕವಾಗಿ ಸ್ವಾಗತಿಸಿದರು. ಬಳಿಕ ವೀರ ಸೇನಾನಿಯ ಪ್ರತಿಮೆಯನ್ನು ಸಾಂಪ್ರದಾಯಿಕ ಕೊಂಬ್ ಕೊಟ್ಟ್ ವಾಲಗದೊಂದಿಗೆ ಜನರಲ್ ತಿಮ್ಮಯ್ಯ ವೃತ್ತದವರೆಗೆ ಮೆರವಣಿಗೆ ನಡೆಸಲಾಯಿತು. ಕೊಡವ ಉಡುಪಿನೊಂದಿಗೆ ವಿವಿಧ ಸಂಘ ಸಂಸ್ಥೆಗಳು, ಜ.ತಿಮ್ಮಯ್ಯ ಪಬ್ಲಿಕ್ ಶಾಲೆಯ ಎನ್‌ಸಿಸಿ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ಮಾಜಿ ಸೈನಿಕರು ಮೆರವಣಿಗೆಯಲ್ಲಿ ಸಾಗಿ ಬಂದುದು ವಿಶೇಷವಾಗಿತ್ತು. ಜೊತೆಗೆ ಬೈಕ್ ಜಾಥಾವು ಗಮನ ಸೆಳೆಯಿತು.

ಪೊನ್ನಂಪೇಟೆಯಲ್ಲಿ ಅಡ್ಡಾಡಿದ ಕಾಡಾನೆ



ಮಡಿಕೇರಿ: ಕಾಡಾನೆಗಳ ಹಿಂಡಿನಿಂದ ಬೇರ್ಪಟ್ಟ ಆನೆಯೊಂದು ಬೆಳ್ಳಂಬೆಳಗ್ಗೆ ಮಂಜು ಮುಸುಕಿದ ವಾತಾವರಣದಲ್ಲಿ ನಡು ರಸ್ತೆಯಲ್ಲಿ ಸಂಚರಿಸುವ ಮೂಲಕ ಜನರಲ್ಲಿ ಭೀತಿ ಮೂಡಿಸಿದ ಘಟನೆ ಪೊನ್ನಂಪೇಟೆಯಲ್ಲಿ ನಡೆದಿದೆ. ಶನಿವಾರ ಬೆಳಗ್ಗಿನ ಸುಮಾರು 7 ಗಂಟೆ ಸಮಯದಲ್ಲಿ ಪೊನ್ನಂಪೇಟೆ ಪಟ್ಟಣದಲ್ಲಿ ವರ್ತಕರು ಹಾಗೂ ಜನರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು.

ಮಂಜು ಮುಸುಕಿದ ವಾತಾವರಣದಲ್ಲಿ ಅಲ್ಲಿದ್ದ ಗದ್ದೆಯೊಂದರಲ್ಲಿ ಬೃಹತ್ ಆಕೃತಿ ಚಲಿಸುತ್ತಿದ್ದ ದೃಶ್ಯ ಅಸ್ಪಷ್ಟವಾಗಿ ಕಂಡು ಬಂದಿದೆ. ಕಣ್ಣರಳಿಸಿ ನೋಡಿದ ಜನರು ಕಾಡಾನೆಯೊಂದು ಪುರ ಪ್ರವೇಶ ಮಾಡಿರುವುದು ಕಂಡು ಹೌಹಾರಿದ್ದಾರೆ. ಪೊನ್ನಂಪೇಟೆ ನ್ಯಾಯಾಲಯದ ಸಮೀಪ ಪ್ರತ್ಯಕ್ಷವಾದ ಗಜರಾಜ ರಾಜಾರೋಷವಾಗಿ ರಸ್ತೆಯಲ್ಲಿ ಹೆಜ್ಜೆ ಹಾಕಿತು. ಆಗಷ್ಟೇ ಅಂಗಡಿಗಳನ್ನು ತೆರೆಯುತ್ತಿದ್ದ ವರ್ತಕರು, ರಸ್ತೆಯಲ್ಲಿ ಬರುತ್ತಿದ್ದ ವಾಹನ ಚಾಲಕರು, ರಸ್ತೆಯಲ್ಲಿ ಪ್ರತ್ಯಕ್ಷವಾದ ಅನಿರೀಕ್ಷಿತ ಅತಿಥಿಯನ್ನು ನೋಡಿ ಕಂಗಾಲಾಗಿದ್ದಾರೆ. ಆದರೆ ಇದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದ ಮದಕರಿ ತನ್ನಿಷ್ಟದಂತೆ ರಸ್ತೆಯಲ್ಲಿ ಹೆಜ್ಜೆ ಹಾಕುತ್ತಾ ಕುಂದಾ ರಸ್ತೆ ಮಾರ್ಗವಾಗಿ ಮುತ್ತಪ್ಪ ದೇವಸ್ಥಾನದ ಹಿಂಬದಿಯ ತೋಟಕ್ಕೆ ತೆರಳಿದೆ. ಬಳಿಕ ಬೆಂಕಿ ರೋಗ ಪರೀಕ್ಷಾ ಕೇಂದ್ರದ ಗದ್ದೆಗಾಗಿ ತೆರಳಿ, ಪೊನ್ನಂಪೇಟೆ–ಕುಟ್ಟ ಮುಖ್ಯ ರಸ್ತೆಯಿಂದ ನಿವಾಸಿಯೊಬ್ಬರ ಅಂಗಳದವರೆಗೂ ಹೋಯಿತು.

ಆಟೋದಡಿ ಸಿಲುಕಿ ಹಸುಗೂಸು ಸಾವು

ಮಡಿಕೇರಿ,ಮಾ.9– ರಸ್ತೆಯಲ್ಲಿ ಚಲಿಸುತ್ತಿದ್ದ ಆಟೋರಿಕ್ಷಾಗೆ ಜಿಂಕೆ ಡಿಕ್ಕಿ ಹೊಡೆದ ಪರಿಣಾಮ ರಿಕ್ಷಾ ಪಲ್ಟಿಯಾಗಿ ಆಟೋದ ಅಡಿಯಲ್ಲಿ ಸಿಲುಕಿ ಹಸುಗೂಸು ಮೃತಪಟ್ಟ ಘಟನೆ ಶ್ರೀಮಂಗಲ ಬೀರುಗ ಗ್ರಾಮದಲ್ಲಿ ನಡೆದಿದೆ. ಕಾಫಿ ತೋಟದ ಕೆಲಸಕ್ಕಾಗಿ ಜಾರ್ಖಂಡ್ ಮೂಲದ ಕೂಲಿ ಕಾರ್ಮಿಕರು ಶ್ರೀಮಂಗಲಕ್ಕೆ ಬಂದಿದ್ದು, ಅಲ್ಲಿಂದ ಆಟೋ ರಿಕ್ಷಾದಲ್ಲಿ ಬೀರುಗ ಗ್ರಾಮಕ್ಕೆ ತೆರಳುತ್ತಿದ್ದರು. ಮಾರ್ಗ ಮಧ್ಯೆ ಕಾಫಿ ತೋಟದ ಒಳಗಿಂದ ಏಕಾಏಕಿ ಜಿಂಕೆಯೊಂದು ಅಡ್ಡ ಬಂದು ಆಟೋ ರಿಕ್ಷಾಗೆ ಡಿಕ್ಕಿಯಾಗಿದೆ. ಪರಿಣಾಮ ಆಟೋ ಪಲ್ಟಿಯಾಗಿದ್ದು, ತಾಯಿಯ ಮಡಿಲಿನಲ್ಲಿದ್ದ 8 ತಿಂಗಳ ಅನುರಾಗ್ ರಾಜ್ ಎಂಬ ಪುಟ್ಟ ಮಗು ರಿಕ್ಷಾದ ಅಡಿ ಸಿಲುಕಿ ಪ್ರಾಣ ಬಿಟ್ಟಿದೆ. ಈ ಘಟನೆ ಕುರಿತು ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಗ್ರಾಮಸ್ಥರ ಪ್ರತಿಭಟನೆ: ಜಿಂಕೆ ಡಿಕ್ಕಿಯಾಗಿ ಆಟೋ ಮಗುಚಿ ಮಗು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಮಂಗಲ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಆಟೋ ಮಗುಚಿ ಬಿದ್ದು ಮಗು ಸಾವನ್ನಪ್ಪಲು ಜಿಂಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಮಗುವನ್ನು ಕಳೆದುಕೊಂಡ ಬಡ ಕೂಲಿ ಕಾರ್ಮಿಕ ಕುಟುಂಬಕ್ಕೆ ಅರಣ್ಯ ಇಲಾಖೆ ಸೂಕ್ತ ಪರಿಹಾರ ವಿತರಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದರು.

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಟಾರ್ ಚಂದ್ರು ಕಣಕ್ಕೆ



ವೆಂಕಟರಮಣೇಗೌಡ

ಮಂಡ್ಯ,ಮಾ.9–ಪ್ರತಿ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಚುನಾವಣೆ ಮುಗಿಯುವವರೆಗೂ ರಾಜ್ಯದ ಗಮನ ಸೆಳೆಯುವ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯ ಹೆಸರನ್ನು ಎಐಸಿಸಿ ಮೊದಲ ಪಟ್ಟಿಯಲ್ಲೇ ಘೋಷಿಸಿದ್ದು, ನಿರೀಕ್ಷೆಯಂತೆ ಉದ್ಯಮಿ ಹಾಗೂ ಸಮಾಜ ಸೇವಕ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರಿಗೆ ಟಿಕೆಟ್ ಘೋಷಿಸಿದೆ.

ಮುಂದಿನ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ರಾಜ್ಯದ ವಿವಿಧ ರಾಜ್ಯಗಳ ಒಟ್ಟು 39 ಕ್ಷೇತ್ರಕ್ಕೆ ಅಭ್ಯರ್ಥಿಗಳನ್ನು ಘೋಷಿಸಿದ್ದು, ರಾಜ್ಯದಲ್ಲೂ ಏಳು ಕ್ಷೇತ್ರಕ್ಕೆ ಅಭ್ಯರ್ಥಿಗಳ ಹೆಸರನ್ನು ಘೋಷಣೆ ಮಾಡಲಾಗಿದೆ. ಈ ಪೈಕಿ ಮೊದಲ ಪಟ್ಟಿಯಲ್ಲಿ ಮಂಡ್ಯ ಕ್ಷೇತ್ರ ಸಹ ಇದ್ದು, ಯಾವುದೇ ಗೊಂದಲವಿಲ್ಲದ ಕಾರಣ ಮೊದಲ ಪಟ್ಟಿಯಲ್ಲೇ ಮಂಡ್ಯ ಕ್ಷೇತ್ರದ ಹೆಸರಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ಕ್ಷೇತ್ರಗಳ ಪೈಕಿ ಏಳರಲ್ಲಿ ಕಾಂಗ್ರೆಸ್ ಗೆದ್ದು ಬೀಗಿದ್ದರಿಂದ ಹಲವು ಮಂದಿಯ ಹೆಸರು ಲೋಕಸಭಾ ಚುನಾವಣೆಯಲ್ಲಿ ಕೇಳಿ ಬಂದಿತ್ತು. ಕಾಂಗ್ರೆಸ್ ಮುಖಂಡರಾದ ಬಿ.ರೇವಣ್ಣ, ಕೀಲಾರ ರಾಧಾಕೃಷ್ಣ, ಡಾ.ಕೃಷ್ಣ, ಡಾ.ರವೀಂದ್ರ, ಕೆ.ಬಿ.ಚಂದ್ರಶೇಖರ್ ಹೀಗೆ ಹಲವು ಹೆಸರು ಓಡಾಡಿದ್ದವು. ಜೊತೆಗೆ ಹಾಲಿ ಸಂಸದೆ ಸುಮಲತಾ ಹಾಗೂ ಮಾಜಿ ಸಂಸದೆ ರಮ್ಯಾ ಹೆಸರು ಸಹ ಮುಂಚೂಣಿಯಲ್ಲಿತ್ತು ಅಂತಿಮವಾಗಿ ಉದ್ಯಮಿ ಸ್ಟಾರ್ ಚಂದ್ರುಗೆ ಮಣೆ ಹಾಕಲಾಗಿದೆ.

ಚಂದ್ರುಗೆ ಮಣೆ ಏಕೆ?: ಈ ಬಾರಿಯ ಚುನಾವಣೆಯಲ್ಲಿ ಹಲವು ಬಾಲಡ್ಯ ಮುಖಂಡರ ಹೆಸರು ಕೇಳಿ ಬಂದಿತ್ತಾದರೂ ಸರಳ ಹಾಗೂ ಸಜ್ಜನಿಕೆಯ ಮತ್ತು ರಾಜಕೀಯವಾಗಿ ದೊಡ್ಡ ಕುಟುಂಬದಲ್ಲಿ ಗುರುತಿಸಿಕೊಂಡಿರುವ ಸ್ಟಾರ್ ಚಂದ್ರು, ಮೂಲತ: ನಾಗಮಂಗಲ ದವರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೊರಗಿನವರನ್ನು ಬಿಟ್ಟು ನಾಟಿ ಬ್ರೀಡ್ ಅಭ್ಯರ್ಥಿಗೆ ಮಣೆ ಹಾಕುವುದಾಗಿ ಹೇಳಿದ್ದರು. ಜತೆಗೆ ಅಭಿಪ್ರಾಯ ಸಂಗ್ರಹ ಸಭೆಯಲ್ಲೂ ಕಾರ್ಯಕರ್ತರು ಜನರ ನಡುವೆ ಇರುವ, ಜನಸಾಮಾನ್ಯರಿಗೆ ಸಿಗುವ ಸಾಮಾನ್ಯ ಅಭ್ಯರ್ಥಿಗೆ ಟಿಕೆಟ್ ಕೊಡುವಂತೆ ಒತ್ತಾಯಿಸಿದ್ದರು. ಜೊತೆಗೆ ಆರ್ಥಿಕವಾಗಿಯೂ ಬಲಾಢ್ಯವಾಗಿರುವ ಮತ್ತು ಜನ ಸಾಮಾನ್ಯರ ನಡುವೆ ಬೆರೆಯುತ್ತಾರೆ ಎಂಬ ಕಾರಣಕ್ಕೆ ನಾಗಮಂಗಲ ಮೂಲದ ಚಂದ್ರುಗೆ ಮಣೆ ಹಾಕಲಾಗಿದೆ.

ಶಾಸಕರ ಬೆಂಬಲ, ಕೆಲವರ ಅಸಮಾಧಾನ: ಸ್ಟಾರ್ ಚಂದ್ರು ಅಭ್ಯರ್ಥಿ ಎಂದು ಅಂತಿಮವಾಗಿ ಮೂರು ತಿಂಗಳೇ ಕಳೆದಿದೆಯಾದರೂ ಅವರಿಗೆ ಬಹುತೇಕ ಜಿಲ್ಲೆಯ ಎಲ್ಲಾ ಶಾಸಕರ ಬೆಂಬಲ ಇದೆ. ಆದರೆ ಕೆಲ ಮುಖಂಡರು ಮಾತ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿದ್ದ ಡಾ.ರವೀಂದ್ರ ಬಹಿರಂಗವಾಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇದನ್ನು ಹೊರತುಪಡಿಸಿದರೆ ಉಳಿದಂತೆ ಯಾವ ಸಮಸ್ಯೆಯೂ ಇಲ್ಲವಾದರೂ ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಿಕೊಂಡು ಹೋಗಬೇಕಿದೆ.

ದಶಕದ ಬಳಿಕ ಕೈ ಅಭ್ಯರ್ಥಿ ಕಣಕ್ಕೆ: 2013ರಲ್ಲಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ ರಮ್ಯಾ ನಂತರ ಮಂಡ್ಯ ಲೋಕಸಭಾ ಕ್ಷೇತ್ರದ 2018ರ ಉಪಚುನಾವಣೆ ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ಕೈ ಅಭ್ಯರ್ಥಿಗಳೇ ಕಣಕ್ಕಿಳಿದಿರಲಿಲ್ಲ. ಎರಡು ಚುನಾವಣೆಯಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿಯಾಗಿ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದ ಕಾರಣಕ್ಕೆ ಕೈ ಅಭ್ಯರ್ಥಿಗಳು ಸ್ಪರ್ಧಿಸಿರಲಿಲ್ಲ. ಇದೀಗ 10 ವರ್ಷಗಳ ಬಳಿಕ ಮಂಡ್ಯ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಕಣಕ್ಕಿಳಿಯುತ್ತಿದ್ದಾರೆ.

ಕೆ.ಆರ್.ಪೇಟೆ ತಾಲೂಕು ಕರವೇಗೆ ಶ್ರೀನಿವಾಸ್ ಅಧ್ಯಕ್ಷ

ಕೆಆರ್‌ಪೇಟೆ,ಮಾ.9–ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಅಗ್ರಹಾರಬಾಚಹಳ್ಳಿ ಟೆಂಪೋ ಶ್ರೀನಿವಾಸ್ ಆಯ್ಕೆಯಾಗಿದ್ದಾರೆ.

ಈ ಹಿಂದಿನ ತಾಲ್ಲೂಕು ಕರವೇ ಅಧ್ಯಕ್ಷರಾದ ಡಿ.ಎಸ್.ವೇಣು ಅವರು ಮಂಡ್ಯ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ಕರವೇ ರಾಜ್ಯಾಧ್ಯಕ್ಷರಾದ ಟಿ.ಎ.ನಾರಾಯಣಗೌಡರ ನಿರ್ದೇಶನದ ಮೇರೆಗೆ ಟೆಂಪೋ ಶ್ರೀನಿವಾಸ್ ಅವರನ್ನು ಕೆ.ಆರ್.ಪೇಟೆ ತಾಲ್ಲೂಕು ಘಟಕದ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿ ಜಿಲ್ಲಾಧ್ಯಕ್ಷರಾದ ಡಿ.ಎಸ್.ವೇಣು ಆದೇಶ ಹೊರಡಿಸಿದ್ದಾರೆ.

ಇಂದು ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಸ್ಮರಣಾರ್ಥ 5ನೇ ಕನ್ನಡ ಅಕ್ಷರ ಜಾತ್ರೆ

ಮಂಡ್ಯ: ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂಸ್, ಮಂಡ್ಯ ಆಶ್ರಯದಲ್ಲಿ ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಸ್ಮರಣಾರ್ಥ 5ನೇ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಮಾರ್ಚ್ 10ರಂದು ಬೆಳಗ್ಗೆ 10.30, ಗಂಟೆಗೆ ಮಂಡ್ಯ ನಗರದ ಗಾಂಧಿಭವನದಲ್ಲಿ ನಡೆಯಲಿದೆ. 5ನೇ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷರಾಗಿ ಕೆ.ಆರ್. ಪೇಟೆಯ ಸಾಹಿತಿಗಳು, ಶಿಕ್ಷಕರಾದ ಡಾ. ಬಿ.ಸಿ. ವಿಜಯಕುಮಾರ್ ಬಲ್ಲೇನಹಳ್ಳಿ ಆಯ್ಕೆ ಮಾಡಲಾಗಿದೆ ಎಂದು ಡಾ. ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷರಾದ ಎಸ್. ಕೃಷ್ಣ ಸ್ವರ್ಣಸಂದ್ರ ತಿಳಿಸಿದ್ದಾರೆ.

ಮೇಲುಕೋಟೆಯಲ್ಲಿ ಬ್ರಹ್ಮೋತ್ಸವದ ಅಂಗವಾಗಿ ಸ್ವಚ್ಛತಾ ಅಭಿಯಾನ

ಮೇಲುಕೋಟೆ: ಭಕ್ತರು ಹಾಗೂ ನಾಗರೀಕರು ಮೇಲುಕೋಟೆಯ ನಿರಂತರ ಸ್ವಚ್ಛತೆ ಕಾಪಾಡಲು ಸಹಕಾರ ನೀಡಬೇಕು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಮನವಿ ಮಾಡಿದರು. ಅವರು ಮೇಲುಕೋಟೆಯಲ್ಲಿ ವೈರಮುಡಿ ಬ್ರಹ್ಮೋತ್ಸವ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಕರ್ನಾಟಕದ ಪವಿತ್ರ ಕ್ಷೇತ್ರವಾದ ಮೇಲುಕೋಟೆಯಲ್ಲಿ ಸ್ವಯಂಸೇವಾ ತಂಡಗಳು ಹಾಗೂ ಭಕ್ತರು ಮುಂದೆ ಬಂದು ಪ್ರತಿ ಶನಿವಾರ ಅಥವಾ ಭಾನುವಾರಗಳಂದು ಸ್ವಚ್ಛತಾ ಶಿಬಿರಗಳನ್ನು ಆಯೋಜಿಸಬೇಕು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಸಹ ತಿಂಗಳಿಗೊಂದು ದಿನ ಸ್ಮಾರಕಗಳ ಬಳಿ ಸ್ವಚ್ಛತಾಕಾರ್ಯ ಹಮ್ಮಿಕೊಳ್ಳಬೇಕು ಎಂದ ಶಾಸಕರು ಭಕ್ತರು ಮತ್ತು ನಾಗರೀಕರು ಮೇಲುಕೋಟೆಯಲ್ಲಿ ನಿಷೇಧಿತ ಪ್ಲಾಸ್ಟಿಕ್ ಕವರ್ ಬಳಕೆಮಾಡಬಾರದು. ಗ್ರಾಮ ಪಂಚಾಯಿತಿ ವತಿಯಿಂದ ಸ್ವಚ್ಛತೆ ಕಾಪಾಡುವ ಸಂಬಂಧ ಅಲ್ಲಲ್ಲಿ ನಾಮಫಲಕ ಹಾಕಬೇಕು.

ಬೆಳಿಗ್ಗೆ 8ಗಂಟೆಯ ವೇಳೆಗೆ ನೂರಕ್ಕೂ ಹೆಚ್ಚು ರೈತಸಂಘದ ಕಾರ್ಯಕರ್ತರೊಂದಿಗೆ ಮೇಲುಕೋಟೆಗೆ ಆಗಮಿಸಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚೆಲುವನಾರಾಯಣಸ್ವಾಮಿ ದೇವಾಲಯದ ಆವರಣ, ರಾಯಗೋಪುರ, ಅಕ್ಕತಂಗಿಕೊಳ ಆವರಣ ಕಲ್ಯಾಣಿ ಆವರಣಗಳಲ್ಲಿ ಗಿಡಗಂಟೆಗಳನ್ನು ಕಿತ್ತು, ಅಲ್ಲಲ್ಲಿ ಬಳಸಿ ಎಸೆದಿದ್ದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸ್ವಚ್ಛಗೊಳಿಸಿದರು ಮೇಲುಕೋಟೆಯಲ್ಲಿ ನಿರಂತರವಾಗಿ ಶುಚಿತ್ವಕಾಪಾಡಲು ಗ್ರಾಮ ಪಂಚಾಯಿತಿ ಮತ್ತು ದೇವಾಲಯದ ಆಡಳಿತ ಶ್ರಮಿಸಬೇಕು ಪೌರಕಾರ್ಮಿಕರನ್ನು ನಿಯೋಜಿಸಬೇಕು ಎಂದೂ ಸೂಚನೆ ನೀಡಿದರು.



ಮೇಲುಕೋಟೆಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ರೈತಸಂಘದ ಕಾರ್ಯಕರ್ತರೊಂದಿಗೆ ಸೇರಿ ಸ್ವಚ್ಛತಾ ಕೈಂಕರ್ಯ ನಡೆಸಿದರು.

ಸ್ವಚ್ಛತಾ ಆಂದೋಲನದಲ್ಲಿ ರೈತಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ, ಹಿರಿಯ ಮುಖಂಡ ಗೋವಿಂದೇಗೌಡ, ಪಾಂಡವಪುರ ತಾಲ್ಲೂಕು ಅಧ್ಯಕ್ಷ ಕೆನ್ನಾಳು ನಾಗರಾಜು ರೈತಸಂಘದ ಮುಖಂಡರಾದ ಚಿಕ್ಕಾಡೆ ಹರೀಶ್, ಜೋಗಿರಾಜೇ ಗೌಡ, ಕನಗೋನಹಳ್ಳಿ ಪರಮೇಶಗೌಡ, ಲೋಕೇಶ್, ಮಹೇಶ್ ಸೋಮು ಮೇಲು ಕೋಟೆ ದಿಲೀಪ್, ಸುಬ್ಬಣ್ಣ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಾಜೇಶ್ವರ್, ಗ್ರಾಮ ಆಡಳಿತಾಧಿಕಾರಿ ರಮೇಶ್ ಭಾಗವಹಿಸಿದ್ದರು ಸ್ವಚ್ಛತಾ ವಾಹನಗಳು ಆಗಮಿಸಿದ್ದವು

ವೈರಮುಡಿ ಜಾತ್ರಾಮಹೋತ್ಸವಕ್ಕೆ ಬರುವ ಭಕ್ತರು ನಿಷೇಧಿತ ಪ್ಲಾಸ್ಟಿಕ್ ಕವರ್‌ಗಳನ್ನು ಬಳಸಬಾರದು, ಬಳಸಿದ ಲೋಟ ತಟ್ಟೆ, ಇತರ ತ್ಯಾಜ್ಯಗಳನ್ನು ಕಸದಬುಟ್ಟಿಯಲ್ಲೇ ಹಾಕಬೇಕು, ಅಲ್ಲಲ್ಲಿ ಸ್ಥಾಪಿಸಿದ ಶೌಚಾಲಯಗಳನ್ನು ಬಳಸಿಕೊಳ್ಳಬೇಕು ಮೇಲುಕೋಟೆಯ ಸ್ವಚ್ಛತೆಗೆ ಸಹಕಾರ ನೀಡಬೇಕು. –ದರ್ಶನ್ ಪುಟ್ಟಣ್ಣಯ್ಯ, ಶಾಸಕ

ಮಾ.12ಕ್ಕೆ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ

ಜಿಲ್ಲಾ ಉಸ್ತುವಾರಿ ಸಚಿವರಿಂದ ಸಿದ್ಧತೆ ಪರಿಶೀಲನೆ



ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಮಾ.12ರಂದು ಚಾಮರಾಜನಗರದಲ್ಲಿ ನಡೆಯುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸಿದ್ಧತೆಗಳನ್ನು ಪರಿಶೀಲಿಸಿದರು.

ಚಾಮರಾಜನಗರ, ಮಾ.9– ಮುಖ್ಯಮಂತ್ರಿಗಳ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಮಾ.12 ರಂದು ನಗರದಲ್ಲಿ ನಡೆಯುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರು ಇಂದು ನಗರದಲ್ಲಿ ಸಿದ್ಧತೆಗಳನ್ನು ಪರಿಶೀಲಿಸಿದರು.

ಸಮಾವೇಶ ನಡೆಯುವ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಹಾಗೂ ಇತರೆ ಅಧಿಕಾರಿಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡಿ ಸಿದ್ಧತೆಗಳನ್ನು ವೀಕ್ಷಿಸಿದರು. ಕ್ರೀಡಾಂಗಣದಲ್ಲಿ ಹೆಚ್ಚು ಜನರು ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ, ವೇದಿಕೆ, ಕುಡಿಯುವ ನೀರು ಇನ್ನಿತರ ಅಗತ್ಯ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಳಿಕ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶ ಸಂಬಂಧ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಮಾವೇಶಕ್ಕಾಗಿ ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಮಾಹಿತಿ ಪಡೆದು ಅಗತ್ಯ ಸಲಹೆ, ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿ, ಸಮಾವೇಶ ಯಶಸ್ವಿಗೊಳಿಸಲು ವೇದಿಕೆ, ಶಿಷ್ಟಾಚಾರ, ಆಹಾರ, ಸ್ವಚ್ಛತೆ, ಭದ್ರತೆ, ಆರೋಗ್ಯ, ಪ್ರಚಾರ, ಬಸ್‌ಗಳ ಸಮಿತಿಗಳನ್ನು ರಚಿಸಿ ಅಧಿಕಾರಿಗಳಿಗೆ ಜವಾಬ್ದಾರಿಗಳನ್ನು ವಹಿಸಲಾಗಿದೆ ಎಂದರು.

ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮಿ, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್ ಕುಮಾರ್, ಆಹಾರ ಇಲಾಖೆ ಜಂಟಿ ನಿರ್ದೇಶಕಿ ಸವಿತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಮಂಜುನಾಥ್, ಜಿಲ್ಲಾ ಉದ್ಯೋಗಾಧಿಕಾರಿ ಮಹಮ್ಮದ್ ಅಕ್ಬರ್ ಗ್ಯಾರಂಟಿ ಯೋಜನೆಗಳ ಪ್ರಗತಿ ಬಗ್ಗೆ ಸಚಿವರಿಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾ ಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಎಂ. ಶಿವಮೂರ್ತಿ, ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಸರ್ಕಾರದ ಗ್ಯಾರಂಟಿ ಯೋಜನೆಗಳ ವಸ್ತು ಪ್ರದರ್ಶನಕ್ಕೆ ಶಾಸಕ ಪುಟ್ಟರಂಗಶೆಟ್ಟಿ ಚಾಲನೆ.

ಇಂದು ಅಂತರ ರಾಜ್ಯ ಅರಣ್ಯ ಸಚಿವರ ಮಹತ್ವದ ಸಭೆ

ಚಾಮರಾಜನಗರ, ಮಾ.9– ದಕ್ಷಿಣ ಭಾರತದಲ್ಲಿ ವನ್ಯಜೀವಿಗಳ ಸಂಖ್ಯೆ ಹೆಚ್ಚಾದಂತೆ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚುತ್ತಿದ್ದು, ಸಂಘಟಿತವಾಗಿ ಇದನ್ನು ನಿಯಂತ್ರಿಸಲು 3 ದಕ್ಷಿಣ ರಾಜ್ಯಗಳ ನಡುವೆ ಮಾ.10ರಂದು ಬಂಡೀಪುರದಲ್ಲಿ ಸಮನ್ವಯ ಸಮಿತಿ ಸಭೆ ನಡೆಯಲಿದೆ.

ಕರ್ನಾಟಕ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಮತ್ತು ಕೇರಳದ ಸಹವರ್ತಿ ಎ.ಕೆ. ಶಶೀಂದ್ರನ್ ಈ ಸಭೆಯಲ್ಲಿ ಭಾಗಿಯಾಗಲಿದ್ದು, ತಮಿಳುನಾಡು, ಕರ್ನಾಟಕ ಮತ್ತು ಕೇರಳ ರಾಜ್ಯಗಳ ಉನ್ನತ ಅರಣ್ಯಾಧಿಕಾರಿಗಳು ಪಾಲ್ಗೊಳ್ಳುತ್ತಿದ್ದಾರೆ.

ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಈ ಮೊದಲ ಅಂತರ ರಾಜ್ಯ ಸಮನ್ವಯ ಸಮಿತಿ ಸಭೆ ಇದಾಗಿದ್ದು, 3 ರಾಜ್ಯಗಳ ನಡುವೆ ಅರಣ್ಯ ಸಂರಕ್ಷಣೆ, ಕಳ್ಳಬೇಟೆ, ಅರಣ್ಯ ನಾಶ, ವನ್ಯಜೀವಿಗಳ ಸಂಚಾರ ಕುರಿತಂತೆ ಮಾಹಿತಿ ವಿನಿಮಯ, ಜ್ಞಾನ ಮತ್ತು ತಂತ್ರಜ್ಞಾನದ ವಿನಿಮಯಕ್ಕೆ ಹಾಗೂ ನಿರಂತರ ಸಮನ್ವಯಕ್ಕೆ ನಾಂದಿ ಹಾಡಲಿದೆ ಎಂದು ನಿರೀಕ್ಷಿಸಲಾಗಿದೆ.

ಕಳೆದ ನವೆಂಬರ್‌ನಲ್ಲಿ ಕರ್ನಾಟಕದ ಹಾಸನ ಜಿಲ್ಲೆ ಬೇಲೂರು ಬಳಿ ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ ಬಂಡೀಪುರದಲ್ಲಿ ಬಿಡಲಾಗಿದ್ದ ಮಖ್ನಾ ಎಂಬ ದಂತರಹಿತ ಗಂಡಾನೆ ಕಳೆದ ತಿಂಗಳು ವೈನಾಡು ಪ್ರದೇಶದಲ್ಲಿ ವ್ಯಕ್ತಿಯೊಬ್ಬರ ಸಾವಿಗೆ ಕಾರಣವಾಗಿದ್ದ ಹಿನ್ನೆಲೆಯಲ್ಲಿ ಕರ್ನಾಟಕ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅಂತರ ರಾಜ್ಯ ಅರಣ್ಯ ಸಚಿವರ ಸಭೆ ನಡೆಸಿ ಪರಿಹಾರೋಪಾಯಗಳ ಕುರಿತಂತೆ ಮತ್ತು ಈ ನಿಟ್ಟಿನಲ್ಲಿ ಸಮನ್ವಯ ಸಾಧಿಸಲು ಚರ್ಚಿಸುವುದಾಗಿ ಪ್ರಕಟಿಸಿದ್ದರು.

ಈಶ್ವರ ಖಂಡ್ರೆ ಅವರ ಪ್ರಯತ್ನದಿಂದಾಗಿ ಸಚಿವರ ಮಟ್ಟದ ಈ ಸಭೆ ನಡೆಯುತ್ತಿದ್ದು, ಇದು ಅಂತರ ರಾಜ್ಯ ಸಮನ್ವಯ ಮತ್ತು ವನ್ಯಜೀವಿ–ಮಾನವ ಸಂಘರ್ಷ ತಗ್ಗಿಸುವಲ್ಲಿ ಮಹತ್ವದ ಮೈಲಿಗಲ್ಲಾಗಲಿದೆ ಎಂದು ಹೇಳಲಾಗುತ್ತಿದೆ.

ಕರ್ನಾಟಕದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಅರಣ್ಯ ಪಡೆ ಮುಖ್ಯಸ್ಥರು ಹಾಗೂ ಪಿಸಿಸಿಎಫ್ ಬಿ.ಕೆ.ದೀಕ್ಷಿತ್, ಕೇರಳ ಅರಣ್ಯ ಪಡೆ ಮುಖ್ಯಸ್ಥರು ಹಾಗೂ ಪಿಸಿಸಿಎಫ್ ಗಂಗಾ ಸಿಂಗ್, ಕರ್ನಾಟಕದ ಮುಖ್ಯ ವನ್ಯಜೀವಿ ಪರಿಪಾಲಕರಾದ ಸುಭಾಷ್ ಮಳಖೇಡೆ, ಕೇರಳದ ಮುಖ್ಯ ವನ್ಯಜೀವಿ ಪರಿಪಾಲಕರಾದ ಜಯ ಪ್ರಸಾದ್, 3 ರಾಜ್ಯಗಳ ಎಲ್ಲಾ ಎಪಿಸಿಸಿಎಫ್‌ಗಳು, ಸಿಸಿಎಫ್‌ಗಳು, ಸಿಎಫ್‌ಗಳು ಮತ್ತು ಡಿಸಿಎಫ್‌ಗಳು ಮತ್ತು ಇತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.



ಗುಂಡ್ಲುಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನೂತನ ಅಧ್ಯಕ್ಷರಾಗಿ ಎಂ.ಎನ್. ಬಸವರಾಜಪ್ಪ, ಉಪಾಧ್ಯಕ್ಷರಾಗಿ ರಾಜು ಅವರನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಭಿನಂದಿಸಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ನಿರ್ದೇಶಕರಾದ ಪಿ.ಮಹದೇವಪ್ಪ, ಆರ್.ಎಸ್.ನಾಗರಾಜು, ಮುಖಂಡರಾದ ಹೆಚ್.ಎನ್.ಬಸವರಾಜು, ಎಚ್.ಬಿ.ನಾಗರಾಜು, ಶಿವಮಾದಪ್ಪ, ದೀಪು, ಲೋಕೇಶ್ ಹಾಗೂ ಇತರರಿದ್ದರು.

ಸರ್ಕಾರದ ಗ್ಯಾರಂಟಿ ಯೋಜನೆಗಳ ವಸ್ತುಪ್ರದರ್ಶನಕ್ಕೆ ಚಾಲನೆ

ಚಾಮರಾಜನಗರ, ಮಾ.9– ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಸರ್ಕಾರದ ಗ್ಯಾರಂಟಿ ಹಾಗೂ ಇನ್ನಿತರ ಯೋಜನೆಗಳ ಕುರಿತು ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಇಂದಿನಿಂದ 3 ದಿನಗಳ ಕಾಲ ಆಯೋಜಿಸಿರುವ ವಸ್ತು ಪ್ರದರ್ಶನಕ್ಕೆ ಚಾಲನೆ ದೊರೆತಿದೆ.

ಮಾ.8 ರಿಂದ 10ರವರೆಗೆ ನಡೆಯುವ ವಸ್ತು ಪ್ರದರ್ಶನವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು. ಜಿಲ್ಲಾಧಿಕಾರಿ ಶಿಲ್ಪನಾಗ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಸ್ತುಪ್ರದರ್ಶನ ಯಶಸ್ವಿಯಾಗಿ ನಡೆಯಲೆಂದು ಹಾರೈಸಿದರು.

ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ವಸ್ತು ಪ್ರದರ್ಶನದಲ್ಲಿ ಅಳವಡಿಸಿರುವ ಸರ್ಕಾರದ 5 ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೂ ಇನ್ನಿತರ ಕಾರ್ಯಕ್ರಮಗಳ ಪ್ರಚಾರ ಮಾಹಿತಿಗಳನ್ನು ವೀಕ್ಷಿಸಿದರು. ಸರ್ಕಾರದ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡುವಲ್ಲಿ ವಸ್ತು ಪ್ರದರ್ಶನ ಚೆನ್ನಾಗಿ ಮೂಡಿ ಬಂದಿದೆ ಎಂದು ಶಾಸಕರು ಹಾಗೂ ಜಿಲ್ಲಾಧಿಕಾರಿ ಶಿಲ್ಪನಾಗ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್ ಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ್ ಇನ್ನಿತರ ಅಧಿಕಾರಿಗಳು ಇದ್ದರು.

ಮೂರನೇ ಪುಟದಿಂದ

ನನಗೆ ಟಿಕೆಟ್ ತಪ್ಪಿಸುತ್ತಾರೆ...!!

ಆಶೀರ್ವಾದದ ಮುಂದೆ ಬೇರೆ ಯಾವುದೂ ನಡೆಯುವುದಿಲ್ಲ. ನಾನು ಚಾಮುಂಡೇಶ್ವರಿ ತಾಯಿಯ ಪರಮ ಭಕ್ತ. ತಾಯಿ ನನ್ನನ್ನು ಕೈಬಿಡುವುದಿಲ್ಲ ಎಂಬ ವಿಶ್ವಾಸವಿದೆ. ಮೈಸೂರು ಹುಲಿಗಳಿಗೆ ಫೇಮಸ್ ಇರಬಹುದು. ಆದರೆ ತಾಯಿ ಚಾಮುಂಡೇಶ್ವರಿ ಏರಿರುವುದು ಸಿಂಹವನ್ನು. ಈ ತಾಯಿ ತನ್ನ ವಾಹನವನ್ನು ಕೈಬಿಡುವುದಿಲ್ಲ ಎಂದರು.

ರಾಜಕಾರಣಕ್ಕೆ ಯಾವುದೇ ಅರ್ಹತೆ ಬೇಕಾಗಿಲ್ಲ. ರಾಜಕಾರಣದಲ್ಲಿ ಕಳ್ಳರು, ಸುಳ್ಳರು, ಭ್ರಷ್ಟರು, ಭಟ್ಟಂಗಿಗಳು, ಚಾಡಿಕೋರರು, ಲಫಂಗಗಳು ಎಲ್ಲರೂ ಇದ್ದಾರೆ. ಕೇವಲ ವಾಚ್‌ಮನ್ ಆಗಬೇಕಾದರೂ ನಿಯತ್ತಾಗಿ ದುಡಿಯಬೇಕು. ಕೈಯ್ಯಲ್ಲಿ ಬಂದೂಕು ಅಥವಾ ಲಾಠಿ ಹಿಡಿದು ಮೈಯೆಲ್ಲಾ ಕಣ್ಣಾಗಿ ಕಾಯಬೇಕು. ಆದರೆ ರಾಜಕಾರಣದಲ್ಲಿ ಯಾವುದೇ ಅರ್ಹತೆ ಇಲ್ಲ. ಇಲ್ಲಿ ತಿಂದುಂಡು ತಿರುಗುವವರಿಗೂ ಉಳಿಗಾಲವಿರುತ್ತದೆ ಎಂದರು. ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಗಲು ಹಾಗೂ ನಮ್ಮ ಭವಿಷ್ಯ ನಿರ್ಧಾರ ಮಾಡುವುದು ಜನ. ಜನರು ಖುಷಿಯಾಗಿದ್ದಾರೆ ಎಂದರೆ ಹಿರಿಯ ನಾಯಕರೂ ಕೂಡ ನಮಗೆ ಆಶೀರ್ವಾದ ಮಾಡುತ್ತಾರೆ. ರಾಜ್ಯದ 28 ಸಂಸದರ ಪೈಕಿ ತೇಜಸ್ವಿ ಸೂರ್ಯ ಮೊದಲ ಬಾರಿಗೆ ಸಂಸದರಾಗಿರುವವರು. ನಾನು ಎರಡನೇ ಬಾರಿ ಸಂಸದನಾಗಿದ್ದರೆ, ಉಳಿದ ಎಲ್ಲರೂ ರಾಜಕಾರಣದಲ್ಲಿ ನನಗಿಂತ ಹಿರಿಯರು. ಮೈಸೂರು ಭಾಗದಲ್ಲಿ ಸಂಸದನಾಗಿ ಅಭಿವೃದ್ಧಿ ಹಾಗೂ ಹಿಂದುತ್ವ ವಿಚಾರದಲ್ಲಿ ಇಂತಹ ಕೆಲಸವನ್ನು ನಾನು ಮಾಡಿಲ್ಲ ಎಂದು ನನಗೆ ಟಿಕೆಟ್ ತಪ್ಪಿಸಲು ಪ್ರಯತ್ನಿಸುವವರು ತೋರಿಸಲಿ ಎಂದು ಸವಾಲೆಸೆದರು. ನನ್ನನ್ನು ಕಾಯಲು ತಾಯಿ ಚಾಮುಂಡೇಶ್ವರಿ ಇದ್ದಾಳೆ. ನನ್ನ ಕೆಲಸವನ್ನು ನೋಡಿರುವ ಜನರಿದ್ದಾರೆ. ನನ್ನ ಬೆನ್ನಿಗೆ ಕಾರ್ಯಕರ್ತರಿದ್ದಾರೆ. ಅವರ ಶ್ರೀರಕ್ಷೆ ನನಗೆ ಸಾಕು ಎಂದು ಪ್ರತಾಪ್‌ಸಿಂಹ ಹೇಳಿದರು.

ಬಿಜೆಪಿ ಟಿಕೆಟ್ ಅನುಮಾನ?

ಪೂರಕ ವಾತಾವರಣ ಕಲ್ಪಿಸಲಿದೆ. ಲೋಕಸಭಾ ಚುನಾವಣೆಗೂ ಮುಂಚೆಯೇ ಬಿಜೆಪಿ ಹೈಕಮಾಂಡ್ ಚುನಾವಣಾ ಪೂರ್ವ ಸಮೀಕ್ಷೆ ನಡೆಸಿತ್ತು. ಈ ಸಮೀಕ್ಷೆಯ ಪ್ರಕಾರ ಕಳೆದ ಹತ್ತು ವರ್ಷದ ಅವಧಿಯಲ್ಲಿ ಪ್ರತಾಪ್ ಸಿಂಹ ಮಾಡಿರುವ ಜನಪರ ಯೋಜನೆಗಳು ಅವರಿಗೆ ಭಾರಿ ಜನಮನ್ನಣೆ ತಂದು ಕೊಟ್ಟಿರುವುದು ಸ್ಪಷ್ಟವಾಗಿತ್ತು. ನಂತರ ಬಿಜೆಪಿ ಹೈಕಮಾಂಡ್ ನಡೆಸಿದ ಆಂತರಿಕ ಸಮೀಕ್ಷೆಯಲ್ಲಿ ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಹಾಗೂ ಮಾಜಿ ಶಾಸಕ ಅಪ್ಪಚ್ಚು ರಂಜನ್ ಅವರನ್ನು ಪರಿಗಣಿಸಲಾಗಿತ್ತು. ಈ ಸಮೀಕ್ಷೆಯಲ್ಲಿ ಕೂಡ ಪ್ರತಾಪ್ ಸಿಂಹ ತಮ್ಮ ಜನಪರ ಕೆಲಸಗಳಿಂದ ತಮ್ಮ ಪ್ರತಿಸ್ಪರ್ಧಿಗಳಿಗಿಂತ ಅತೀ ಹೆಚ್ಚು ಮನ್ನಣೆ ಗಳಿಸಿರುವುದು ಕಂಡು ಬಂದಿತ್ತು. ಈ ಮಧ್ಯೆ ಮಾ.7ರಂದು ನವದೆಹಲಿಯಲ್ಲಿ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಭಾಗಿಯಾಗಿದ್ದ ರಾಜ್ಯ ಬಿಜೆಪಿ ನಾಯಕರು ಮೈಸೂರು-ಕೊಡಗು ಸೇರಿದಂತೆ ಕರ್ನಾಟಕದ ಇತರೆ ಕ್ಷೇತ್ರಗಳಿಗೂ ಪಕ್ಷದ ಅಭ್ಯರ್ಥಿಗಳ ಪಟ್ಟಿಯನ್ನು ಕೇಂದ್ರ ಸಂಸದೀಯ ಮಂಡಳಿಗೆ ಶಿಫಾರಸು ಮಾಡಿದ್ದರು. ಆದರೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರಕ್ಕೆ ಪ್ರತಾಪ್‌ಸಿಂಹ ಕೈಬಿಟ್ಟು ಹಿಂದುಳಿದ ವರ್ಗದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಪ್ರಸ್ತಾವನೆ ಸಲ್ಲಿಸಿದ್ದರು. ಪ್ರತಾಪ್‌ಸಿಂಹ ಒಕ್ಕಲಿಗ ನಾಯಕನಾಗಿರುವ ಕಾರಣ ಅವರ ಬದಲಿಗೆ ಹಿಂದುಳಿದ ವರ್ಗದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಪ್ರಸ್ತಾವನೆ ಸಲ್ಲಿಸುವ ಬೆಳವಣಿಗೆಗೆ ರಾಜ್ಯ ಬಿಜೆಪಿ ನಾಯಕರು ಕಾರಣರಾದರು ಎಂದು ತಿಳಿದು ಬಂದಿದೆ. ಇಂತಹ ರಾಜಕೀಯ ಬೆಳವಣಿಗೆಯಿಂದ ಸಿದ್ದರಾಮಯ್ಯ ಅವರ ಶಿಫಾರಸ್ಸಿನಿಂದ ಕಣಕ್ಕಿಳಿಯುವ ಕಾಂಗ್ರೆಸ್ ಅಭ್ಯರ್ಥಿಗೆ ವರದಾನವಾಗಲಿದೆ. ರಾಜ್ಯ ಬಿಜೆಪಿ ನಾಯಕರ ಈ ರಾಜಕೀಯ ತಂತ್ರಗಾರಿಕೆ ಕಾಂಗ್ರೆಸ್ ಜಯ ಗಳಿಸಲು ಹೇಳಿ ಮಾಡಿಸಿದಂತಿದೆ. ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಪ್ರತಾಪ್‌ಸಿಂಹ, ನಾನು ಚುನಾವಣಾ ತಯಾರಿಯಲ್ಲಿದ್ದೇನೆ. ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮಾಜಿ ಶಾಸಕ ವಾಸು ಇನ್ನಿಲ್ಲ

ಬಳಿಯ ಕಾಂಗ್ರೆಸ್ ಕಚೇರಿಯಲ್ಲಿ ಪಾರ್ಥಿವ ಶರೀರ ಇರಿಸಿ, ಗೌರವ ಸಲ್ಲಿಸಿದ ಬಳಿಕ ಮಧ್ಯಾಹ್ನ 3 ಗಂಟೆಗೆ ಬನ್ನೂರು ರಸ್ತೆಯಲ್ಲಿರುವ ವಿದ್ಯಾವಿಕಾಸ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (VVIET) ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾ.11 ಪುತ್ರನ ವಿವಾಹವಿತ್ತು: ವಾಸು ಅವರ ಹಿರಿಯ ಮಗ ಕವೀಶ್ ಗೌಡ ಮತ್ತು ಕಿರಿಯ ಮಗ ರಿತೇಶ್ ಗೌಡರ ವಿವಾಹವಾಗಿದೆ. ಎರಡನೇ ಮಗ ಅವೀಶ್ ಗೌಡ ಅವರ ವಿವಾಹ ಸರಳ ರೀತಿಯಲ್ಲಿ ಮಾರ್ಚ್ 11ರಂದು ನಡೆಸಲು ನಿಶ್ಚಯಿಸಲಾಗಿತ್ತು ಅಷ್ಟರಲ್ಲೇ ಇಂದು ಬೆಳಿಗ್ಗೆ ವಾಸು ಅವರು ಇಹಲೋಕ ತ್ಯಜಿಸಿದ್ದಾರೆ.

ವಿವಿಇಟಿ ಸಂಸ್ಥಾಪಕ: 20 ವರ್ಷಗಳ ಹಿಂದೆ ಮೈಸೂರಿನ ಬನ್ನೂರು ರಸ್ತೆಯಲ್ಲಿ ವಿದ್ಯಾವಿಕಾಸ ಶಿಕ್ಷಣ ಟ್ರಸ್ಟ್ (ವಿವಿಇಟಿ) ಸ್ಥಾಪಿಸಿದ ವಾಸು ಅವರು ಸಂಸ್ಥೆಯ ಸಂಸ್ಥಾಪಕರಾಗಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಆರಂಭಿಸಿದ್ದರು. ಅದು ಈಗ ರಾಜ್ಯದ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಒಂದಾಗಿದೆ. ತಮ್ಮ ಟ್ರಸ್ಟ್ ಅಡಿಯಲ್ಲಿ ಹಲವು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದ ವಾಸು ಅವರು ಶಿಕ್ಷಣ ಕ್ಷೇತ್ರದ ಜೊತೆ ಜೊತೆಗೇ 25 ವರ್ಷಗಳ ಹಿಂದೆಯೇ ಪತ್ರಿಕೋದ್ಯಮಕ್ಕೂ ಕಾಲಿರಿಸಿದ್ದರು. 'ದಿ ಮೈಸೂರು ಮೇಲ್' (ಈಗ ಪ್ರಕಟವಾಗುತ್ತಿಲ್ಲ) ಇಂಗ್ಲಿಷ್ ಸಂಜೆ ಪತ್ರಿಕೆ ಮತ್ತು 'ಕನ್ನಡಿಗರ ಪ್ರಜಾನುಡಿ' ಬೆಳಗಿನ ಕನ್ನಡ ದಿನಪತ್ರಿಕೆಯನ್ನು ವಾಸು ಮುನ್ನಡೆಸುತ್ತಿದ್ದರು.

ರಾಜಕೀಯ ಪ್ರವೇಶ: ಮೂಲತಃ ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು, ಅಗಟಹಳ್ಳಿ ಗ್ರಾಮದವರಾದ ವಾಸು ಅವರು 55 ವರ್ಷಗಳ ಹಿಂದೆಯೇ ಮೈಸೂರಿಗೆ ಬಂದು ನೆಲೆ ಕಂಡುಕೊಂಡಿದ್ದರು. ಐದು ದಶಕದ ಹಿಂದೆಯೇ ರಾಜಕೀಯ ಪ್ರವೇಶಿಸಿದ್ದರು. ಮೊದಲ ಭಾರಿ ಕಾಂಗ್ರೆಸ್‌ನಿಂದ ಟಿಕೆಟ್ ಪಡೆದು ಮೈಸೂರು ನಗರಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ವಾಸು ಅವರು, 1989-90ರಲ್ಲಿ ಮೇಯರ್ ಆಗಿದ್ದರು. ನಂತರ ಅವರು 'ಮೇಯರ್ ವಾಸು' ಎಂದೇ ಮೈಸೂರಲ್ಲಿ ಹೆಸರುವಾಸಿಯಾಗಿದ್ದರು.

ಎಂ.ವೀರಪ್ಪ ಮೊಯ್ಲಿ ಆಪ್ತ: ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಕೇಂದ್ರ ಸಚಿವ ಡಾ.ಎಂ.ವೀರಪ್ಪ ಮೊಯ್ಲಿ ಅವರ ಆಪ್ತರಾಗಿದ್ದ ವಾಸು ಅವರು, ಮೊಯ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ 1992 ರಿಂದ 1994ರವರೆಗೆ ಅವರ ರಾಜಕೀಯ ಕಾರ್ಯದರ್ಶಿಯಾಗಿದ್ದರು. ಮೈಸೂರಿಗೆ ಭೇಟಿ ನೀಡಿದಾಗಲೆಲ್ಲ ಮೊಯ್ಲಿ ಅವರು ವಾಸು ಅವರ ನಿವಾಸಕ್ಕೆ ಭೇಟಿ ನೀಡಿ ಸತ್ಕಾರ ಸ್ವೀಕರಿಸಿ, ಕುಶಲೋಪರಿ ನಡೆಸುತ್ತಿದ್ದರು.

ವಿಧಾನ ಸಭೆಗೆ ಆಯ್ಕೆ: ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಬಯಸಿ 1999 ಮತ್ತು 2008ರಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಗಳಿಸಿದ್ದರಾದರೂ, ಈ ಎರಡೂ ಚುನಾವಣೆಗಳಲ್ಲಿ ಬಿಜೆಪಿಯ ಹೆಚ್‌ಎಸ್.ಶಂಕರಲಿಂಗೇಗೌಡರ ವಿರುದ್ಧ ಸೋತಿದ್ದ ವಾಸು, 2013ರಲ್ಲಿ ಅದೇ ಕ್ಷೇತ್ರದಿಂದ ಗೆದ್ದು ಶಾಸಕರಾಗಿದ್ದರು.

ಕ್ಷೇತ್ರದ ಅಭಿವೃದ್ಧಿ ಹರಿಕಾರ: ಶಾಸಕರಾಗಿದ್ದ ಅವಧಿಯಲ್ಲಿ ವಾಸು ಅವರು ಕೆಆರ್‌ಎಸ್ ರಸ್ತೆಯ ಜಯದೇವ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಜಿಲ್ಲಾ ಆಸ್ಪತ್ರೆ, ಕೃಷ್ಣಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಸರ್ಕಾರಿ ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಕಟ್ಟಡಗಳನ್ನು ನಿರ್ಮಿಸಿ ಇಡೀ ಕೆಆರ್‌ಎಸ್ ರಸ್ತೆಯನ್ನು ಹೆಲ್ತ್ ಹಬ್ ಆಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದರು.ಮೈಸೂರಿನ ಪಡುವಾರಹಳ್ಳಿ ಬಳಿ ವಾಲ್ಮೀಕ ರಸ್ತೆಯಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಹಾಗೂ ವಿದ್ಯಾರ್ಥಿನಿಲಯ ಕಟ್ಟಡವನ್ನು ವಾಸು ಅವರ ಅವಧಿಯಲ್ಲೇ ನಿರ್ಮಿಸಲಾಯಿತು. 2018ರಲ್ಲಿ ಬಿಜೆಪಿಯ ಎಲ್.ನಾಗೇಂದ್ರ ವಿರುದ್ಧ ಸ್ಪರ್ಧಿಸಿ ಪರಾಭವಗೊಂಡಿದ್ದರು. ಆದರೆ 2023ರಲ್ಲಿ ವಾಸು ಅವರಿಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದನ್ನು ಇಲ್ಲಿ ಸ್ಮರಿಸಬಹುದು.

ವಿವಿಧ ಕ್ಷೇತ್ರಗಳಲ್ಲಿ ಸೇವೆ: ಎಐಸಿಸಿ ಸದಸ್ಯರಾದ ವಾಸು ಅವರು, 1985ರಲ್ಲಿ ಮೈಸೂರು ನಗರ ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿ, 1987 ರಿಂದ 1989ರವರೆಗೆ ಪಾಲಿಕೆ ವಿರೋಧ ಪಕ್ಷದ ನಾಯಕರಾಗಿ, ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸಹಕಾರ ಫೆಡರೇಷನ್ ಅಧ್ಯಕ್ಷರಾಗಿ, ವಿಕ್ರಾಂತ್ ಟೈರ್ಸ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರಲ್ಲದೆ, 2007 ರಲ್ಲಿ ಮೈಸೂರಲ್ಲಿ ನಡೆದ 60ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಮೈಸೂರು ಅಥ್ಲೆಟಿಕ್ಸ್ ಅಸೋಸಿಯೇಷನ್ ಮೈಸೂರು ಕೈಗಾರಿಕಾ ಸಂಘದ ಅಧ್ಯಕ್ಷರಾಗಿ, ನವದೆಹಲಿಯ ನ್ಯಾಶನಲ್ ಕೋ-ಅಪರೇಟಿವ್ ಯೂನಿಯನ್ ಆಫ್ ಇಂಡಿಯಾ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದ ಅವರು, ಹಲವು ಸಂಘ-ಸಂಸ್ಥೆಗಳ ಮೂಲಕ ಕೈಗಾರಿಕೆ, ಕ್ರೀಡೆ, ಶಿಕ್ಷಣ, ಸಾಹಿತ್ಯ, ಆರೋಗ್ಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರು.

ರಾಜ್ಯಸಭೆಗೆ ಇನ್‌ಫೋಸಿಸ್ ಡಾ.ಸುಧಾಮೂರ್ತಿ

ಇದರಿಂದಾಗಿ ಕರ್ನಾಟಕದ ಇಬ್ಬರು ಗಣ್ಯರು ರಾಜ್ಯಸಭೆಗೆ ನಾಮನಿರ್ದೇಶನವಾದಂತಾಗಿದೆ. ಸುಧಾಮೂರ್ತಿ ಹಾವೇರಿ ಜಿಲ್ಲೆ ಶಿಗ್ಗಾಂವಿಯವರಾಗಿದ್ದು, ಇನ್‌ಫೋಸಿಸ್ ಸಂಸ್ಥಾಪಕರಲ್ಲಿ ಒಬ್ಬರಾದ ನಾರಾಯಣಮೂರ್ತಿ ಇವರ ಪತಿ. ಇವರ ಪುತ್ರಿ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರ ಪತ್ನಿ. ಸುಧಾಮೂರ್ತಿ ಇನ್‌ಫೋಸಿಸ್ ಫೌಂಡೇಷನ್ ಅಧ್ಯಕ್ಷರಾಗಿದ್ದಾಗ ಹಲವಾರು ಕ್ಷೇತ್ರಗಳಿಗೆ ದಾನ ನೀಡುವ ಮೂಲಕ ಕೊಡುಗೈ ದಾನಿ ಎಂದೇ ಹೆಸರುವಾಸಿಯಾಗಿದ್ದಾರೆ. ಶ್ರೀಮಂತರಾದರೂ ಸರಳತೆ ಮೂಲಕ ಎಲ್ಲಾ ವರ್ಗದ ಜನರ ಅಭಿಮಾನವನ್ನು ಗಳಿಸಿರುವ ಅವರು, ಸಾಹಿತ್ಯ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸಿದ್ದು 40 ಕೃತಿಗಳನ್ನು ರಚಿಸಿದ್ದಾರೆ.

ಸುಧಾಮೂರ್ತಿಯವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿರುವುದು ನನಗೆ ಅತ್ಯಂತ ಸಂತೋಷ ತಂದಿದೆ ಎಂದು ಪ್ರಧಾನಿ ಮೋದಿ 'ಎಕ್ಸ್'ನಲ್ಲಿ ಸಂತೋಷ ಹಂಚಿಕೊಂಡಿದ್ದಾರೆ. ಶಿಕ್ಷಣ, ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿರುವ ಸುಧಾಮೂರ್ತಿಯವರ ಉಪಸ್ಥಿತಿಯಿಂದ ರಾಜ್ಯಸಭೆಯಲ್ಲಿ ನಾರಿಶಕ್ತಿಗೆ ಬಲ ಬಂದಂತಾಗಿದೆ. ಇದು ನಮ್ಮ ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಮಹಿಳೆಯರ ಶಕ್ತಿ ಮತ್ತು ಸಾಮರ್ಥ್ಯಕ್ಕೆ ಉದಾಹರಣೆಯಾಗಿದೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ಗುರು ಪರಂಪರೆಯಲ್ಲಿ ಜಾತಿ ಸೂಚಕಗಳಿಲ್ಲ

ಕವಿ ಪ್ರೊ. ಹೆಚ್.ಎಸ್.ಶಿವಪ್ರಕಾಶ್ ಅಭಿಮತ

ಮೈಸೂರು, ಮಾ.9(ಎಂಟಿವೈ)- ಗುರುಪರಂಪರೆಯಲ್ಲಿ ಜಾತಿ ಸೂಚಕಗಳಿಲ್ಲದ ಕಾರಣದಿಂದ ಸಂತರು ಭಾರತದ ಶ್ರೇಷ್ಠ ಸಮನ್ವಯಕಾರರಾಗಿದ್ದರು ಎಂದು ಕವಿ ಪ್ರೊ.ಎಚ್.ಎಸ್. ಶಿವಪ್ರಕಾಶ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿ ಬಹುರೂಪಿ ನಾಟಕೋತ್ಸವದ ಅಂಗವಾಗಿ ಶನಿವಾರ ಆಯೋಜಿಸಿದ್ದ ವಚನ ಚಳವಳಿಯ ಸಮಕಾಲೀನ ವ್ಯಾಖ್ಯಾನ' ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕವಿ ಪ್ರೊ.ಎಚ್.ಎಸ್. ಶಿವಪ್ರಕಾಶ್ ಉದ್ಘಾಟಿಸಿದರು

ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿ ಬಹುರೂಪಿ ನಾಟಕೋತ್ಸವದ ಅಂಗವಾಗಿ ಶನಿವಾರ ಆಯೋಜಿಸಿದ್ದ 'ವಚನ ಚಳವಳಿಯ ಸಮಕಾಲೀನ ವ್ಯಾಖ್ಯಾನ' ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಹೊಸ ಹುಡುಕಾಟದ ನಿರಂತರತೆ ಇದೆ. ಇದರೊಂದಿಗೆ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿವೆ. ಭಾರತೀಯ ಸಂಸ್ಕೃತಿಯ ಮೂಲ ವೇದ, ಉಪನಿಷತ್‌ಗಳಲ್ಲಿ ಇಲ್ಲ. ಅದರ ಮೂಲ ಹುಡುಕುತ್ತಾ ಹೋದರೆ, 12ನೇ ಶತಮಾನಕ್ಕೆ ಕರೆದೊಯ್ಯುತ್ತದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ವಚನಕಾರ, ಕ್ರಾಂತಿಕಾರಿ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಗುರುತಿಸಿದೆ. ಇದಕ್ಕೆ ಮುಖ್ಯಮಂತ್ರಿ ಹಾಗೂ ಸರ್ಕಾರ ಅಭಿನಂದನಾರ್ಹರು ಎಂದರು.

ವಚನ ಸಾಹಿತ್ಯ ಏಕ ವ್ಯಕ್ತಿಯ ಸೃಜನವಲ್ಲ. ಅದು ಸಾಮೂಹಿಕ ಸೃಜನ. ಎಲ್ಲಾ ಜಾತಿಯವರು ಸೇರಿ ಮಾಡಿರುವ ಆವಿಷ್ಕಾರವಾಗಿದೆ. ಇಂತಹ ಸಂದರ್ಭದಲ್ಲಿ ಆಚಾರ್ಯ ಪರಂಪರೆಯಲ್ಲಿ ಜಾತೀಯತೆ ಕಾಣಬಹುದಾಗಿದೆ. ಇದರಿಂದ ಆಚಾರ್ಯ ಪರಂಪರೆಯಿಂದ ಹೊರ ಬಂದು, ಗುರುಪರಂಪರೆಯಲ್ಲಿ ತೊಡಗಿಸಿಕೊಳ್ಳಬೇಕು. ಗುರು ಪರಂಪರೆಯಲ್ಲಿ ಯಾವುದೇ ಜಾತಿ ಸೂಚಕಗಳಿಲ್ಲ. ಜಾತೀಯತೆಯನ್ನು ನಿರಾಕರಿಸುವ ಸಂಸ್ಕೃತಿಯೂ ಆಗಿದೆ. ಗುರುವೊಬ್ಬ ಬೇರೆ ಜಾತಿ, ಶಿಷ್ಯರು ಬೇರೆ ಜಾತಿ. ಈ ಕಾರಣದಿಂದ ಭಕ್ತಿ ಸಂತರು ಭಾರತದ ಅತ್ಯಂತ ಶ್ರೇಷ್ಠ ಸಮನ್ವಯಕಾರರಾಗಿಯೂ ಕಂಡು ಬರುತ್ತಾರೆ ಎಂದು ತಿಳಿಸಿದರು.

ನಾವು ವಚನಗಳ ಮೇಲೆ ಕಟ್ಟಿಕೊಂಡಿರುವ ಕಥನವು ವಚನಗಳ ಮೇಲೆ ನೇರವಾಗಿ ಆಧಾರಿತವಾದುದಲ್ಲ. ವಿರಕ್ತರು ಸಂಪಾದನೆ, ಶೂನ್ಯ ಸಂಪಾದನೆ ಮೇಲೆ ಮರು ವ್ಯಾಖ್ಯಾನ ಮಾಡಿದರು. ಅದರ ಆಧಾರದ ಮೇಲೆ ಮಾತನಾಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ವಚನಗಳನ್ನು ನೇರವಾಗಿ ನೋಡಿ ವ್ಯಾಖ್ಯಾನಿಸುವ ಅಗತ್ಯವಿದೆ. ವಚನ ಪರಂಪರೆ ಅನೇಕ ಸತ್ಯಗಳನ್ನು ಬಿಚ್ಚಿಡುವ ಶೂನ್ಯ ಸಂಪಾದನೆಯು ವಚನಗಳಿಗೆ ಅನ್ಯಾಯ ಮಾಡಿದೆ. ಶೋಷಿತ, ಶ್ರಮಜೀವಿ ವರ್ಗದವರು ಹಾಗೂ ಮಹಿಳೆಯರ ದನಿಗಳನ್ನು ಬದಿಗೊತ್ತಲಾಗಿದೆ. ಅಹಂ ನಿರ್ಮಿತವಾದ ಸಿದ್ಧಾಂತ ಬದಿಗೊತ್ತಿ, ಬೇರೆ ಬೇರೆ ಪರಂಪರೆಗಳ ಎಲ್ಲಾ ದೃಷ್ಟಿಗಳ ಏಕತೆ ಹಾಗೂ ಅನೇಕತೆಯನ್ನು ನಾವು ಕಂಡುಕೊಳ್ಳಬೇಕು. ಆ ಪ್ರಯತ್ನಗಳು ಕರ್ನಾಟಕದಲ್ಲಿ ಚಿಂತನೆ ಮಟ್ಟದಲ್ಲಿ ಆಗಿಲ್ಲ. ಸೃಜನಶೀಲ ಪರಂಪರೆಯಾಗಿದೆ ಆಗಿದೆ. ಇದು ಸಮಾಧಾನಕರ ಸಂಗತಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲೇಖಕ ಪ್ರೊ.ಓ.ಎಲ್. ನಾಗಭೂಷಣಸ್ವಾಮಿ ಮಾತನಾಡಿ, ಬಸವಣ್ಣನವರನ್ನು ಸರ್ಕಾರ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ. ಇದಕ್ಕೆ ಕೆಲವರು ಸಂಭ್ರಮ ಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅಪಾಯವೂ ಕಂಡು ಬರುತ್ತಿದೆ. ಸಾಂಸ್ಕೃತಿಕ ನಾಯಕ ಎಂದ ಕೂಡಲೇ ಪ್ರಶ್ನೆ ಮಾಡುವಂತಿಲ್ಲ ಎಂಬಂತಾಗಬಾರದು. ಆದರೂ, ಸಾಂಸ್ಕೃತಿಕ ನಾಯಕನೆಂದು ಘೋಷಿಸಿದ್ದಕ್ಕೆ ರಾಜ್ಯ ಸರ್ಕಾರವನ್ನು ಅಭಿನಂದಿಸುವುದು ಸರಿ. ಆದರೆ, ಅದರಲ್ಲಿ ಅಪಾಯವೂ ಇದೆಯಲ್ಲವೇ? ಬಸವಣ್ಣನನ್ನು ಪ್ರಶ್ನಿಸುವುದು ಅಥವಾ ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆಯಲ್ಲವೇ. ಇತ್ತೀಚಿನ ದಿನಗಳಲ್ಲಿ ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳು ಭಾಷಣ ಮಾಡುವಾಗ ಬಸವಣ್ಣನವರನ್ನು ಸ್ಮರಿಸುತ್ತಾರೆ. ಅವರ ಹೇಳಿಕೆಯನ್ನು ಹೇಳುತ್ತಾರೆ. ಆದರೆ, ಅಂತಹ ರಾಜಕಾರಣಿಗಳು ಬಸವಣ್ಣನವರ ಆದರ್ಶ, ತತ್ವಗಳನ್ನು ಎಷ್ಟರ ಮಟ್ಟಿಗೆ ಅನುಸರಿಸುತ್ತಿದ್ದಾರೆ ಎಂದು ಅವಲೋಕಿಸಬೇಕು. ಕೇವಲ ಗಂಟೆಗಟ್ಟಲೆ ಭಾಷಣ ಮಾಡುವುದರಿಂದ ಪ್ರಯೋಜನವಿಲ್ಲ. ಬಸವಣ್ಣನವರ ತತ್ವ ಸಿದ್ಧಾಂತ ಪಾಲನೆ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಚಾಲಕ ಪ್ರೊ.ಎಚ್.ಎಸ್. ಉಮೇಶ್ ಆಶಯ ಭಾಷಣ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಹಾಗೂ ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ ಪಾಲ್ಗೊಂಡಿದ್ದರು.

ರಂಗಭೂಮಿಯಲ್ಲಿ ವಚನ ಸಾಹಿತ್ಯದ ಉಳಿವು-ಬೆಳವಣಿಗೆ ಅಡಗಿದೆ



'ವಚನ ಚಳುವಳಿ ಮತ್ತು ಕನ್ನಡ ರಂಗಭೂಮಿ' ಕುರಿತ ವಿಚಾರ ಸಂಕಿರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ರಾಜಪ್ಪ ದಳವಾಯಿ ಮಾತನಾಡಿದರು.

ಮೈಸೂರು, ಮಾ.9(ಎಂಕೆ)- ಕನ್ನಡ ರಂಗಭೂಮಿಯನ್ನು ಆವರಿಸಿರುವ ವಚನ ಚಳುವಳಿಯ ಮೌಲ್ಯವನ್ನು ಅರಿತು, ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ವಚನ ಸಾಹಿತ್ಯದ ಅಸ್ತಿತ್ವ ಉಳಿಸಿ-ಬೆಳೆಸಲು ಸಾಧ್ಯವಾಗುತ್ತದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ರಾಜಪ್ಪ ದಳವಾಯಿ ಹೇಳಿದರು.

ಮೈಸೂರು ರಂಗಾಯಣದಲ್ಲಿ ನಡೆಯುತ್ತಿರುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ 'ವಚನ ಚಳುವಳಿ ಮತ್ತು ಕನ್ನಡ ರಂಗಭೂಮಿ' ಕುರಿತು ವಿಚಾರ ಮಂಡಿಸಿದ ಅವರು, ಸಾಮಾಜಿಕ ಅಸಮತೋಲನದ ಪರಿಹಾರಕ್ಕೆ ಮತ್ತೆ ಮತ್ತೆ ವಚನ ಚಳುವಳಿ ಅಸ್ತಿತ್ವ ಪಡೆಯುತ್ತದೆ. ಮೊದ ಮೊದಲು ಮೊದಲು ವಚನಗಳನ್ನು ಧರ್ಮ ಗ್ರಂಥಗಳೆಂದು ಭಾವಿಸಲಾಗಿತ್ತು ಆದರೆ 70ರ ದಶಕಗಳ ಬಳಿಕ ವಚನಗಳು ಚಳುವಳಿಯಾಗಿ ಮಾರ್ಪಟ್ಟಿತು. ಹಾಗೆಯೇ ರಂಗಭೂಮಿಯಲ್ಲಿಯೂ ಹಲವಾರು ನಾಟಕಗಳಲ್ಲಿ ವಚನ ಸಾಹಿತ್ಯವನ್ನು ಬಳಸಿಕೊಳ್ಳಲಾಗಿದೆ ಎಂದರು.

ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಮಾತನಾಡಿ, ಚಳುವಳಿ ಮತ್ತು ಚಟುವಟಿಕೆಗೆ ವ್ಯತ್ಯಾಸವಿದ್ದು, ಚಳುವಳಿಯಾಗಿ ಆರಂಭಗೊಂಡು ಚಟುವಟಿಕೆಯಾಗಿ ಕೊನೆಗೊಳ್ಳುತ್ತದೆ. ವಚನಗಳನ್ನು ಅವಲಂಬಿಸಿದ ಸುಮಾರು 60ಕ್ಕೂ ಹೆಚ್ಚು ಕನ್ನಡ ನಾಟಕಗಳಿವೆ. ಅಶಾಸ್ತ್ರೀಯವಾದ ರಂಗಭೂಮಿ ವಚನಗಳು ಸಂಭಾಷಣೆಯ ಮೂಲಕ ಚಳುವಳಿಯಾಗಿ ರೂಪುಗೊಳ್ಳುತ್ತವೆ. ವಚನಗಳು ಸ್ಥಾವರಗಳಾಗಿವೆ ಎಂದರು.

ಜಾನಕಿರಾಮ!: ಇತ್ತೀಚಿನ ದಿನಗಳಲ್ಲಿ ಬೇರ್ಪಡಿಸುವಿಕೆ ಹೆಚ್ಚಾಗಿದೆ. ಜೈ ಶ್ರೀರಾಮ್ ಎಂದು ರಾಮನನ್ನು ಸೀತೆಯಿಂದ ಮತ್ತು ಆತನ ಕುಟುಂಬದಿಂದ ಬೇರ್ಪಡಿಸಲಾಗಿದೆ ಆದ್ದರಿಂದ 'ಜಾನಕಿರಾಮ', 'ದಶರಥರಾಮ' ಎಂಬ ನಾಟಕಗಳನ್ನು ಸಿದ್ಧಪಡಿಸುವ ಮೂಲಕ ಮತ್ತೆ ಕುಟುಂಬವನ್ನೂ ಒಂದುಗೂಡಿಸಬೇಕಿದೆ. ಈ ದೇಶದಲ್ಲಿ ಸದ್ಯಕ್ಕೆ ಜಾಗವೇ ಒಂದು ಜಾತಿಯಾಗಿದ್ದು, ಸರ್ವರೂ ಒಂದೇ ಎಂಬ ಭಾವನೆ ಮೂಡಿಸುವ ಕಾರ್ಯವಾಗಬೇಕಿದೆ ಎಂದರು. ನಾಟಕಕಾರ ನಟರಾಜ್ ಹೊನ್ನವಳ್ಳಿ, ರಂಗ ನಿರ್ದೇಶಕ ಮಹದೇವ ಹಡಪದ ಉಪಸ್ಥಿತರಿದ್ದರು.

> **ರಂಗಾಯಣಕ್ಕೆ ರಂಗಾಸಕ್ತರ ಆಗಮನ...!**
>
> ಕಳೆದ ಎರಡೂರು ವರ್ಷ ರಂಗಾಯಣ ರಂಗಾಸಕ್ತರಿಗಿಂತ ಪೊಲೀಸರು, ಪಕ್ಷವೊಂದರ ಕಾರ್ಯಕರ್ತರನ್ನು ನೋಡಿದ್ದೇ ಜಾಸ್ತಿ. ಈಗ ಮತ್ತೆ ರಂಗಾಯಣಕ್ಕೆ ನಿಜವಾದ ರಂಗಾಸಕ್ತರು ಆಗಮಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿಯೂ ಕಲಾಭಿಮಾನಿಗಳನ್ನು ರಂಗಾಯಣ ಕರೆತರುವ ಕೆಲಸವಾಗಬೇಕು.
>
> - ಸಿ.ಬಸವಲಿಂಗಯ್ಯ, ಹಿರಿಯ ರಂಗಕರ್ಮಿ

ಜಾನಪದ ಕುಣಿತಕ್ಕೆ ನೆರೆದವರು ಹರ್ಷಚಿತ್ತ




ಕಿಂದರಿಜೋಗಿ ವೇದಿಕೆಯಲ್ಲಿ ಡೊಳ್ಳು ಕುಣಿತ ಪ್ರದರ್ಶನ ನೀಡಿದ ಜಾನಪದ ಕಲಾವಿದರು


ಮೈಸೂರು, ಮಾ.9(ಎಂಕೆ)- ಮುಸ್ಸಂಜೆಯಲ್ಲಿ ಮನಗೆದ್ದ ಜಾನಪದ ಝೇಂಕಾರ... ಡೊಳ್ಳು ಕುಣಿತ, ಪಟದ ಕುಣಿತ ಕಂಡು ಶಿಳ್ಳೆ-ಚಪ್ಪಾಳೆ ಸುರಿಮಳೆಗೈದ ಅಭಿಮಾನಿಗಳು...!

ರಂಗಾಯಣದ ಕಿಂದರಿಜೋಗಿ ವೇದಿಕೆಯಲ್ಲಿ ನಡೆದ ಜಾನಪದ ಕಲಾ ಪ್ರಕಾರಗಳ ನೃತ್ಯ ಮನಸೂರೆಗೊಂಡಿತು. ಕಡೂರು ತಾಲೂಕಿನ ಹಡಗಲು ಗ್ರಾಮದ ಕೆ.ಎಂ.ಅಪ್ಪಣ್ಣ ಮತ್ತು ತಂಡದ 'ಡೊಳ್ಳು ಕುಣಿತ' ನೋಡುಗರು ಕುಳಿತಲ್ಲೇ ಎದ್ದು ಕುಣಿಯುವಂತೆ ಮಾಡಿತು. ಹಾಗೆಯೇ ಸಹಾಯ ಪ್ರದರ್ಶನದ ಮೂಲಕ ಕಲಾವಿದರ ಎಲ್ಲರ ಗಮನ ಸೆಳೆದರು.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಕದಲಗೆರೆ ಗ್ರಾಮದ ರವಿ ಮತ್ತು ತಂಡದ 'ಪಟ ಕುಣಿತ' ಪ್ರದರ್ಶನ ಅತ್ಯಾಕರ್ಷಣೀಯವಾಗಿತ್ತು. ಹತ್ತಕ್ಕೂ ಹೆಚ್ಚು ಕಲಾವಿದರು ರೇಷ್ಮೆ ಬಟ್ಟೆಯಿಂದ ಸುತ್ತಿ ಅಲಂಕಾರ ಮಾಡಿದ್ದ ಉದ್ದದ ಬಿದಿರಿನ ಕೋಲುಗಳನ್ನು ಹಿಡಿದರೆ, ಪುಟಾಣಿ ಕಲಾವಿದ ತಲೆಯ ಮೇಲೆ ದೇವರನ್ನು ಹೊತ್ತು ಹೆಜ್ಜೆಹಾಕಿದರು. ಹಿನ್ನೆಲೆ ವಾದ್ಯಕ್ಕೆ ಅನುಗುಣವಾಗಿ ನೃತ್ಯ ಪ್ರದರ್ಶನ ನೀಡಿದ ಕಲಾವಿದರು ಕಿಂದರಿಜೋಗಿ ಆವರಣದಲ್ಲಿ ಜಾನಪದ ಝೇಂಕಾರ ಮೊಳಗಿಸಿದರು. ಬಳಿಕ ಕಲಾವಿದರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಸ್ಮರಣಿಕೆ ನೀಡಿ ಗೌರವಿಸಿದರು.

ಪ್ರೇಕ್ಷಕರಿಗೆ ಕೃಷ್ಣಾವತಾರ, ಚಾವುಂಡರಾಯ, ಜಂಪ್, ಖಟಾರ ನಾಟಕಗಳ ಭಿನ್ನಮೋಡಿ


ಕಿರುರಂಗಮಂದಿರದಲ್ಲಿ ಪ್ರದರ್ಶನಗೊಂಡ 'ಗ್ಲಾನಿ' ನಾಟಕದ ದೃಶ್ಯ


'ಚಾವುಂಡರಾಯ' ನಾಟಕ ಕಲಾಮಂದಿರದಲ್ಲಿ ಪ್ರದರ್ಶನಗೊಂಡಿತು.

ಮೈಸೂರು, ಮಾ.9(ಎಂಕೆ)- ರಾಮಚಂದ್ರನ ಕಾಡಿದ ಗ್ಲಾನಿ(ಕೊರಗು) ಕೃಷ್ಣಾವತಾರಕ್ಕೆ ವೇದಿಕೆಯಾಯಿತು ಎಂಬುದರ ಜೊತೆಗೆ ಬದುಕಿನ ಸೂಕ್ಷ್ಮ ಸಂಗತಿಗಳನ್ನು ಹಾಸ್ಯಭರಿತವಾಗಿ ಚರ್ಚಿಸುತ್ತಾ ಚರಿತ್ರೆಯ ಪುಟಗಳಲ್ಲಿ ಅಚ್ಚಳಿಯದೆ ಉಳಿದಿರುವ ಚಾವುಂಡ ರಾಯರನ್ನು ಸ್ಮರಿಸಲಾಯಿತು...!

ಮೈಸೂರು ರಂಗಾಯಣದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಮೂರನೇ ದಿನ ರಾಮಾಯಣದ ಕಥಾ ವಸ್ತು, ಹಾಸ್ಯದೊಂದಿಗೆ ಬದುಕಿನ ಸೂಕ್ಷ್ಮ ಸಂಗತಿ, ರೈತನ ಸಂಕಷ್ಟ ಹಾಗೂ ಕರ್ನಾಟಕ ಇತಿಹಾಸದಲ್ಲಿ ಚಾವುಂಡರಾಯನನ್ನು ಸ್ಮರಿಸುವ ನಾಟಕಗಳು ಪ್ರದರ್ಶನಗೊಂಡವು. ಕಿರುರಂಗಮಂದಿರದಲ್ಲಿ ರಾಮಾಯಣದ ಕಥಾವಸ್ತುವಿನಲ್ಲಿ ಶ್ರೀ ರಾಮಚಂದ್ರನನ್ನು ಬೆಂಬಿಡದೆ ಕಾಡುವ ಗ್ಲಾನಿ(ಕೊರಗು) ರಾಮಚಂದ್ರರ ದೇಹತ್ಯಾಗಕ್ಕೆ ಕಾರಣವಾದುದ್ದೇಗೆ ಎಂಬುದನ್ನು ನಿರ್ದೇಶಕ ಚಿಂದಬರ ರಾವ್ ಜಂಬೆ ಸೊಗಸಾಗಿ ಪ್ರಸ್ತುತಪಡಿಸಿದರು. ಜಿ.ಎಸ್. ಭಟ್ ರಚನೆಯಲ್ಲಿ ಮೂಡಿಬಂದ 'ಗ್ಲಾನಿ' ನಾಟಕದಲ್ಲಿ ಸಾಗರದ ಉದಯ ಕಲಾವಿದರ ಅಚ್ಚುಕಟ್ಟು ಅಭಿನಯ ಅಭಿಮಾನಿಗಳ ಮನಗೆದ್ದಿತು.

ಜಂಪ್: ಭೂಮಿಗೀತ ವೇದಿಕೆಯಲ್ಲಿ ಮನೀಶ್ ಶರ್ಮ ನಿರ್ದೇಶನ, ಮುಂಬೈನ ಕಲೆಕ್ಟಿವ್ ಮ್ಯಾಡ್‌ನೆಸ್ ಸ್ಟುಡಿಯೋಸ್ ತಂಡದ ಕಲಾವಿದರು ಪ್ರಸ್ತುಪಡಿಸಿದ ಬಹುಭಾಷೆ(ಹಿಂದಿ, ಇಂಗ್ಲಿಷ್)ಯ 'ಜಂಪ್' ನಾಟಕ ಹಾಸ್ಯದ ಹೊಳೆಯನ್ನೇ ಹರಿಸಿತು. ತನ್ನ ವೃತ್ತಿ ಬದುಕಿನಲ್ಲಿ ಯಶಸ್ಸು ಸಾಧಿಸಿರುವ ಯುವತಿಯೊಬ್ಬಳು ಎತ್ತರದ ಕಟ್ಟಡವೊಂದರ ಮೇಲಿಂದ ಕೆಳಗೆ ಬಿದ್ದು ಆತ್ಮಹತ್ಯೆಗೆ ಯತ್ನಿಸುವಾಗ, ಆಕೆಯನ್ನು ಕಾಪಾಡುವ ಟ್ಯಾಕ್ಸಿ ಚಾಲಕನೊಂದಿಗೆ ನಡೆಯುವ ಸಂಭಾಷಣೆಯಲ್ಲಿ ಮಾನಸಿಕ ಖಿನ್ನತೆ, ಏಕಾಂಗಿತನ, ಸಂತೋಷ, ಪ್ರೀತಿ ಸೇರಿದಂತೆ ಬದುಕಿನ ಸೂಕ್ಷ್ಮ ಸಂಗತಿಗಳನ್ನು ಹಾಸ್ಯಪೂರಿತವಾಗಿ ಚರ್ಚಿಸಲಾಗುತ್ತದೆ.

ಖಟಾರ: ರೈತನೋರ್ವ ತನ್ನ ಹಿರಿಯ ಮಗಳ ಮದುವೆಗಾಗಿ ತನ್ನ ಬಳಿಯಿದ್ದ ಖಟಾರ(ಎತ್ತಿನಗಾಡಿ)ಯನ್ನು ಮಾರಲು ಪರಿತಪಿಸುವುದು, ಆತನ ಸಂಕಟವನ್ನು ನವಿರಾದ ಹಾಸ್ಯ ಸಂಭಾಷಣೆ ಮೂಲಕ ತಿಳಿಸುವ ಪ್ರಯತ್ನವನ್ನು ನಿರ್ದೇಶಕ ಅಮೋಲ್ ದೇವಿದಾಸ್ ಸಾಳ್ವೆ ಮಾಡಿದರು. 'ಮರಾಠಿ' ಭಾಷೆಯ 'ಖಟಾರ' ನಾಟಕದಲ್ಲಿನ ಮಹಾರಾಷ್ಟ್ರ ಅಹಮದ್‌ನಗರದ ಅಪ್ಲ ಘರ್ ಕಲಾವಿದರ ಅಭಿನಯ ವನರಂಗದಲ್ಲಿ ನೆರೆದಿದ್ದ ಕಲಾ ಪ್ರೇಕ್ಷಕರ ಗಮನ ಸೆಳೆಯಿತು.


ಚಾವುಂಡರಾಯ: ಕಲಾಮಂದಿರ ವೇದಿಕೆಯಲ್ಲಿ ಕರ್ನಾಟಕ ಇತಿಹಾಸದ ಪುಟಗಳಲ್ಲಿ ಉಳಿದಿರುವ 'ಚಾವುಂಡ ರಾಯ'ರ ಸಾಹಸಗಾಥೆಯನ್ನು ಸ್ಮರಿಸುವ ನಾಟಕ ಪ್ರದರ್ಶನಗೊಂಡಿತು. ಹೆಚ್.ಕೆ. ಶ್ವೇತಾರಾಣಿ ನಿರ್ದೇಶನ, ಜಯರಾಂ ರಾಯಪುರ ರಚನೆ ಹಾಗೂ ಶೇಷಗಿರಿ ಶ್ರೀ ಗಜಾನನ ಯುವಕ ಮಂಡಳಿ ಕಲಾವಿದರ ಅಭಿನಯ ಚಾವುಂಡ ರಾಯರ ಸಾಧನೆಯನ್ನು ಮೆಲುಕುಹಾಕುವಂತೆ ಮಾಡಿತು. ಸೇನಾ ಮುಖ್ಯಾಧಿಕಾರಿಯಾಗಿದ್ದ ಚಾವುಂಡರಾಯನು ಅನೇಕ ಯುದ್ಧಗಳ ಬಳಿಕ ಶ್ರವಣಬೆಳಗೊಳದಲ್ಲಿ ಏಕಶಿಲಾ ಬಾಹುಬಲಿ ಮೂರ್ತಿಯನ್ನು ಸ್ಥಾಪಿಸಲು ಕಾರಣವೇನು ಎಂಬುದನ್ನು ನಾಟಕ ಮೂಲಕ ತಿಳಿಸಲಾಯಿತು.

ಭರ್ತಿ ಪ್ರದರ್ಶನ: ವಾರಾಂತ್ಯ ಹಿನ್ನೆಲೆಯಲ್ಲಿ ಬಹುರೂಪಿಯಲ್ಲಿ ಶನಿವಾರ ಪ್ರದರ್ಶನಗೊಂಡ ನಾಲ್ಕು ನಾಟಕಗಳು ಭರ್ತಿ ಪ್ರದರ್ಶನ ಕಂಡವು. ಕಿರುರಂಗಮಂದಿರ, ಭೂಮಿಗೀತ, ಕಲಾಮಂದಿರ ಬಹುತೇಕ ಭರ್ತಿಯಾಗಿತ್ತು. ವನರಂಗದಲ್ಲಿ ಪ್ರದರ್ಶನಗೊಂಡ ಮರಾಠಿ ನಾಟಕ ನೋಡುಗರ ಸಂಖ್ಯೆ ಸ್ವಲ್ಪ ಕಡಿಮೆ ಇದ್ದರೆ, ಉಳಿದಂತೆ ಬಹುರೂಪಿಯ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ರಂಗಾಸಕ್ತರು ತುಂಬಿದ್ದರು.

ಭರ್ಜರಿ ವ್ಯಾಪಾರ: ಬಹುರೂಪಿ ಆರಂಭದ ಎರಡು ದಿನ ವಿರಳವಾಗಿದ್ದ ಕರಕುಶಲ ಹಾಗೂ ಆಹಾರ ಮಳಿಗೆಗಳ ವಿಭಾಗದ ಶನಿವಾರ ತುಂಬಿ ತುಳುಕುತ್ತಿತ್ತು. ಬಗೆ ಬಗೆಯ ಖಾದ್ಯಗಳನ್ನು ಸವಿದು ಇಷ್ಟದ ನಾಟಕಗಳನ್ನು ವೀಕ್ಷಣೆ ಮಾಡಿ ಸಂಭ್ರಮಿಸಿದರು. ಹಾಗೆಯೇ ಪುಸ್ತಕಗಳು, ವಸ್ತ್ರಗಳು ಮತ್ತು ಅಲಂಕಾರಿಕ ಪದಾರ್ಥಗಳ ವ್ಯಾಪಾರ ಭರ್ಜರಿಯಾಗಿತ್ತು.


ವನರಂಗದಲ್ಲಿ ಪ್ರದರ್ಶನಗೊಂಡ 'ಖಟಾರ' ನಾಟಕದ ದೃಶ್ಯ

ಎಂಎಲ್ಎ ಆಗಿದ್ದರೂ ಮೈಸೂರಿಗರಿಗೆ ಮಾತ್ರ ಸದಾ 'ಮೇಯರ್ ವಾಸು'!



ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಪ್ರಪ್ರಥಮವಾಗಿ ಕುದುರೆ ಸವಾರಿ ಮಾಡಿದ ಹೆಗ್ಗಳಿಕೆ ವಾಸು ಅವರದು. ಆ ಸಂದರ್ಭದಲ್ಲಿ ಮೈಸೂರಿನಲ್ಲಿ 60ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಈ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ಆಗಿನ ಮೇಯರ್ ವಾಸು, ಸಮ್ಮೇಳನಾಧ್ಯಕ್ಷರನ್ನು ಮೆರವಣಿಗೆಗೆ ತಾವು ಮುಂಚೂಣಿಯಲ್ಲಿ ಕುದುರೆ ಸವಾರಿ ಮಾಡುವ ಮೂಲಕ ಮೆರಗು ತಂದಿದ್ದರು ಎಂದು ಇಂದಿಗೂ ಅವರ ಅಭಿಮಾನಿಗಳು ನೆನಪಿಸಿಕೊಳ್ಳುತ್ತಾರೆ. ಇದರಿಂದಲೇ ಏನೋ ಶಾಸಕರಾದರೂ ಕೂಡ 'ಮೇಯರ್ ವಾಸು' ಪಟ್ಟ ಅವರನ್ನು ಬಿಟ್ಟು ಹೋಗಲಿಲ್ಲ.

ಮಾಜಿ ಶಾಸಕ ವಾಸು ಅವರು 'ಮೈಸೂರು ಮೇಯರ್' ಆಗಿದ್ದು, 1990ರಲ್ಲಿ. ಇದಾದ ಎರಡೇ ವರ್ಷದಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾದರು. 23 ವರ್ಷದ ನಂತರ ಅಂದರೆ, 2013ರಲ್ಲಿ ಚಾಮರಾಜ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದರು. ವಾಸು ಶಾಸಕರಾಗಿದ್ದರೂ ಅವರ ಅಭಿಮಾನಿಗಳಿಗೆ ಅವರು ಅಚ್ಚುಮೆಚ್ಚಿನ 'ಮೇಯರ್ ವಾಸು'! ಇದೀಗ ಅವರು ಮೇಯರ್ ಆಗಿ 34 ವರ್ಷ ಕಳೆದಿದ್ದರೂ ಹೆಮ್ಮೆಯಿಂದ ಮೇಯರ್ ವಾಸು ಎಂದೇ ಕರೆಯುತ್ತಿದ್ದರು.

ಮೈಸೂರು ನಗರಪಾಲಿಕೆಗೆ ಎಷ್ಟೋ ಜನ ಮೇಯರ್ ಆದರು, ಹೋದರು. ಆದರೆ ಈ ಸ್ಥಾನಕ್ಕೆ ಅದೇನೋ ಕಳೆ ಕಟ್ಟಿದವರು ವಾಸು ಎನ್ನುತ್ತಾರೆ ಅವರ ಅಭಿಮಾನಿಗಳು. ಶಾಸಕರಂತಹ ಉನ್ನತ ಸ್ಥಾನಕ್ಕೆ ಹೋದರೂ ಕೂಡ 'ಮೇಯರ್' ಪಟ್ಟ ಅವರನ್ನು ಬಿಟ್ಟಿರಲಿಲ್ಲ. ಅಷ್ಟರ ಮಟ್ಟಿಗೆ ಮೈಸೂರು ಮೇಯರ್ ಆಗಿ ವಾಸು ಜನಮನ ಗೆದ್ದಿದ್ದರು. ಆ ಸ್ಥಾನದ ಘನತೆ–ಗೌರವ ಎತ್ತಿ ಹಿಡಿದವರು.

ಮೊದಲು ಕುದುರೆ ಸವಾರಿ: ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಪ್ರಪ್ರಥಮವಾಗಿ ಕುದುರೆ ಸವಾರಿ ಮಾಡಿದ ಹೆಗ್ಗಳಿಕೆ ವಾಸು ಅವರದು. ಆ ಸಂದರ್ಭದಲ್ಲಿ ಮೈಸೂರಿನಲ್ಲಿ 60ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಈ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ಆಗಿನ ಮೇಯರ್ ವಾಸು, ಸಮ್ಮೇಳನಾಧ್ಯಕ್ಷರನ್ನು ಮೆರವಣಿಗೆಗೆ ತಾವು ಮುಂಚೂಣಿಯಲ್ಲಿ ಕುದುರೆ ಸವಾರಿ ಮಾಡುವ ಮೂಲಕ ಮೆರಗು ತಂದಿದ್ದರು ಎಂದು ಇಂದಿಗೂ ಅವರ ಅಭಿಮಾನಿಗಳು ನೆನಪಿಸಿಕೊಳ್ಳುತ್ತಾರೆ. ಇದರಿಂದಲೇ ಏನೋ ಶಾಸಕರಾದರೂ ಕೂಡ 'ಮೇಯರ್ ವಾಸು' ಪಟ್ಟ ಅವರನ್ನು ಬಿಟ್ಟು ಹೋಗಲಿಲ್ಲ ಎನ್ನಿಸುತ್ತದೆ.

ಸತ್ಕಾರದಲ್ಲಿ ಸಮಾನರಿಲ್ಲ: ವಾಸು ಅವರು ಎಂದೂ ಅಧಿಕಾರದ ಹಿಂದೆ ಹೋದವರಲ್ಲ. ಅಧಿಕಾರ ಇರಲಿ–ಬಿಡಲಿ ಅವರ ಸುತ್ತ ಅಭಿಮಾನಿಗಳ ದಂಡೇ ಇರುತ್ತಿತ್ತು. ಅತಿಥಿ ಸತ್ಕಾರದಲ್ಲಿ ವಾಸು ಅವರನ್ನು ಮೀರಿಸುವವರೇ ಇಲ್ಲ ಎಂಬುದು ಅವರ ಅಭಿಮಾನಿಗಳು, ಹಿತೈಷಿಗಳ ಮಾತು. ಅವರ ನಿವಾಸದಲ್ಲಿ ಪದೇ ಪದೆ ಔತಣಕೂಟಗಳು ನಡೆಯುತ್ತಿತ್ತು. ಅವರನ್ನು ಅರಿತಿರುವವರು **"ವಾಸು ಅವರಿಗೆ ಊಟ ಹಾಕಲು ಕಾರಣವೇಬೇಕಿಲ್ಲ. ಅವರೇ ಯಾವುದಾದರೂ ಕಾರಣ ಹುಡುಕಿ ಊಟ ಹಾಕುತ್ತಾರೆ."** ಎಂದು ಹೇಳುತ್ತಿದ್ದರು. ಇದಕ್ಕೆ ಉದಾಹರಣೆ ಎಂದರೆ ವಾಸು 2008ರ ಚುನಾವಣೆಯಲ್ಲಿ ಸೋಲನನುಭವಿಸಿದ್ದರು. ಚುನಾವಣಾ ಫಲಿತಾಂಶ ಬಂದ ವಾರದೊಳಗೆ ಅವರು ಹೋಟೆಲ್ 'ಪ್ಲಾನೆಟ್ ಎಕ್ಸ್'ನಲ್ಲಿ ತಮ್ಮ ಪರ ಕೆಲಸ ಮಾಡಿದವರು, ಅಭಿಮಾನಿಗಳು, ಹಿತೈಷಿಗಳಿಗೆ ಅದ್ಧೂರಿ ಔತಣಕೂಟವನ್ನು ಏರ್ಪಡಿಸಿದ್ದರು.



ಕಾಫಿ ಪ್ರಿಯರು: ಕಾಫಿ ಪ್ರಿಯರಾಗಿದ್ದ ವಾಸು ತಮ್ಮ ಮನೆಯಿಂದ ಕಾಫಿ ಕುಡಿಯಲೆಂದೇ ಬರಿಸ್ಟಾ ಮತ್ತು ಕಬ್ಸ್ ಕಾಫಿ ಶಾಪ್‌ಗಳಿಗೆ ತೆರಳುತ್ತಿದ್ದರು. ಹಾಗಂತ ಅವರು ಒಬ್ಬರೇ ಹೋಗುತ್ತಿರಲಿಲ್ಲ. ಮನೆ ಯಿಂದ ಹೊರಡುವಾಗಲೇ ಮೊಬೈಲ್ ಮೂಲಕ ಸ್ನೇಹಿತರನ್ನು ಸಂಪರ್ಕಿಸಿ, ಅವರನ್ನೂ ಅಲ್ಲಿಗೆ ಆಹ್ವಾನಿಸಿ ಒಟ್ಟಿಗೆ ಕಾಫಿ ಹೀರುತ್ತಿದ್ದರು. ಈ ಎರಡು ಕಾಫಿ ಶಾಪ್‌ಗಳು ವಾಸು ಅವರಿಗೆ ಅಚ್ಚುಮೆಚ್ಚು. ಇಲ್ಲಿ ತಮ್ಮ ಸ್ನೇಹಿತರು, ಅಧಿಕಾರಿಗಳು ಸೇರಿದಂತೆ ಎಲ್ಲಾ ವರ್ಗದವರನ್ನು ಕರೆಸಿಕೊಂಡು ಕಾಫಿ ಹೀರುತ್ತಾ ಹಲವಾರು ಮಹತ್ವದ ಚರ್ಚೆಗಳನ್ನು ನಡೆಸುತ್ತಿದ್ದರು.

'ಮಿತ್ರ'ನ ಶ್ರದ್ಧಾಂಜಲಿ

ನಿತ್ಯವೂ ಆತಿಥ್ಯ: ವಾಸು ಅವರಿಗೆ ಬಹುಶಃ ಒಬ್ಬರೇ ಕುಳಿತು ಊಟ ಮಾಡಿದ್ದೇ ಅಪರೂಪ. ಅವರ ಮನೆಯ ಡೈನಿಂಗ್ ಟೇಬಲ್ ಸದಾ ಕಾಲ ಆತಿಥ್ಯಕ್ಕಾಗಿ ಕಾಯುತ್ತಿತ್ತು. ಅದು ಉಪಾಹಾರದ ವೇಳೆಯೇ ಆಗಲೀ, ಊಟದ ಸಮಯವೇ ಆಗಲೀ ಡೈನಿಂಗ್ ಟೇಬಲ್‌ನ ಚೇರ್‌ಗಳು ಭರ್ತಿಯಾಗಿರಬೇಕಿತ್ತು. ಸ್ನೇಹಿತರು ಅಥವಾ ಪರಿಚಿತರು ಬಂದ ನಂತರವೇ ಅವರೊಂದಿಗೆ ಕುಳಿತು ಲೋಕಾಭಿರಾಮವಾಗಿ, ಮಾತುಕತೆಯಾಡುತ್ತಾ ಊಟ ಮಾಡಿದರೇನೇ ವಾಸು ಅವರಿಗೆ ತೃಪ್ತಿ.

ವಾಸು ಶ್ವಾನಪ್ರಿಯರು. ಅವರು ತಮ್ಮ ಮನೆಯಲ್ಲಿ ಹಲವಾರು ಜಾತಿಯ ನಾಯಿಗಳನ್ನು ಸಾಕಿದ್ದಾರೆ. ಕೊನೆಯದಾಗಿ ಅವರು ಸಾಕಿದ್ದ ಎರಡು ಸಣ್ಣ ನಾಯಿ ಮರಿಗಳು ಅವರ ತೊಡೆ ಮೇಲೆ ಕೂರಲು ಪೈಪೋಟಿ ನಡೆಸುತ್ತಿದ್ದವು. ಕೆಲ ನಿಮಿಷಗಳ ಕಾಲ ಮುದ್ದಾಡಿ ಸಮಾಧಾನಪಡಿಸಿದ ನಂತರವೇ ಈ ನಾಯಿಗಳು ಉಲ್ಲಾಸಭರಿತವಾಗಿ ಓಡಾಡುತ್ತಿದ್ದವು ಎಂಬುದನ್ನು ಇತ್ತೀಚೆಗೆ ಅವರ ಮನೆಗೆ ಹೋಗಿದ್ದ ಅಭಿಮಾನಿಯೊಬ್ಬರು ನೆನಪಿಸಿಕೊಳ್ಳುತ್ತಾರೆ.

ಮನವರಿತು ನೆರವು: ಸಮಾಜ ಸೇವೆಯಲ್ಲೂ ವಾಸು ಎತ್ತಿದ ಕೈ. ಕಷ್ಟ ಎಂದು ಅವರ ಮನೆಗೆ ಹೋದವರು ಬರಿಗೈಯ್ಯಲ್ಲಿ ವಾಪಸ್ಸಾದ ಉದಾಹರಣೆ ಇಲ್ಲ. ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿ, ಕ್ರೀಡೆಯಾಗಲಿ, ಸಾಮಾಜಿಕ ಕಾರ್ಯಕ್ರಮವಾಗಲಿ ಅದರಲ್ಲಿ ವಾಸು ಅವರ ಪಾಲು ಇದ್ದೇ ಇರುತ್ತಿತ್ತು. ಬಡ ಜನರು ತಮ್ಮ ಮನೆಯ ಮದುವೆ ಇನ್ನಿತರ ವಿಶೇಷ ಕಾರ್ಯಕ್ರಮಗಳಿಗೆ ವಾಸು ಅವರನ್ನು ಆಹ್ವಾನಿಸಿದಾಗ, ಬಂದವರ ಆರ್ಥಿಕ ಪರಿಸ್ಥಿತಿ ಅರಿತುಕೊಂಡು ತಾವಾಗಿಯೇ ಸಹಾಯ ಮಾಡುತ್ತಿದ್ದ ಕೊಡುಗೈ ದಾನಿ ಅವರು ಎಂದು ಬಲ್ಲವರು ಹೇಳುತ್ತಾರೆ.

ಜಾತಿ, ಮತ ಭೇದವಿಲ್ಲದೇ ಎಲ್ಲರಿಗೂ ವಾಸು ಅವರು ಸಹಾಯಹಸ್ತ ಚಾಚುತ್ತಿದ್ದರು. ಮಂಡಿ ಮೊಹಲ್ಲಾ ಅವರು ಪ್ರತಿನಿಧಿಸಿದ್ದ ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಸೇರಿತ್ತು. ಇವರು ಅಲ್ಲಿನ ಅನೇಕ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನೆರವು ನೀಡಿದ್ದಾರೆ. ಅಂದ ಮಾತ್ರಕ್ಕೆ ತಾವು ಪ್ರತಿನಿಧಿಸುವ ಕ್ಷೇತ್ರ, ತಮಗೆ ಮತ ಬರಲಿ ಎಂಬ ಉದ್ದೇಶದಿಂದ ಅವರು ನೆರವು ನೀಡುತ್ತಿರಲಿಲ್ಲ. ಎಲ್ಲಿಯವರೇ ಆಗಲಿ ಬಡ ಮಕ್ಕಳು ವಿದ್ಯಾವಂತರಾಗಬೇಕು ಎಂಬ ಉದ್ದೇಶದಿಂದ ಚುನಾವಣೆಯಲ್ಲಿ ಸೋತಿದ್ದಾಗಲೂ ಕೂಡ ಅವರ ನೆರವಿಗೆ ನಿಲ್ಲುತ್ತಿದ್ದರು.

ಶಿಕ್ಷಣಕ್ಕೆ ಮಹತ್ವ: ವಾಸು ಅವರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದು, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ದೊರೆಯಲು ಕಾರಣಕರ್ತರಾದರು. ಆರ್ಥಿಕವಾಗಿ ಕಷ್ಟದಲ್ಲಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮ ಸಂಸ್ಥೆಯಲ್ಲಿ ರಿಯಾಯಿತಿ ನೀಡಿ ಸಹಕರಿಸುತ್ತಿದ್ದರು.

ವಾಸು ಅವರಿಗೆ ಹಳ್ಳಿಯಿಂದ ದಿಲ್ಲಿವರೆಗೆ ಎಲ್ಲಾ ವರ್ಗದ ಜನರ ಸಂಪರ್ಕವೂ ಇತ್ತು. ಅವರು ಆಗಿಂದಾಗ್ಗೆ ನಡೆಸುತ್ತಿದ್ದ ಔತಣಕೂಟಗಳಲ್ಲಿ ಕೇವಲ ಮೈಸೂರು ನಗರದವರು ಮಾತ್ರವಲ್ಲ, ಮೈಸೂರು ಜಿಲ್ಲೆಯ ವಿವಿಧ ಹಳ್ಳಿಗಳಿಂದ, ಮಂಡ್ಯ, ಕೊಡಗು, ಹಾಸನ, ಚಾಮರಾಜನಗರ ಜಿಲ್ಲೆಗಳಿಂದಲೂ ಎಲ್ಲಾ ವರ್ಗದ ಜನರು ಭಾಗವಹಿಸುತ್ತಿದ್ದರು. ಎಲ್ಲರನ್ನೂ ವಾಸು ಅವರು ಆತ್ಮೀಯವಾಗಿ ಸ್ವಾಗತಿಸಿ ಆತಿಥ್ಯ ನೀಡುತ್ತಿದ್ದರು. ಅದು ಮಾತ್ರವಲ್ಲದೇ ಹಲವಾರು ರಾಜ್ಯ, ರಾಷ್ಟ್ರೀಯ ನಾಯಕರು ಪಕ್ಷಾತೀತವಾಗಿ ವಾಸು ಅವರೊಂದಿಗೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದರು.

ಸಾಹಿತ್ಯಕ್ಕೆ ಒತ್ತಾಸೆ: ಸಾಹಿತಿಗಳ ಮೇಲೆ ವಿಶೇಷ ಪ್ರೀತಿ ಹೊಂದಿದ್ದ ವಾಸು, ಹಲವಾರು ಹಿರಿಯ–ಕಿರಿಯ ಸಾಹಿತಿಗಳ ಪುಸ್ತಕ ಪ್ರಕಟಣೆಗೆ ಯಾವುದೇ ಪ್ರಚಾರವಿಲ್ಲದೇ ನೆರವಾಗಿದ್ದರು. 2017ರಲ್ಲಿ ಮೈಸೂರಿನ ಕಲಾಮಂದಿರದಲ್ಲಿ ನಡೆದ 'ಕನ್ನಡ ರಾಜ್ಯೋತ್ಸವ' ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಾಸು, ಅಂದು ಗಣ್ಯರಿಗೆ ಸನ್ಮಾನ ಮಾಡುವಾಗ ಜಿಲ್ಲಾಡಳಿತ ನೀಡಿದ ಸ್ಮರಣಿಕೆ ಅಷ್ಟೇನು ಉತ್ತಮವಾಗಿಲ್ಲ ಎಂದು ಅಸಮಾಧಾನ ಹೊರಹಾಕಿದ್ದಲ್ಲದೇ, ಎಲ್ಲಾ 30 ಗಣ್ಯರಿಗೂ ತಮ್ಮ ಸ್ವಂತ ಹಣದಲ್ಲಿ ತಲಾ 5 ಸಾವಿರ ರೂ. ಚೆಕ್ ಅನ್ನು ವೇದಿಕೆಯಲ್ಲೇ ನೀಡುವ ಮೂಲಕ ಗೌರವ ಸಲ್ಲಿಸಿದರು. ಜಿಲ್ಲಾ ರಾಜ್ಯೋತ್ಸವ ಪುರಸ್ಕೃತರಿಗೆ ನಗದು ನೀಡಿರುವ ಏಕೈಕ ಸನ್ನಿವೇಶ ಇದು ಮಾತ್ರವೇ ಆಗಿದೆ. ಆ ನಂತರ ಅದು ಮುಂದುವರೆಯಲಿಲ್ಲ.

ರಾಜಕೀಯ ಸಂಭಾವಿತರು: ರಾಜಕಾರಣವೆಂದರೆ ಹಲವಾರು ಸನ್ನಿವೇಶಗಳಲ್ಲಿ ತಮ್ಮ ಮನಃಸಾಕ್ಷಿಗೆ ವಿರುದ್ಧವಾಗಿ ಮಾತನಾಡಬೇಕಾಗುತ್ತದೆ. ರಾಜಕೀಯ ಲಾಭಕ್ಕಾಗಿ ಪಕ್ಷಗಳನ್ನೂ ಬದಲಿಸಬೇಕಾಗುತ್ತದೆ. ಇದು ನಡೆದುಕೊಂಡು ಬಂದಿದೆ. ಆದರೆ, ವಾಸು ಅವರು ಎಂತಹ ಸನ್ನಿವೇಶದಲ್ಲೂ ತಮ್ಮ ಮನಸಾಕ್ಷಿಗೆ ವಿರುದ್ಧವಾಗಿ ಮಾತನಾಡಿದವರಲ್ಲ. ಅವರೋರ್ವ ಸುಸಂಸ್ಕೃತ ರಾಜಕಾರಣಿಯಾಗಿದ್ದರು. ಯಾರ ಮನಸ್ಸಿಗೂ ನೋವಾಗುವಂತೆ ಅವರು ಮಾತನಾಡುತ್ತಿರಲಿಲ್ಲ. ಹಾಗೆಂದ ಮಾತ್ರಕ್ಕೆ ಯಾರನ್ನೂ ವಿನಾಕಾರಣ ಓಲೈಸುತ್ತಿರಲಿಲ್ಲ. ತಮ್ಮ ಮಾತಿನಿಂದ ರಾಜಕೀಯವಾಗಿ ತಮಗೆ ತೊಂದರೆಯಾಗುತ್ತದೆ ಎಂದು ತಿಳಿದಿದ್ದರೂ ಕೂಡ ಯಾವುದೇ ವಿಷಯವನ್ನು ನೇರವಾಗಿ ಮಾತನಾಡುವ ನೇರ ನುಡಿಯ ವ್ಯಕ್ತಿ ಅವರಾಗಿದ್ದರು.

ಪಕ್ಷ ನಿಷ್ಠೆ: ಹಲವು ಬಾರಿ ಟಿಕೆಟ್ ತಪ್ಪಿಸಿದರೂ, ಆರಂಭದಿಂದ ಕೊನೆಯವರೆಗೂ ವಾಸು ಕಾಂಗ್ರೆಸ್ಸಿಗರಾಗೇ ಉಳಿದಿದ್ದರು. ಪಕ್ಷದಲ್ಲಿ ತಮಗೆ ಸ್ಥಾನಮಾನ ಕೈತಪ್ಪಿದಾಗಲೂ ಕೂಡ ಅವರು ಪಕ್ಷ ನಿಷ್ಠೆಯನ್ನಂತೂ ಬದಲಿಸಲಿಲ್ಲ. ಅವರ ಪುತ್ರನೇ ಬಿಜೆಪಿ ಸೇರಿ, ವಿಧಾನಸಭೆ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗಲೂ ಕೂಡ ವಾಸು, ಪುತ್ರ ವಾತ್ಸಲ್ಯ ತೋರದೆ ರಾಜಕೀಯವಾಗಿ ತಮ್ಮ ನಿಷ್ಠೆಯನ್ನು ಕಾಂಗ್ರೆಸ್‌ಗೇ ಪ್ರದರ್ಶಿಸಿದ್ದರು.

ಕಳೆದ ವರ್ಷ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದ ಮೈಸೂರು ವಿವಿಯ ಪ್ರಸಾರಾಂಗದ ನಿವೃತ್ತ ನಿರ್ದೇಶಕ ಪ್ರೊ. ಸಿ.ನಾಗಣ್ಣ ಮತ್ತು ಖ್ಯಾತ ಸಾಹಿತಿ ಕಬ್ಬಿನಾಲೆ ವಸಂತಕುಮಾರ್ ಭಾರದ್ವಾಜ್ ಅವರನ್ನು ತಮ್ಮ ಮನೆಗೆ ಕರೆಸಿಕೊಂಡು ಆತ್ಮೀಯವಾಗಿ ಅಭಿನಂದಿಸುವ ಮೂಲಕ ತಮಗಿರುವ ಸಾಹಿತ್ಯಾಸಕ್ತಿಯನ್ನು ಪ್ರದರ್ಶಿಸಿ ಭಾಷಣ ಮಾಡಿದ್ದರು. ಇದುವೇ ಅವರು ನಡೆಸಿದ ಕೊನೆಯ ಕಾರ್ಯಕ್ರಮವಾಗಿತ್ತು.


ಮಕ್ಕಳ ಚಿತ್ರಕಥೆ

ಕಳ್ಳನನ್ನು ಪತ್ತೆ ಹಚ್ಚಿದ ಬೀರಬಲ್

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಒಮ್ಮೆ ಒಬ್ಬ ವಿದೇಶಿಯನು ದೆಹಲಿಗೆ ಒಂದು ಕೆಲಸದ ಸಂಬಂಧವಾಗಿ ಬಂದ. ನಗರದಲ್ಲಿ ಆತ ಒಂದು ಸುಂದರವಾದ ಹಂಸವನ್ನು ಕಂಡ. ಆತ ಅದನ್ನು ಮೆಚ್ಚಿ ನೂರು ಚಿನ್ನದ ನಾಣ್ಯಗಳನ್ನು ಕೊಟ್ಟು ಖರೀದಿಸಿದ.




ಆದರೆ ಆತನು ಕೊಂಡ ಹಂಸವು ಮೂರು ದಿನಗಳಲ್ಲಿ ಕಳುವಾಯಿತು. ಆತ ಚಕ್ರವರ್ತಿಯ ಆಸ್ಥಾನಕ್ಕೆ ಬಂದು ನ್ಯಾಯ ಬೇಡಿದ. ಆತನ ದೂರನ್ನು ಕೇಳಿದ ಚಕ್ರವರ್ತಿ, ಆತನ ಸೇವಕರಿಗೆ ಹೇಳಿ ಕಳುಹಿಸಿದ. ಬಹಳಷ್ಟು ಜನರನ್ನು ವಿಚಾರಣೆಗೆ ಗುರಿಪಡಿಸಲಾಯಿತು.



ಕಳ್ಳನಾರೆಂಬುದು ಮಾತ್ರ ಪತ್ತೆಯಾಗಲಿಲ್ಲ. ಈ ವೇಳೆಗೆ ಆ ವಿದೇಶಿ ವ್ಯಕ್ತಿಯೂ ಸಹ ತನ್ನ ಹಂಸವನ್ನು ವಾಪಸು ಪಡೆಯುವ ಆಸೆಯನ್ನು ಕೈ ಬಿಟ್ಟಿದ್ದ. ಆ ವೇಳೆಗೆ ಸರಿಯಾಗಿ ಬೀರಬಲ್ ಆಸ್ಥಾನಕ್ಕೆ ಬಂದ.



ನಡೆದ ವಿಷಯವನ್ನರಿತು ಅವನು ಪ್ರತಿಯೊಬ್ಬ ವ್ಯಕ್ತಿಯನ್ನೂ ಬಹು ಎಚ್ಚರಿಕೆಯಿಂದ ಗಮನಿಸಿದ. ನಂತರ ಹೇಳಿದ "ಕಳ್ಳ ಬಹಳ ಬುದ್ಧಿವಂತ.... ಅವನು ಹಂಸವನ್ನು ತಿಂದಿದ್ದೇ ಅಲ್ಲದೆ ಇಲ್ಲಿಗೆ ಅದರ ಪುಕ್ಕಗಳನ್ನು ತನ್ನ ಟೋಪಿಗೆ ಸಿಕ್ಕಿಸಿಕೊಂಡು ಬಂದಿದ್ದಾನೆ ಶಹಭಾಷ್...!!!" ಎಂದ.



ತಕ್ಷಣ ಹಂಸವನ್ನು ಕೊಂದಿದ್ದ ಕಳ್ಳ ತನ್ನ ಟೋಪಿಯನ್ನು ಮುಟ್ಟಿ ನೋಡಿಕೊಂಡ. ಏಕೆಂದರೆ ಅವನಿಗೆ ಆಕಸ್ಮಿಕವಾಗಿ ಅದರ ಪುಕ್ಕ ತನ್ನ ಟೋಪಿಗೆ ಸಿಕ್ಕಿಕೊಂಡಿದೆಯೇನೋ ಎಂಬ ಅನುಮಾನ ಉಂಟಾಯಿತು. ಬೀರಬಲ್ಲ ಈ ಕಳ್ಳನ ಚಲನವಲನವನ್ನು ಗಮನಿಸಿದ.



ಕೂಡಲೆ ಬೀರಬಲ್ಲ ಅವನನ್ನು ಹಿಡಿದೆಳೆದು "ಇವನೇ ಕಳ್ಳ...!" ಎಂದು ಹೇಳಿದ. ಚೆನ್ನಾಗಿ ಏಟು ತಿಂದ ನಂತರ ಕಳ್ಳ ತನ್ನ ತಪ್ಪನ್ನು ಒಪ್ಪಿಕೊಂಡ.



ವಾರಭವಿಷ್ಯ

10.3.2024 ರಿಂದ 16.3.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕುಂಭ, ಮೀನ, ಚಂದ್ರ–ಕುಂಭ, ಮೀನ, ಮೇಷ, ವೃಷಭ, ಕುಜ–ಮಕರ, ಕುಂಭ, ಬುಧ–ಮೀನ, ಗುರು–ಮೇಷ, ಶುಕ್ರ–ಕುಂಭ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಚಂದ್ರ ಸಂಚಾರ ಶುಭವಿದೆ. ನಿರೀಕ್ಷಿತ ಹಣ ಕೈ ಸೇರುವುದು. ಯುವತಿಯರ ಸ್ನೇಹ ಉಂಟಾಗುವುದು. ನೂತನ ವಸ್ತ್ರಾಭರಣ ಖರೀದಿಸುವಿರಿ. ಹೊಸ ಮಿತ್ರರ ಪರಿಚಯವೂ ಆಗುವುದು. ಲಾಭದಲ್ಲಿ ರವಿ ಸಂಚಾರದ ಪರಿಣಾಮ ಸರ್ಕಾರಿ ಕೆಲಸ ಕಾರ್ಯಗಳು ಶೀಘ್ರಗತಿಯಲ್ಲಿ ಸಾಗುವುದು. ವ್ಯಯಸ್ಥ ರಾಹುವಿನಿಂದ ಪರ ಸ್ಥಳಕ್ಕೆ ಪ್ರಯಾಣ, ಅಲ್ಲಿ ಕಷ್ಟ ಕೋಟಲೆಗೆ ಗುರಿಯಾಗುವಿರಿ.

ಶ್ರೀ ಗಣೇಶನಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ–4.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಸಾಫ್ಟ್‌ವೇರ್ ವೃತ್ತಿಯವರಿಗೆ ಕಂಪನಿ ಬದಲಾವಣೆಯಿಂದ ಉನ್ನತಿ. ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಕೈತುಂಬಾ ಕೆಲಸ ಹಾಗೂ ಧನಲಾಭ. ಸ್ನೇಹಿತರ ಸಹಕಾರದಿಂದ ಉತ್ತಮ ಸ್ಥಾನ ಲಭಿಸುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ನಿರಾಸಕ್ತಿ, ನಿರೀಕ್ಷಿತ ಸ್ಥಾನ ದೊರೆಯದೆ ಬೇಸರ. ಕೆಲಸವಿಲ್ಲದ ಅಲೆದಾಟಗಳಿಂದ ದೇಹಕ್ಕೆ ಆಯಾಸ. ಅಪರಿಚಿತರೊಂದಿಗೆ ನಿಮ್ಮ ಬ್ಯಾಂಕ್ ಅಕೌಂಟ್ ವಿವರ ಹಂಚಿಕೊಳ್ಳಬೇಡಿ.

ಶ್ರೀದೇವೀ ಆರಾಧನೆ. ಶುಭ ಸಂಖ್ಯೆ–3.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ನಿಮ್ಮ ಸ್ವಂತ ಕೆಲಸಗಳನ್ನು ಶ್ರದ್ಧಾಪೂರ್ವಕವಾಗಿ ಸಂಪನ್ನಗೊಳಿಸಿಕೊಳ್ಳಿ. ಇದಕ್ಕೆ ಗ್ರಹಗಳ ಪೂರಕ ಬೆಂಬಲವಿದೆ. ಮೃಗಶಿರ ನಕ್ಷತ್ರದವರಿಗೆ ವಿಶೇಷ ಸ್ಥಾನ ಲಾಭ ಲಭಿಸಲಿದೆ. ಕೃಷಿ ಸಂಬಂಧಿ ವಸ್ತು ಮಾರಾಟಗಾರರಿಗೆ ದ್ವಿಗುಣ ಲಾಭವಾಗುವುದು. ದಸ್ತಾವೇಜ್ ಬರಹಗಾರರಿಗೆ ಹೆಚ್ಚಿನ ಲಾಭ. ಮನೆಯಲ್ಲಿ ಮಂಗಳಕಾರ್ಯ ಜರುಗುವುದು. ಪುಣ್ಯಕ್ಷೇತ್ರಕ್ಕೆ ತೆರಳುವ ಸಂಭವಿದೆ.

ಶ್ರೀರಾಮ ದರ್ಶನ. ಶುಭ ಸಂಖ್ಯೆ–3.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

